ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ | 45 | ಏಪ್ರಿಲ್ 27 ಶನಿವಾರ 2024

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 45 | ಸಂಚಿಕೆ: 12 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಮೈಸೂರು–ಕೊಡಗಿನಲ್ಲಿ ಶೇ.70.33, ಮಂಡ್ಯದಲ್ಲಿ ಶೇ.81.48, ಚಾ.ನಗರದಲ್ಲಿ ಶೇ.76.59, ಹಾಸನದಲ್ಲಿ ಶೇ.77.51ರಷ್ಟು

ಶಾಂತಿಯುತ ಮತದಾನ

- ಬಿಸಿಲಿನ ತಾಪದ ಭೀತಿ; ಬೆಳಗ್ಗೆಯೇ ಮತದಾನ
- ಮಧ್ಯಾಹ್ನದ ನಂತರ ಭಣಗುಟ್ಟಿದ ಮತಗಟ್ಟೆಗಳು
- ಸೂಕ್ಷ್ಮ ಮತಗಟ್ಟೆಗಳಲ್ಲಿ ಸಿಸಿಟಿವಿ ಕ್ಯಾಮರಾ ಅಳವಡಿಕೆ
- ಮತಗಟ್ಟೆಗಳ ಬಳಿ ಪ್ರಚಾರ ನಿಷಿದ್ಧ; ಪೊಲೀಸರ ಎಚ್ಚರ



ಯದುವೀರ್ | ಎಂ.ಲಕ್ಷ್ಮಣ | ಬಾಲರಾಜ್ | ಸುನೀಲ್ ಬೋಸ್ | ಕುಮಾರಸ್ವಾಮಿ | ಸ್ಟಾರ್ ಚಂದ್ರು | ಪ್ರಜ್ವಲ್ ರೇವಣ್ಣ | ಶ್ರೇಯಸ್ ಪಟೇಲ್

ಮೈಸೂರು, ಏ.26(ಬಿಎಲ್‌ಯು)– ಕರ್ನಾಟಕದಲ್ಲಿ ಇಂದು ನಡೆದ ಮೊದಲ ಹಂತದ ಲೋಕಸಭಾ ಚುನಾವಣೆಯಲ್ಲಿ ತೀವ್ರ ಹಣಾಹಣಿ ಏರ್ಪಟ್ಟಿದ್ದ ಮೈಸೂರು–ಕೊಡಗು, ಮಂಡ್ಯ, ಚಾಮರಾಜನಗರ ಹಾಗೂ ಹಾಸನ ಲೋಕಸಭಾ ಕ್ಷೇತ್ರಗಳಲ್ಲಿ ಯಾವುದೇ ಅಹಿತಕರ ಘಟನೆಗಳು ನಡೆಯದೆ ಶಾಂತಿಯುತ ಮತದಾನವಾಗಿದೆ. ಆದರೆ ಚಾಮರಾಜನಗರ ಕ್ಷೇತ್ರದ ಇಂಡಿಗನತ್ತ ಗ್ರಾಮದಲ್ಲಿ ಗ್ರಾಮಸ್ಥರು ಮತಗಟ್ಟೆಯನ್ನು ಧ್ವಂಸ ಮಾಡಿರುವ ಪ್ರಕರಣ ವರದಿಯಾಗಿದೆ. ಇಷ್ಟು ಬಾರಿ ನಡೆದಿರುವ ಚುನಾವಣೆಗಳಲ್ಲಿ ಇದೇ ಮೊದಲ ಬಾರಿಗೆ ಸುಡು ಬೇಸಿಗೆ ಬಿಸಿಲಿನ ದಾಖಲೆಯ ಉಷ್ಣಾಂಶದ ನಡುವೆ ಮತದಾರರು ಉತ್ಸಾಹದಿಂದ ಮತ ಚಲಾಯಿಸಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ತವರು ಜಿಲ್ಲೆ ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದಲ್ಲಿ ಶೇ. 70.33ರಷ್ಟು ಮತದಾನ ನಡೆದಿದ್ದರೆ, ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಸ್ಪರ್ಧೆಯಿಂದ ತೀವ್ರ ಪೈಪೋಟಿ ಏರ್ಪಟ್ಟಿರುವ ಮಂಡ್ಯ ಲೋಕಸಭಾ ಕ್ಷೇತ್ರದಲ್ಲಿ ಅತ್ಯಧಿಕ ಶೇ.81.48ರಷ್ಟು ಮತದಾರರು ತಮ್ಮ ಹಕ್ಕು ಚಲಾವಣೆ ಮಾಡಿದರು. ಸಮಾಜ ಕಲ್ಯಾಣ ಸಚಿವ ಡಾ. ಹೆಚ್.ಸಿ.ಮಹದೇವಪ್ಪ ಪುತ್ರ ಸುನೀಲ್ ಬೋಸ್ ಸ್ಪರ್ಧಿಸಿರುವ ಚಾಮರಾಜನಗರ ಲೋಕಸಭಾ ಕ್ಷೇತ್ರದಲ್ಲಿ ಶೇ.76.59ರಷ್ಟು ಮತ ಚಲಾವಣೆಯಾದರೆ, ಮಾಜಿ ಪ್ರಧಾನ ಮಂತ್ರಿ ಹೆಚ್.ಡಿ.ದೇವೇಗೌಡರ ತವರು ಕ್ಷೇತ್ರ ಹಾಸನದಲ್ಲಿ ಶೇ.77.51ರಷ್ಟು ಮತದಾರರು ತಮ್ಮ ಹಕ್ಕು ಚಲಾಯಿಸಿದರು.

ಇಲ್ಲಿ ತನಕ ಹಲವು ವಿಧಾನಸಭಾ ಹಾಗೂ ಲೋಕಸಭಾ ಚುನಾವಣೆ ನಡೆದಿದೆ. ಆದರೆ ಇದೇ ಮೊದಲ ಬಾರಿ ಸುಡು ಬೇಸಿಗೆ ಬಿಸಿಲಿನಿಂದ ದಾಖಲೆಯ 40 ಡಿಗ್ರಿ ಸೆಲ್ಸಿಯಸ್‌ನಷ್ಟು ಉಷ್ಣಾಂಶದಲ್ಲೂ ಮತದಾರರು ಮತದಾನ ತಮ್ಮ ಹಕ್ಕು ಎಂದು ಭಾವಿಸಿ ಉತ್ಸಾಹದಿಂದ ● 7ನೇ ಪುಟಕ್ಕೆ



ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಮತಗಟ್ಟೆಯೊಂದರಲ್ಲಿ ಮತ ಚಲಾಯಿಸಲು ಸರದಿ ಸಾಲಿನಲ್ಲಿ ನಿಂತಿರುವ ಮತದಾರರು.



ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು



ಸಿದ್ದರಾಮಯ್ಯ



ನಿರ್ಮಲಾ ಸೀತಾರಾಮನ್

ರಾಜ್ಯದ 14 ಕ್ಷೇತ್ರಗಳಲ್ಲಿ ಶೇ.69.23 ಮತದಾನ


- ರಾಜಕೀಯ ಗಣ್ಯಾತಿ ಗಣ್ಯರು, ಸಿನಿ ತಾರೆಯರು ಉತ್ಸಾಹದಿಂದ ಮತ ಚಲಾವಣೆ
- ಹಲವೆಡೆ ಮತದಾನ ಬಹಿಷ್ಕಾರ; ಚಾಮರಾಜನಗರ ಲೋಕಸಭಾ ಕ್ಷೇತ್ರ ವ್ಯಾಪ್ತಿ ಇಂಡಿಗನತ್ತ ಗ್ರಾಮದಲ್ಲಿ ಮತಯಂತ್ರ ಧ್ವಂಸ

ಬೆಂಗಳೂರು, ಏ.26(ಕೆಎಂಶಿ)– ರಾಜ್ಯದಲ್ಲಿ ಇಂದು ನಡೆದ ಮೊದಲ ಹಂತದ 14 ಲೋಕಸಭಾ ಕ್ಷೇತ್ರಗಳ ಚುನಾವಣೆಯಲ್ಲಿ ಚಾಮರಾಜನಗರ ಘಟನೆ ಹೊರತುಪಡಿಸಿ, ಉಳಿದಂತೆ ಮತದಾನ ಬಹುತೇಕ ಶಾಂತಿಯುತವಾಗಿದ್ದು, ಶೇಕಡ 69.23ರಷ್ಟು ಮತದಾನವಾಗಿದೆ.

ರಾಜ್ಯ ರಾಜಧಾನಿಯ ಮೂರೂ ಕ್ಷೇತ್ರಗಳಲ್ಲೂ ಅತೀ ಕಡಿಮೆ ಪ್ರಮಾಣದಲ್ಲಿ ಮತದಾನ ನಡೆದಿದ್ದರೆ, ಉಳಿದ ಕ್ಷೇತ್ರಗಳಲ್ಲಿ ಬಿಸಿಲಿನ ಬೇಗೆಯ ನಡುವೆಯೂ ಮತದಾರರು ಉತ್ಸಾಹದಿಂದ ಮತ ಚಲಾಯಿಸಿರುವುದು ಕಂಡು ಬಂದಿದೆ.

ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಸ್ಪರ್ಧಿಸಿರುವ ಮಂಡ್ಯ ಲೋಕಸಭಾ ಕ್ಷೇತ್ರದಲ್ಲಿ ಅತೀ ಹೆಚ್ಚು ಎಂದರೆ ಶೇ.81.48ರಷ್ಟು ಮತದಾನವಾಗಿದೆ. ಈ ಕ್ಷೇತ್ರದಲ್ಲಿ 2019ರ ಚುನಾವಣೆಯಲ್ಲಿ ಶೇ.84.75ರಷ್ಟು ಮತದಾನ ನಡೆದಿತ್ತು. ಅತೀ ಕಡಿಮೆ ಎಂದರೆ ಬೆಂಗಳೂರು ದಕ್ಷಿಣ ಕ್ಷೇತ್ರದಲ್ಲಿ ಶೇ.53.15ರಷ್ಟು ಮತದಾನವಾಗಿದೆ. ಈ ಕ್ಷೇತ್ರದಲ್ಲಿ 2019ರ ಚುನಾವಣೆಯಲ್ಲಿ ಶೇ.53.73ರಷ್ಟು ಮತ ಚಲಾವಣೆಯಾಗಿತ್ತು. ಮೈಸೂರು–ಕೊಡಗು ಕ್ಷೇತ್ರದಲ್ಲಿ ಶೇ.70.33ರಷ್ಟು ಮತದಾನವಾಗಿದ್ದು, 2019ರ ಚುನಾವಣೆಯಲ್ಲಿ ಶೇ.69.51ರಷ್ಟು ಮತ ಚಲಾವಣೆಯಾಗಿತ್ತು. ಚಾಮರಾಜನಗರ ಲೋಕಸಭಾ ಕ್ಷೇತ್ರದಲ್ಲಿ ಶೇ. 76.59ರಷ್ಟು ಮತ ಚಲಾವಣೆಯಾಗಿದ್ದು, 2019ರ ಚುನಾವಣೆಯಲ್ಲಿ ಶೇ.75.35ರಷ್ಟು ಮತ ಚಲಾವಣೆಯಾಗಿತ್ತು. ಹಾಸನ ಲೋಕಸಭಾ ಕ್ಷೇತ್ರದಲ್ಲಿ ಶೇ.77.51ರಷ್ಟು ಮತದಾನವಾಗಿದ್ದು, 2019ರಲ್ಲಿ ಶೇ.77.35ರಷ್ಟು ಮತದಾನವಾಗಿತ್ತು.

ಉಡುಪಿ–ಚಿಕ್ಕಮಗಳೂರು ಕ್ಷೇತ್ರದಲ್ಲಿ ಶೇ.76.06ರಷ್ಟು ಮತ ಚಲಾವಣೆಯಾಗಿದ್ದು, 2019ರಲ್ಲಿ ಶೇ.76.07ರಷ್ಟು ಮತದಾನವಾಗಿತ್ತು. ದಕ್ಷಿಣ ಕನ್ನಡ ಕ್ಷೇತ್ರದಲ್ಲಿ ಶೇ.77.43ರಷ್ಟು ಮತದಾನವಾಗಿದ್ದು, 2019ರಲ್ಲಿ ಶೇ.77.99ರಷ್ಟು ಮತ ಚಲಾವಣೆಯಾಗಿತ್ತು. ಚಿತ್ರದುರ್ಗ ಕ್ಷೇತ್ರದಲ್ಲಿ ಶೇ.73.51ರಷ್ಟು ಮತದಾನ ನಡೆದಿದ್ದು, 2019ರಲ್ಲಿ ಶೇ.70.80ರಷ್ಟು ಮತ ಚಲಾವಣೆಯಾಗಿತ್ತು. ತುಮಕೂರು ಕ್ಷೇತ್ರದಲ್ಲಿ ಶೇ.77.70ರಷ್ಟು ಮತದಾನವಾಗಿದ್ದು, 2019ರಲ್ಲಿ 77.43ರಷ್ಟು ಮತದಾನ ನಡೆದಿತ್ತು. ಬೆಂಗಳೂರು ಗ್ರಾಮಾಂತರ ಕ್ಷೇತ್ರದಲ್ಲಿ ಶೇ.67.29ರಷ್ಟು ಮತ ಚಲಾವಣೆಯಾಗಿದ್ದು, 2019ರಲ್ಲಿ ಶೇ.64.98ರಷ್ಟು ಮತದಾನವಾಗಿತ್ತು. ಬೆಂಗಳೂರು ಉತ್ತರ ಕ್ಷೇತ್ರದಲ್ಲಿ ಶೇ.54.42ರಷ್ಟು ಮತ ಚಲಾವಣೆಯಾಗಿದ್ದು, 2019ರಲ್ಲಿ ಶೇ.54.76ರಷ್ಟು ● 9ನೇ ಪುಟಕ್ಕೆ



ಇನ್ಫೋಸಿಸ್ ಡಾ.ಸುಧಾಮೂರ್ತಿ ಮತ ಚಲಾಯಿಸಿದರು.

ಕ್ಷೇತ್ರವಾರು ಮತದಾನ ಪ್ರಮಾಣ

ಉಡುಪಿ ಚಿಕ್ಕಮಗಳೂರು	76.06%
ಹಾಸನ	77.51%
ದಕ್ಷಿಣ ಕನ್ನಡ	77.43%
ಚಿತ್ರದುರ್ಗ	73.11%
ತುಮಕೂರು	77.70%
ಮಂಡ್ಯ	81.48%
ಮೈಸೂರು–ಕೊಡಗು	70.33%
ಚಾಮರಾಜನಗರ	76.59%
ಬೆಂಗಳೂರು ಗ್ರಾ.	67.29%
ಬೆಂಗಳೂರು ಉ.	54.42%
ಬೆಂಗಳೂರು ಸೆಂಟ್ರಲ್	52.81%
ಬೆಂಗಳೂರು ದಕ್ಷಿಣ	53.15%
ಚಿಕ್ಕಬಳ್ಳಾಪುರ	76.82%
ಕೋಲಾರ	78.07%

ಮೂಲಸೌಕರ್ಯ ವಂಚಿತ ಗ್ರಾಮಸ್ಥರು, ಅಧಿಕಾರಿಗಳ ನಡುವೆ ಘರ್ಷಣೆ; ಮತಯಂತ್ರ ಧ್ವಂಸ; ಲಾಠಿ ಪ್ರಹಾರ

ಮಲೆಮಹದೇಶ್ವರಬೆಟ್ಟದಂಚಿನ ಗ್ರಾಮದಲ್ಲಿ ಘಟನೆ; ಕಲ್ಲು ತೂರಾಟದಲ್ಲಿ ಅಧಿಕಾರಿಗಳಿಗೆ ಗಾಯ; ಚುನಾವಣಾ ಆಯೋಗಕ್ಕೆ ವರದಿ; ಮರು ಮತದಾನ ಸಂಭವ



ಹನೂರು, ಏ.26–ಚುನಾವಣಾ ಬಹಿಷ್ಕಾರ ಘೋಷಿಸಿದ್ದ ಗ್ರಾಮಸ್ಥರು, ಮತಗಟ್ಟೆ ಅಧಿಕಾರಿಗಳು ಹಾಗೂ ಪೊಲೀಸರ ಮೇಲೆ ಕಲ್ಲು ತೂರಾಟ ನಡೆಸಿ, ಮತಗಟ್ಟೆಯನ್ನು ಧ್ವಂಸಗೊಳಿಸಿರುವ ಘಟನೆ ಚಾಮರಾಜನಗರ ಲೋಕಸಭಾ ಕ್ಷೇತ್ರಕ್ಕೊಳಪಟ್ಟ ಹನೂರು ತಾಲೂಕಿನ ಮಲೆಮಹದೇಶ್ವರಬೆಟ್ಟದ ಕಾಡಂಚಿನ ಗ್ರಾಮ ಇಂಡಿಗನತ್ತದಲ್ಲಿ ಶುಕ್ರವಾರ ಮಧ್ಯಾಹ್ನ ನಡೆದಿದೆ.

ರೊಚ್ಚಿಗೆದ್ದ ಗ್ರಾಮಸ್ಥರು ಇವಿಎಂ ಯಂತ್ರ, ಮತಗಟ್ಟೆಯ ಬಾಗಿಲು, ಮೇಜು–ಕುರ್ಚಿ, ಇತರೆ ಪರಿಕರಗಳನ್ನು ಧ್ವಂಸ ಮಾಡಿದ್ದಾರೆ. ಈ ವೇಳೆ ಪೊಲೀಸರು ಲಘು ಲಾಠಿ ಪ್ರಹಾರ ನಡೆಸಿದ್ದಾರೆ. ಇದೇ ವೇಳೆ ಕಲ್ಲು ತೂರಾಟವೂ ನಡೆದು ತಹಸೀಲ್ದಾರ್, ಪೊಲೀಸ್ ಅಧಿಕಾರಿಗಳು ಹಾಗೂ ಮಹಿಳೆಯರೂ ಸೇರಿದಂತೆ ಗ್ರಾಮಸ್ಥರು ಗಾಯಗೊಂಡಿದ್ದಾರೆ.

ಘಟನೆಯ ವಿವರ: ತಮ್ಮ ಗ್ರಾಮಗಳಿಗೆ ರಸ್ತೆ ಕುಡಿಯುವ ನೀರು, ವಿದ್ಯುತ್ ಸೌಲಭ್ಯ ಸೇರಿದಂತೆ ಮೂಲ ಸೌಕರ್ಯಗಳನ್ನು ಕಲ್ಪಿಸಿಲ್ಲ ಎಂದು ಆರೋಪಿಸಿ ಮಹದೇಶ್ವರ ಬೆಟ್ಟ ವ್ಯಾಪ್ತಿಯ ಇಂಡಿಗನತ್ತ, ತೇಕಣೆ, ಮೆಂದಾರೆ, ತುಳಸಿಕೆರೆ ಹಾಗೂ ಪಡಸಲನತ್ತ ಗ್ರಾಮಗಳ ಮತದಾರರು ಮತದಾನ ಬಹಿಷ್ಕಾರ ಮಾಡಿದ್ದರು. ಇಂದು ಮಧ್ಯಾಹ್ನ 1 ಗಂಟೆಯಾದರೂ ಗ್ರಾಮಸ್ಥರು ಮತಗಟ್ಟೆಗಳತ್ತ ಬಾರದ ಹಿನ್ನೆಲೆಯಲ್ಲಿ ಅವರ ಮನವೊಲಿಕೆಗೆ ಅಧಿಕಾರಿಗಳು ಮುಂದಾಗಿದ್ದಾರೆ. ಬಹುತೇಕ ಗ್ರಾಮಸ್ಥರು ಮತದಾನಕ್ಕೆ ● 9ನೇ ಪುಟಕ್ಕೆ

> “ಇಂಡಿಗನತ್ತ ಗ್ರಾಮದಲ್ಲಿ ಮತಗಟ್ಟೆಗೆ ನುಗ್ಗಿ ಇವಿಎಂ ಧ್ವಂಸ ಮಾಡಿದ ಪ್ರಕರಣ ಸಂಬಂಧ ಪ್ರತಿಕ್ರಿಯೆ ನೀಡಿದ ಅವರು, ಘಟನೆಯ ಸಂಬಂಧ ಚುನಾವಣಾ ಆಯೋಗಕ್ಕೆ ವರದಿ ನೀಡಲಾಗಿದೆ. ಮರುಮತದಾನಕ್ಕೆ ನಿರ್ದೇಶನ ನೀಡುವ ನಿರೀಕ್ಷೆ ಇದೆ. ರಸ್ತೆ ಹಾಗೂ ವಿದ್ಯುತ್ ಸೌಕರ್ಯ, ಕುಡಿಯುವ ನೀರಿನ ಸಮಸ್ಯೆ ಕುರಿತು ಈ ಹಿಂದೆಯೇ ಗ್ರಾಮಸ್ಥರು ಬೇಡಿಕೆ ಇಟ್ಟಿದ್ದರು. ಈ ಐದು ಗ್ರಾಮಗಳಲ್ಲಿ 550 ಮತಗಳಿವೆ. ಇಂದು ಮತದಾನ ಮಾಡಲೇಬಾರದು ಎಂದು ಗ್ರಾಮಸ್ಥರು ನಿರ್ಧರಿಸಿದ್ದರು. ಈ ಹಿನ್ನೆಲೆ ನಮ್ಮ ಚುನಾವಣಾ ಅಧಿಕಾರಿಗಳು ಮನವೊಲಿಸಲು ಹೋಗಿದ್ದಾರೆ. ಈ ವೇಳೆ ಮೆಂದಾರೆ ಹಾಡಿಯ 20 ಜನ ಮತದಾನ ಮಾಡಲು ಒಪ್ಪಿದ್ದರು. ಈ ಸಂದರ್ಭದಲ್ಲಿ ಎರಡು ಗುಂಪುಗಳ ನಡುವೆ ವಾಗ್ವಾದ ಸೃಷ್ಟಿಯಾಯಿತು. ಗಲಾಟೆ ಹೆಚ್ಚಾಗುತ್ತಿದ್ದಂತೆ ಲಘು ಲಾಠಿ ಪ್ರಹಾರ ಮಾಡಲಾಗಿದೆ. ಪೊಲೀಸರು ಹಾಗೂ ಚುನಾವಣಾ ಅಧಿಕಾರಿಗಳ ಮೇಲೆ ಕಲ್ಲು ತೂರಾಟ ಮಾಡಿದ್ದಾರೆ. ಸದ್ಯ ಪ್ರಕರಣ ದಾಖಲಿಸಿಕೊಂಡು ಮುಂದಿನ ಕ್ರಮ ತೆಗೆದುಕೊಳ್ಳಲಾಗಿದೆ. ಈ ಘಟನೆ ಬಗ್ಗೆ ಎಫ್‌ಐಆರ್ ಸಮೇತ ಕೇಂದ್ರ ಚುನಾವಣಾ ಆಯೋಗಕ್ಕೆ ವರದಿ ಸಲ್ಲಿಸಲಾಗಿದೆ. ಇಂಡಿಗನತ್ತ ಗ್ರಾಮದಲ್ಲಿ ಮರು ಮತದಾನಕ್ಕೆ ಆಯೋಗ ನಿರ್ದೇಶನ ನೀಡುವ ನಿರೀಕ್ಷೆ ಇದೆ.
> – ಶಿಲ್ಪನಾಗ್, ಜಿಲ್ಲಾ ಚುನಾವಣಾಧಿಕಾರಿ ಹಾಗೂ ಜಿಲ್ಲಾಧಿಕಾರಿ, ಚಾಮರಾಜನಗರ





ಮತದಾರರ ಪಟ್ಟಿಯಲ್ಲಿ ಬದುಕಿರುವವರ ಹೆಸರಿಲ್ಲ; ಆದರೆ ಮೃತಪಟ್ಟವರಿಗೆ ಮತವಿದೆ!

ಮೈಸೂರು,ಏ.26(ಪಿಎಂ)– ಮತದಾರರ ಪಟ್ಟಿಯಲ್ಲಿ ಬದುಕಿರುವವರ ಹೆಸರೇ ನಾಪತ್ತೆ! ಮತ್ತೊಂದು ವಿಧಾನಸಭಾ ಕ್ಷೇತ್ರದ ಮತಗಟ್ಟೆಯೊಂದಕ್ಕೆ ಹೆಸರು ವರ್ಗಾಯಿಸಿರುವ, ಜೊತೆಗೆ ಕಳೆದ 10–15 ವರ್ಷಗಳ ಹಿಂದೆಯೇ ಮೃತಪಟ್ಟವರ ಹೆಸರುಗಳು ಪಟ್ಟಿಯಲ್ಲಿ ರಾರಾಜಿಸುತ್ತಿವೆ!! ಚಾಮರಾಜ ವಿಧಾನಸಭಾ ಕ್ಷೇತ್ರದ ಮತಗಟ್ಟೆ ಸಂಖ್ಯೆ 171ರ ಸಂಬಂಧ ಕೇಳಿಬಂದ ದೂರುಗಳಿವು.

ಮೈಸೂರಿನ ಸರಸ್ವತಿಪುರಂನ ಸಾಹುಕಾರ್ ಚನ್ನಯ್ಯ ರಸ್ತೆಯಲ್ಲಿರುವ ದಿ ಇನ್‌ಸ್ಟಿಟ್ಯೂಟ್ ಆಫ್ ಎಜುಕೇಷನ್ ಟ್ರಸ್ಟ್ ವಿದ್ಯಾಸಂಸ್ಥೆ ಕಟ್ಟಡದಲ್ಲಿ ಈ 171 ಸಂಖ್ಯೆಯ ಮತಗಟ್ಟೆ ಇದ್ದು, ಇದಕ್ಕೆ ಸಂಬಂಧಿಸಿದ ಮತದಾರರ ಪಟ್ಟಿಯಲ್ಲಿ ಗಂಗೋತ್ರಿ ಬಡಾವಣೆ ನಿವಾಸಿ ಉಮೇಶ್‌ರಾವ್ ಅವರ ಹೆಸರು ನಾಪತ್ತೆಯಾಗಿದೆ. ಬದಲಾಗಿ ಅವರ ಹೆಸರನ್ನು ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಬಂಡಿಪಾಳ್ಯದ ಶಾಲೆಯೊಂದರ ಮತಗಟ್ಟೆಗೆ ವರ್ಗಾಯಿಸಲಾಗಿದೆ. ಜೊತೆಗೆ ಇವರ ಪತ್ನಿ ಸೌಮ್ಯ ಅವರ ಹೆಸರು ಸದರಿ ಮತಗಟ್ಟೆಯ ಮತದಾರರ ಪಟ್ಟಿಯಿಂದಲೇ ನಾಪತ್ತೆಯಾಗಿದೆ.

ಮತಗಟ್ಟೆ ಬಳಿ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಉಮೇಶ್ ರಾವ್, ಕಳೆದ ವಿಧಾನಸಭಾ ಚುನಾವಣೆಯಲ್ಲಿ ಇದೇ ಮತಗಟ್ಟೆಯಲ್ಲೇ ನಾನು ವೋಟು ಮಾಡಿದ್ದು, ಈ ಬಾರಿ ಬಂಡಿಪಾಳ್ಯದ ಮತಗಟ್ಟೆಯೊಂದಕ್ಕೆ ವರ್ಗಾಯಿಸಲಾಗಿದೆ. ನನ್ನ ಪತ್ನಿ ಕಳೆದ ಬಾರಿಯ ವಿಧಾನಸಭಾ ಚುನಾವಣೆಯಲ್ಲಿ ಇದೇ ಮತಗಟ್ಟೆಯಲ್ಲಿ ಮತ ಚಲಾಯಿಸಿದ್ದರು. ಆದರೆ ಈ ಬಾರಿ ಮತದಾರರ ಪಟ್ಟಿಯಲ್ಲಿ ಅವರ ಹೆಸರೇ ನಾಪತ್ತೆಯಾಗಿದೆ. ಹೀಗಾಗಿ ಅವರು ಮತದಾನದಿಂದಲೇ ವಂಚಿತರಾಗಿದ್ದಾರೆ ಎಂದು ಬೇಸರ ವ್ಯಕ್ತಪಡಿಸಿದರು. ಗಂಗೋತ್ರಿ ಬಡಾವಣೆ ನಿವಾಸಿ ಜಯರಾಮ್ ಮಾತನಾಡಿ, ಕಳೆದ 10–15 ವರ್ಷಗಳ ಹಿಂದೆಯೇ ಮೃತಪಟ್ಟವರ ಹೆಸರುಗಳನ್ನು ಈ ಮತದಾರರ ಪಟ್ಟಿಯಲ್ಲಿ ಉಳಿಸಲಾಗಿದೆ. ಹೀಗಾದರೆ ಶೇಕಡವಾರು ಮತದಾನದ ಪ್ರಮಾಣದಲ್ಲಿ ಕುಸಿತ ಉಂಟಾದಂತಲ್ಲವೇ? ಎಂದು ಪ್ರಶ್ನಿಸಿದರು.

ಬಿಎಲ್‌ಓಗಳು ಸರಿಯಾದ ರೀತಿಯಲ್ಲಿ ಸರ್ವೇ ಮಾಡಿಲ್ಲವೆಂದು ಸ್ಥಳದಲ್ಲಿದ್ದ ಹಲವು ಮತದಾರರು ಕಿಡಿಕಾರಿದರು. ಹೀಗಾದರೆ ಶೇಕಡವಾರು ಮತದಾನ ಪ್ರಮಾಣದಲ್ಲಿ ನೈಜ ಅಂಶ ಕಾಣಲು ಸಾಧ್ಯವಿಲ್ಲ. ಇದು ಕೇವಲ ಇದೊಂದೇ ಮತಗಟ್ಟೆಗೆ ಸಂಬಂಧಿಸಿದಂತೆ ಉಂಟಾಗಿರುವ ಸಮಸ್ಯೆ ಮಾತ್ರವಲ್ಲ, ಹುಡುಕಿದರೆ ಇಂತಹ ಸಮಸ್ಯೆ ಸಾಕಷ್ಟು ಕಾಣಸಿಗಲಿವೆ ಎಂದು ಸ್ಥಳದಲ್ಲಿದ್ದ ಮತದಾರರು ಬೇಸರ ವ್ಯಕ್ತಪಡಿಸಿದರು.

ಹಾಸನದಲ್ಲಿ ನಾವೇ ಗೆಲ್ಲುತ್ತೇವೆ
ಮಾಜಿ ಪ್ರಧಾನಿ ದೇವೇಗೌಡರ ವಿಶ್ವಾಸ



ಹೊಳೆನರಸೀಪುರ, ಏ.26– ರಾಜ್ಯದಲ್ಲಿ ಎನ್‌ಡಿಎ ಮಿತ್ರ ಕೂಟಕ್ಕೆ ಉತ್ತಮ ವಾತಾವರಣವಿದ್ದು, ಹಾಸನ ಕ್ಷೇತ್ರದಲ್ಲೂ ಜೆಡಿಎಸ್ ಗೆಲ್ಲುತ್ತದೆ ಎಂದು ಹೆಚ್.ಡಿ. ದೇವೇಗೌಡರು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಪತ್ನಿ ಚನ್ನಮ್ಮ ಅವರೊಂದಿಗೆ ತಾಲೂಕಿನ ಪಡವಲಹಿಪ್ಪೆ ಮತಗಟ್ಟೆಗೆ ತೆರಳಿ ಮತ ಚಲಾಯಿಸಿದ ಬಳಿಕ ಮಾಧ್ಯಮದವರೊಂದಿಗೆ ಮಾತನಾಡಿ, ಪ್ರಜ್ವಲ್ ರೇವಣ್ಣ ಗೆಲುವಿನ ವಿಶ್ವಾಸ ವ್ಯಕ್ತಪಡಿಸಿದರು.

ಸಂವಿಧಾನದತ್ತ ಯಾವುದೇ ಆಡಳಿತಾತ್ಮಕ ಅಧಿಕಾರ ಹೊಂದಿಲ್ಲದ ರಾಹುಲ್ ಗಾಂಧಿ ಹಾಗೂ ಮಲ್ಲಿಕಾರ್ಜುನ ಖರ್ಗೆ ವಿದ್ಯಾವಂತ ಯುವಕರಿಗೆ 1 ಲಕ್ಷ ರೂ., ಬಡಕುಟುಂಬದ ಮಹಿಳೆಗೆ 1 ಲಕ್ಷ, ದಿನಕ್ಕೆ 400 ಕನಿಷ್ಠ ವೇತನ ನೀಡುವುದಾಗಿ ಸುಳ್ಳು ಭರವಸೆಯ ಪತ್ರವನ್ನು ಜನರಿಗೆ ಹಂಚುತ್ತಿದ್ದಾರೆ. ಆದರೆ ಅವರ ಈ ಪ್ರಯತ್ನ ಖಂಡಿತವಾಗಿ ಫಲಿಸುವುದಿಲ್ಲ ಎಂದರು. ರಾಜ್ಯದಲ್ಲಿ ಇಂತಹ ಭರವಸೆ ನೀಡಿರುವ ಇವರು ತಮಿಳುನಾಡು, ಕೇರಳ ಹಾಗೂ ಇನ್ನಿತರ ರಾಜ್ಯಗಳ ಜನರಿಗೆ ಈ ಭರವಸೆ ನೀಡಿಲ್ಲ. ಈ ಬಗ್ಗೆ ನಾನು ಆಯಾಯ ರಾಜ್ಯಗಳಿಗೆ ಕರೆ ಮಾಡಿ ದೃಢಪಡಿಸಿಕೊಂಡಿದ್ದೇನೆ. ಕಾಂಗ್ರೆಸ್‌ನವರು ಜನರಿಗೆ ಸುಳ್ಳು ಹೇಳುತ್ತಿದ್ದಾರೆ ಎಂದೇ ಅರ್ಥ ಎಂದು ಅಭಿಪ್ರಾಯಿಸಿದರು. ರಾಹುಲ್ ಗಾಂಧಿ ಉತ್ತರ ಪ್ರದೇಶದ ಅಮೇಥಿಯಲ್ಲಿ ಗೆಲ್ಲಲು ಸಾಧ್ಯವಿಲ್ಲ ಎಂಬ ಕಾರಣದಿಂದಲೇ ಕೇರಳದಿಂದ ಮತ್ತೆ ಸ್ಪರ್ಧಿಸುತ್ತಿದ್ದಾರೆ. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಹತಾಶರಾಗಿ ನಮ್ಮ ಪಕ್ಷಕ್ಕೆ ಮತ ನೀಡದವರು ನಾನು ಸತ್ತಾಗ ಮಣ್ಣನ್ನಾದರೂ ಹಾಕಿ ಎಂದು ಹತಾಶ ಭಾಷಣ ಮಾಡಿದರು. ಈಗ ಅವರೇ ಸುಳ್ಳು ಬಿತ್ತಿಪತ್ರ ಹಂಚುತ್ತಿದ್ದಾರೆ ಎಂದು ಟೀಕಿಸಿದರು.

ಇದಕ್ಕೂ ಮುನ್ನ ದೇವೇಗೌಡರು ಹರದನಹಳ್ಳಿ ಶಿವ ದೇವಾಲಯ, ಪಡವಲಹಿಪ್ಪೆಯ ಕೋದಂಡರಾಮ ಹಾಗೂ ಈಶ್ವರನ ದೇವಾಲಯದಲ್ಲಿ ಪೂಜೆ ಸಲ್ಲಿಸಿದರು. ಅಭ್ಯರ್ಥಿ ಪ್ರಜ್ವಲ್ ರೇವಣ್ಣ, ಶಾಸಕ ಹೆಚ್.ಡಿ.ರೇವಣ್ಣ, ಭವಾನಿ ರೇವಣ್ಣ, ಸೂರಜ್ ರೇವಣ್ಣ ಪಡವಲಹಿಪ್ಪೆಯ ಮತಗಟ್ಟೆಯಲ್ಲಿ ಮತ ಚಲಾಯಿಸಿದರು.

ಮೈಸೂರು ಮಣಿಪಾಲ ಆಸ್ಪತ್ರೆ ವೈದ್ಯರ ಸುತ್ತ್ಯಾರ್ಹ ನೆರವು; ಚಿಕಿತ್ಸೆಗೆ ದಾಖಲಾಗಿರುವ ಐದಾರು ಮಂದಿ ಸುರಕ್ಷಿತ ಮತ ಚಲಾವಣೆ













ಮೈಸೂರು, ಏ.26(ಎಸ್‌ಬಿಡಿ)– ಮೈಸೂರಿನ ಮಣಿಪಾಲ ಆಸ್ಪತ್ರೆಯಲ್ಲಿ ದಾಖಲಾಗಿದ್ದ ಐದಾರು ಮಂದಿ ಆಸ್ಪತ್ರೆ ನೆರವಿನೊಂದಿಗೆ ಮತ ಚಲಾಯಿಸುವ ಮೂಲಕ ಮಾದರಿಯಾಗಿದ್ದಾರೆ.

ತೀವ್ರ ತಲೆನೋವು ಹಾಗೂ ಎಪಿಸ್ಟಾಕ್ಸಿಸ್ ಸಮಸ್ಯೆಯಿಂದ ಮಣಿಪಾಲ ಆಸ್ಪತ್ರೆಗೆ ದಾಖಲಾಗಿರುವ ಶ್ರೀಮತಿ ಶೋಭಾರಾಣಿ ಅವರು ಚಿಕಿತ್ಸೆ ನೀಡುತ್ತಿರುವ ಇಎನ್‌ಟಿ ಕನ್ಸಲ್ಟೆಂಟ್ ಡಾ.ಹೆಚ್.ಎ.ದಥಾತ್ರಿ ಅವರ ಸಲಹೆ ಪಡೆದು ಆಸ್ಪತ್ರೆ ವತಿಯಿಂದ ಒದಗಿಸಿದ್ದ ಸಾರಿಗೆ ಹಾಗೂ ವೈದ್ಯಕೀಯ ನೆರವಿನೊಂದಿಗೆ ಮತಗಟ್ಟೆಗೆ ತೆರಳಿ ಹಕ್ಕು ಚಲಾಯಿಸಿದ್ದಾರೆ.

ಲ್ಯಾಪರೊಸ್ಕೋಪಿಕ್ ಶಸ್ತ್ರಚಿಕಿತ್ಸೆಗೆ ಒಳಗಾಗಿರುವ 53 ವರ್ಷದ ಶ್ರೀಮತಿ ಅರುಣಾ ಯಾದವ ಅವರು ಪ್ರಸೂತಿ ಕನ್ಸಲ್ಟೆಂಟ್ ಡಾ.ಕೆ.ಜಿ.ಅಮೂಲ್ಯ ಅವರ ಸಲಹೆ ಪಡೆದು ವೈದ್ಯಕೀಯ ನೆರವಿನೊಂದಿಗೆ ಮತಗಟ್ಟೆಗೆ ತೆರಳಿ ಮತ ಹಾಕಿದ್ದಾರೆ. ಜ್ವರ ಮತ್ತು ಶ್ವಾಸಕೋಶದ ಸೋಂಕಿನಿಂದ ಬಳಲುತ್ತಿರುವ 28 ವರ್ಷದ ಶ್ರೀಮತಿ ನವ್ಯಶ್ರೀ ಅವರು ತಮಗೆ ಚಿಕಿತ್ಸೆ ನೀಡುತ್ತಿರುವ ಶ್ವಾಶಕೋಶಶಾಸ್ತ್ರದ ಕನ್ಸಲ್ಟೆಂಟ್ ಡಾ.ಆರ್.ಲಕ್ಷ್ಮೀ ನರಸಿಂಹನ್ ಅವರ ಸಲಹೆ ಮೇರೆಗೆ ಮತಗಟ್ಟೆಗೆ ತೆರಳಿ ಹಕ್ಕು ಚಲಾಯಿಸಿ, ಆಸ್ಪತ್ರೆಗೆ ವಾಪಸ್ಸಾಗಿದ್ದಾರೆ.

ಹೀಗೆ ಆಸ್ಪತ್ರೆಯ ಐದಾರು ರೋಗಿಗಳು ಮತ ಚಲಾಯಿಸಿದ್ದಾರೆ. ಹಾಗೆಯೇ ಕರ್ತವ್ಯದ ನಡುವೆಯೂ ವೈದ್ಯರು ಬಿಡುವು ಮಾಡಿಕೊಂಡು ಮತಗಟ್ಟೆಗೆ ತೆರಳಿ ಮತದಾನ ಮಾಡಿದ್ದಾರೆ.

ಮತದಾನ ಪ್ರತಿಯೊಬ್ಬ ನಾಗರಿಕರ ಹಕ್ಕು. ಆದರೆ ಮನೆಯಲ್ಲಿರುವ ಆರೋಗ್ಯವಂತರೂ ಮತಗಟ್ಟೆಗೆ ತೆರಳಲು ಉದಾಸೀನ ಮಾಡುತ್ತಾರೆ. ಹೀಗಿರುವಾಗ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವವರು ಮತ ಚಲಾಯಿಸುವ ಇಂಗಿತ ವ್ಯಕ್ತಪಡಿಸಿದಾಗ ಅದಕ್ಕೆ ಆಸ್ಪತ್ರೆಯವರು ಒತ್ತಾಸೆಯಾಗಿದ್ದಾರೆ. ಸಂಬಂಧಿಸಿದ ವೈದ್ಯರು ಪರೀಕ್ಷೆ ನಡೆಸಿ, ಮತಗಟ್ಟೆಗೆ ತೆರಳಲು ಅನುಮತಿ ನೀಡಿದ ನಂತರ ಆಡಳಿತ ಮಂಡಳಿಯವರು ಅಗತ್ಯ ವಾಹನ ಹಾಗೂ ವೈದ್ಯಕೀಯ ನೆರವು ಕಲ್ಪಿಸಿದ್ದು ನಿಜಕ್ಕೂ ಶ್ಲಾಘನೀಯ.

ಚಿಕ್ಕಬಳ್ಳಾಪುರದಲ್ಲಿ 4.8 ಕೋಟಿ ರೂ. ವಶ: ಬಿಜೆಪಿ ಅಭ್ಯರ್ಥಿ ಡಾ. ಕೆ.ಸುಧಾಕರ್ ವಿರುದ್ಧ ಪ್ರಕರಣ ದಾಖಲು



ಬೆಂಗಳೂರು, ಏ.26– ಆಪ್ತನ ಮನೆಯಲ್ಲಿ 4.8 ಕೋಟಿ ರೂಪಾಯಿ ವಶಕ್ಕೆ ಸಂಬಂಧಿಸಿದಂತೆ ಚಿಕ್ಕಬಳ್ಳಾಪುರ ಬಿಜೆಪಿ ಅಭ್ಯರ್ಥಿ ಡಾ. ಕೆ. ಸುಧಾಕರ್ ವಿರುದ್ಧ ಮತದಾರರಿಗೆ ಆಮಿಷ ಹಾಗೂ ಅನಗತ್ಯ ಪ್ರಭಾವದ ಆರೋಪದ ಮೇಲೆ ಚುನಾವಣಾ ಆಯೋಗ ಪ್ರಕರಣ ದಾಖಲಿಸಿದೆ.

ಚಿಕ್ಕಬಳ್ಳಾಪುರದ ಫ್ಲೈಯಿಂಗ್ ಸ್ಕ್ವಾಡ್ಸ್ ತಂಡ (ಎಫ್‌ಎಸ್‌ಟಿ) ಕ್ರಮ ಕೈಗೊಂಡಿರುವುದಾಗಿ ಚುನಾವಣಾ ಆಯೋಗ ಮಾಹಿತಿ ನೀಡಿದೆ. 4.8 ಕೋಟಿ ಮೌಲ್ಯದ ನಗದನ್ನು ಚಿಕ್ಕಬಳ್ಳಾಪುರದ ಎಫ್‌ಎಸ್‌ಟಿ ವಶಪಡಿಸಿಕೊಂಡಿರುವುದಾಗಿ ಶುಕ್ರವಾರ ರಾಜ್ಯ ಮುಖ್ಯ ಚುನಾವಣಾಧಿಕಾರಿ ತಿಳಿಸಿದ್ದಾರೆ.

ಚಿಕ್ಕಬಳ್ಳಾಪುರ ಕ್ಷೇತ್ರದ ರಾಜ್ಯ ಕಣ್ಗಾವಲು ತಂಡವು ಬಿಜೆಪಿ ಅಭ್ಯರ್ಥಿ ಕೆ.ಸುಧಾಕರ್ ವಿರುದ್ಧ ಏಪ್ರಿಲ್ 25ರಂದು ಮಾದನಾಯಕನಹಳ್ಳಿ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಿಸಿದೆ. ಮತದಾರರಿಗೆ ಆಮಿಷ ಮತ್ತು ಅನಗತ್ಯ ಪ್ರಭಾವ ಆರೋಪಕ್ಕಾಗಿ ಜನತಾ ಪ್ರಾತಿನಿಧ್ಯ ಕಾಯ್ದೆ ಮತ್ತು ಐಪಿಸಿಯ ಸಂಬಂಧಿತ ಸೆಕ್ಷನ್‌ಗಳ ಅಡಿಯಲ್ಲಿ ಪ್ರಕರಣ ದಾಖಲಿಸಲಾಗಿದೆ ಎಂದು ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಆಯೋಗ ಪೋಸ್ಟ್ ಮಾಡಿದೆ.



ಮೈಸೂರು ತಾಲೂಕು ಕಡಕೊಳ ಗ್ರಾಮದ ಮತಗಟ್ಟೆಯಲ್ಲಿ ಜನರು ಅತ್ಯಂತ ಉತ್ಸಾಹದಿಂದ ಸರತಿ ಸಾಲಿನಲ್ಲಿ ನಿಂತು ಮತ ಚಲಾಯಿಸಿದರು.

ಧರ್ಮದ ಆಧಾರದಲ್ಲಿ ಮತ ಯಾಚನೆ; ಸಂಸದ ತೇಜಸ್ವಿ ಸೂರ್ಯ ವಿರುದ್ಧ ಪ್ರಕರಣ ದಾಖಲು



ಬೆಂಗಳೂರು: ಧರ್ಮದ ಆಧಾರದ ಮೇಲೆ ಮತ ಯಾಚಿಸಿದ ಆರೋಪದಡಿ ಬೆಂಗಳೂರು ದಕ್ಷಿಣ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ತೇಜಸ್ವಿ ಸೂರ್ಯ ವಿರುದ್ಧ ಚುನಾವಣಾ ಆಯೋಗ ಗುರುವಾರ ಪ್ರಕರಣ ದಾಖಲಿಸಿಕೊಂಡಿದೆ.

ಲೋಕಸಭೆ ಚುನಾವಣೆಯ 2ನೇ ಹಂತದ ಮತದಾನ ನಡೆಯುತ್ತಿದ್ದು, ಕರ್ನಾಟಕದಲ್ಲಿ ಮೊದಲ ಹಂತದ ಮತದಾನ ಮುಕ್ತಾಯವಾಗಿದೆ. ಇಂದು ಬೆಂಗಳೂರಿನಲ್ಲಿ ಮತದಾನ ಮಾಡಿದ ಸಂಸದ ತೇಜಸ್ವಿ ಸೂರ್ಯ, ಹೆಚ್ಚೆಚ್ಚು ಸಂಖ್ಯೆಯಲ್ಲಿ ಮತದಾರರು ಮತಗಟ್ಟೆಗಳಿಗೆ ಬಂದು ಮತದಾನ ಮಾಡುವಂತೆ ಕೋರಿದ್ದರು.

ಆದರೆ ಇದರ ನಡುವೆಯೇ ಅವರು ಧರ್ಮದ ಆಧಾರದಲ್ಲಿ ಮತಯಾಚನೆ ಮಾಡಿದ್ದಾರೆ ಎಂಬ ಆರೋಪ ಕೇಳಿ ಬಂದಿದೆ. ಧರ್ಮದ (religion) ಆಧಾರದಲ್ಲಿ ಮತಯಾಚನೆ ಮಾಡಿದ ಆರೋಪ ಮೇರೆಗೆ ಬೆಂಗಳೂರು ದಕ್ಷಿಣ ಕ್ಷೇತ್ರದ ಬಿಜೆಪಿ ಸಂಸದ ತೇಜಸ್ವಿ ಸೂರ್ಯ ವಿರುದ್ಧ ಚುನಾವಣಾ ಆಯೋಗ ದೂರು ದಾಖಲಿಸಿದೆ. ಜನ ಪ್ರಾತಿನಿಧ್ಯ ಕಾಯ್ದೆ ಸೆಕ್ಷನ್ 123(3)ರ ಅಡಿ ಪ್ರಕರಣ ದಾಖಲಾಗಿದೆ. ಧರ್ಮದ ಆಧಾರದಲ್ಲಿ ಮತ ಯಾಚನೆ ಮತ್ತು ಈ ಕುರಿತು ವಿಡಿಯೊವೊಂದನ್ನು ಎಕ್ಸ್ (ಟ್ವಿಟರ್) ಖಾತೆಯಲ್ಲಿ ಹಂಚಿಕೊಂಡ ಹಿನ್ನೆಲೆಯಲ್ಲಿ ಜಯನಗರ ಪೊಲೀಸ್ ಠಾಣೆಯಲ್ಲಿ ಸೆಕ್ಷನ್ 123(3) ಅಡಿ ಪ್ರಕರಣ ದಾಖಲಾಗಿದೆ ಎಂದು ರಾಜ್ಯ ಮುಖ್ಯ ಚುನಾವಣಾ ಅಧಿಕಾರಿ ಮಾಹಿತಿ ನೀಡಿದ್ದಾರೆ.

ಮೊದಲ ಮತದಾನದ ನೆನಪಿಗಾಗಿ ಪ್ರತಿಯೊಬ್ಬರು ಗಿಡ ನೆಡಿ



ಮೈಸೂರು, ಏ. 26– ಮೊದಲ ಬಾರಿ ಮತದಾನ ಮಾಡಿದ ನೆನಪಿಗಾಗಿ ಪ್ರತಿಯೊಬ್ಬರು ಗಿಡವನ್ನು ನೆಡುವ ಮೂಲಕ ಹಬ್ಬದ ರೀತಿಯಲ್ಲಿ ಚುನಾವಣೆಯನ್ನು ಆಚರಿಸಬೇಕು. ಈ ನಿಟ್ಟಿನಲ್ಲಿ ಸೃಜನ್ ದಿನೇಶ್ ಅವರು ಕಳೆದ ವಿಧಾನಸಭೆಯ ಚುನಾವಣೆಯಲ್ಲಿ ಮೊದಲ ಮತದಾನದ ನೆನಪಿಗಾಗಿ ತಮ್ಮ ಮನೆ ಆವರಣದಲ್ಲಿ ಸಂಪಿಗೆ ಗಿಡ ನೆಡುವ ಮೂಲಕ ತಮ್ಮ ಮೊದಲ ಮತದಾನವನ್ನು ಈ ರೀತಿಯಲ್ಲಿ ಸಂಭ್ರಮಿಸಿದರು.

ಈಗ ಮತ್ತೊಂದು ಲೋಕಸಭಾ ಚುನಾವಣೆ ಬಂದಿದೆ. ಆ ದಿನ ಅವರು ಹಾಕಿದ ಗಿಡ ಈಗ ಈ ಮಟ್ಟಿಗೆ ಬೆಳೆದಿದೆ. ಹಾಗಾಗಿ ಪ್ರತಿಯೊಬ್ಬರು ಈ ಚುನಾವಣೆಯಲ್ಲಿ ಯಾರು ಮೊದಲ ಮತದಾನ ಮಾಡುವರು ಅವರೆಲ್ಲರೂ ಕಡ್ಡಾಯವಾಗಿ ತಮ್ಮ ಮನೆಯ ಆವರಣ ಅಥವಾ ಎಲ್ಲಾದರೂ ಒಂದು ಗಿಡವನ್ನು ನೆಟ್ಟು ಆ ಗಿಡವನ್ನು ಪೋಷಿಸುವುದು ಆದ್ಯ ಕರ್ತವ್ಯ

ಪ್ರಸ್ತುತ ಸನ್ನಿವೇಶದಲ್ಲಿ ಪ್ರಕೃತಿ ಎಷ್ಟು ಮುಖ್ಯ ಎಂಬುದನ್ನು ಪದಗಳಲ್ಲಿ ಹೇಳಲು ಸಾಧ್ಯವಾಗುತ್ತಿಲ್ಲ. ಹಾಗಾಗಿ ಭಾರತದ ಬಹುದೊಡ್ಡ ಪ್ರಜಾಪ್ರಭುತ್ವದಲ್ಲಿ ಕಡ್ಡಾಯವಾಗಿ ಮತ ಹಾಕುವ ಮೂಲಕ ಸದೃಢ ರಾಷ್ಟ್ರವನ್ನು ನಿರ್ಮಾಣ ಮಾಡುವ ಜೊತೆಯಲ್ಲಿ ನಮ್ಮ ಪರಿಸರವನ್ನು ಮುಂದಿನ ತಲೆಮಾರಿಗೆ ಕಾದುಕೊಳ್ಳೋಣ. ಇದರ ಬಗ್ಗೆ ಯೋಚಿಸಿ ಚಿಂತಿಸಬೇಕು.

ಹಾಡಿ ಜನರಲ್ಲಿ ಮತದಾನ ಸಂಭ್ರಮ



ಪಕ್ಷಿರಾಜಪುರದ ಮತಗಟ್ಟೆಯಲ್ಲಿ ಕೊಟ್ಟಿಗೆ ಕಾವಲ್ ನಿವಾಸಿ ಬಸಮ್ಮ ಮತಚಲಾಯಿಸಿದರು.



ಮತದಾರರ ಪಟ್ಟಿಗೆ ಸೇರಲು ಮೂರು ವರ್ಷದ ಹಿಂದೆ ಅರ್ಜಿ ಸಲ್ಲಿಸಿದ್ದರೂ ಮತದಾನ ಮಾಡಲು ಅವಕಾಶ ಸಿಗದೇ ಇದ್ದ, ಹುಣಸೂರು ತಾಲೂಕಿನ ಡಾ.ಅಂಬೇಡ್ಕರ್‌ನಗರ ನಿವಾಸಿ 21 ವರ್ಷದ ಎನ್.ಅನಿತಾ ಇದೇ ಮೊದಲ ಬಾರಿಗೆ ಮತ ಚಲಾಯಿಸಿ, ಸಂಭ್ರಮಿಸಿದರು.



ಪಕ್ಷಿರಾಜಪುರದ ಸೌಂತ್ರಿ ಮಗಳೊಂದಿಗೆ ಮತದಾನಕ್ಕೆ ಸಜ್ಜಾಗಿರುವುದು.

ಮೈಸೂರು, ಏ.26(ಎಂಟಿವೈ)– ಹುಣಸೂರು, ಪಿರಿಯಾಪಟ್ಟಣ ಹಾಗೂ ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶ ಸೇರಿದಂತೆ ವಿವಿಧ ಹಾಡಿಗಳಲ್ಲಿ ಬುಡಕಟ್ಟು ಸಮುದಾಯ ಮತದಾನದಲ್ಲಿ ಉತ್ಸಾಹ ಪ್ರದರ್ಶಿಸಿತು.

ಹುಣಸೂರು ತಾಲೂಕಿನ ಪಕ್ಷಿರಾಜಪುರ, ಯಶೋಧರಪುರ, ಬಿಬಿಸಿ ಕಾಲೋನಿ, ನಲ್ಲೂರು ಪಾಲ, ನಾಗಾಪುರ ಹಾಡಿ, ಕಾವಲ್ ಹಾಡಿ, ನಾಗರಹೊಳೆ ಹಾಡಿ ಸೇರಿದಂತೆ ವಿವಿಧೆಡೆ ನೆಲೆಸಿರುವ ಬುಡಕಟ್ಟು ಸಮುದಾಯ, ಹಕ್ಕಿಪಿಕ್ಕಿ ಸಮುದಾಯ ಇನ್ನಿತರ ಪಂಗಡಗಳ ಆದಿವಾಸಿ ಜನರು ಬೆಳಗ್ಗಿನಿಂದಲೇ ತಮ್ಮ ತಮ್ಮ ಮತಗಟ್ಟೆಗಳಿಗೆ ಆಗಮಿಸಿ, ಮತ ಚಲಾಯಿಸಿದರು. ಬುಡಕಟ್ಟು ಮತದಾರರಿಗೆ ಯಾವ ಬೂತ್‌ಗಳಲ್ಲಿ ಮತ ಚಲಾಯಿಸಬೇಕು ಎಂಬ ಮಾಹಿತಿ ನೀಡಲು ಸ್ಥಳೀಯ ಆಶಾ ಕಾರ್ಯಕರ್ತೆಯರು ಹಾಗೂ ಸ್ವಯಂ ಸೇವಕರನ್ನು ನಿಯೋಜಿಸಲಾಗಿತ್ತು. ಬಹುತೇಕರು ಅನಕ್ಷರಸ್ಥರಾಗಿದ್ದ ಹಿನ್ನೆಲೆಯಲ್ಲಿ ಮತದಾರರ ಪಟ್ಟಿಯಲ್ಲಿ ತಮ್ಮ ಹೆಸರು ಇರುವಿಕೆಯನ್ನು ಖಚಿತಪಡಿಸಿಕೊಳ್ಳಲು ಪರದಾಡುತ್ತಿದ್ದ ದೃಶ್ಯ ಕಂಡು ಬಂದಿತು. ಈ ಹಿನ್ನೆಲೆಯಲ್ಲಿ ಮತದಾರರ ಸಹಾಯ ಡೆಸ್ಕ್‌ನ ನೆರವು ಪಡೆದು ಮತಚಲಾಯಿಸಿದರು.

ಹಾಡಿಗಳಲ್ಲಿ ವಾಸಿಸುವ ಹಿರಿಯ ನಾಗರಿಕರು, ಗರ್ಭಿಣಿಯರು, ವಿಕಲಚೇತನರು, ಬಾಣಂತಿಯರನ್ನು ಮತಗಟ್ಟೆಗಳಿಗೆ ಕರೆತರಲು ವಾಹನ ಸೌಲಭ್ಯ ಮಾಡಲಾಗಿತ್ತು. ಕೆಲವರಿಗೆ ಮತದಾನದ ಚೀಟಿ ದೊರೆತಿರಲಿಲ್ಲ, ಮತ್ತೆ ಕೆಲವರು ಮತದಾರರ ಗುರುತಿನ ಚೀಟಿ ತಂದಿರಲಿಲ್ಲ. ಇದರಿಂದಲೂ ಕೆಲಕಾಲ ಮತಗಟ್ಟೆ ಮುಂದೆ ಕಾಯುವ ಪರಿಸ್ಥಿತಿ ನಿರ್ಮಾಣವಾಗಿತ್ತು. ಸಹಾಯ ಡೆಸ್ಕ್ ಸಿಬ್ಬಂದಿಗಳು ಮತದಾರರ ಪಟ್ಟಿಯಲ್ಲಿ ಹೆಸರು ಪತ್ತೆ ಮಾಡಿ, ಸ್ಲಿಪ್ ನೀಡಿದ ಬಳಿಕವಷ್ಟೇ ಮತದಾನ ಮಾಡಲು ಸಾಧ್ಯವಾಯಿತು.

ಬುಡಕಟ್ಟು ಸಂಸ್ಕೃತಿ ಮೇಳೈಸಿದವು: ಹಾಡಿ ಜನರು ಮತದಾನ ಮಾಡಲು ನಾಗಾಪುರ ಹಾಡಿ, ನಲ್ಲೂರು ಪಾಲ ಹಾಡಿ ಸೇರಿದಂತೆ ವಿವಿಧೆಡೆ ನಿರ್ಮಿಸಲಾಗಿದ್ದ ಬುಡಕಟ್ಟು ಮತಗಟ್ಟೆಗಳಲ್ಲಿ ಬುಡಕಟ್ಟು ಸಂಸ್ಕೃತಿ ಮೇಳೈಸಿತು. ದಾರಿಯುದ್ದಕ್ಕೂ ತಳಿರು ತೋರಣ ಕಟ್ಟಿ ಅಲಂಕರಿಸಲಾಗಿತ್ತು. ಇದು ನೋಡುಗರ ಕಣ್ಮನ ಸೆಳೆಯುತ್ತಿತ್ತು.

ಬಿಸಿಲಿನ ಬೇಗೆ ತಣಿಸಿದ ಷರಬತ್ತು: ನಾಗರಹೊಳೆ ಕಾಡಂಚಿನ ಹಾಡಿ ನಾಗಾಪುರ ಹಾಡಿಯಲ್ಲಿರುವ ಸರ್ಕಾರಿ ವಾಲ್ಮೀಕಿ ಬುಡಕಟ್ಟು ಆಶ್ರಯ ಶಾಲೆಯಲ್ಲಿ ತೆರೆಯಲಾಗಿದ್ದ ಮತಗಟ್ಟೆಯಲ್ಲಿ ಆಶ್ರಮ ಶಾಲೆ ವತಿಯಿಂದ ಮತದಾನಕ್ಕೆ ಬರುವ ಬುಡಕಟ್ಟು ಸಮುದಾಯ ಜನರಿಗೆ ನಿಂಬೆಹಣ್ಣಿನ ಷರಬತ್ತು ನೀಡಲಾಯಿತು. ಬಿಸಿಲಿನ ಬೇಗೆ ಹೆಚ್ಚಾಗುತ್ತಿದ್ದಂತೆಯೇ ನಾಲ್ಕು ಕ್ಯಾನ್‌ಗಳಲ್ಲಿ ನಿಂಬೆಹಣ್ಣಿನ ಜ್ಯೂಸ್ ತಯಾರಿಸಿದ ಮತಗಟ್ಟೆ ಬಾಗಿಲ ಮುಂದೆ ಹಾಕಿದ್ದ ಚಪ್ಪರದಲ್ಲಿ ಷರಬತ್ತು ವಿತರಿಸಲಾಯಿತು.



ಹುಣಸೂರು ತಾಲೂಕಿನ ನಾಗಾಪುರ ಹಾಡಿಯಲ್ಲಿರುವ ಸರ್ಕಾರಿ ವಾಲ್ಮೀಕಿ ಬುಡಕಟ್ಟು ಆಶ್ರಯ ಶಾಲೆಯಲ್ಲಿ ಸ್ಥಾಪಿಸಲಾಗಿದ್ದ ಮತಗಟ್ಟೆಯಲ್ಲಿ ಬುಡಕಟ್ಟು ಸಮುದಾಯದ ಮತದಾರರಿಗೆ ಶಾಲೆಯ ವತಿಯಿಂದ ನಿಂಬೆಹಣ್ಣಿನ ಜ್ಯೂಸ್ ವಿತರಿಸಲಾಯಿತು.





ಮೊದಲ ಬಾರಿಗೆ ಮತ ಚಲಾಯಿಸಿದ ಬಿಳಿಕೆರೆ ಗ್ರಾಮದ ಹಾಜಿರಾ ಬಾನು ಹಾಗೂ ಕೀರ್ತನ.

ಆಕ್ಸಿಜನ್ ಮಾಸ್ಕ್ ಹಾಕಿಕೊಂಡು ಬಂದು ಮತದಾರರಿಂದ ವೋಟ್

ಬೆಂಗಳೂರು: ಉಸಿರಾಟದ ಸಮಸ್ಯೆಯ ನಡುವೆಯೂ ಕೆಲ ಮತದಾರರು ಆಕ್ಸಿಜನ್ ಮಾಸ್ಕ್ ಹಾಕಿಕೊಂಡು ಬಂದು ಮತದಾನ ಮಾಡಿ ಇತರರಿಗೆ ಮಾದರಿಯಾಗಿದ್ದಾರೆ. ಇಂಪ್ಯಾಕ್ಟ್ ಕಾಲೇಜ್ ಬೂತ್‌ನಲ್ಲಿ 62 ವರ್ಷದ ವೃದ್ಧರೊಬ್ಬರು ಉಸಿರಾಟ ಸಮಸ್ಯೆಯಿದ್ದರೂ ಮತ ಹಾಕುವ ಸಲುವಾಗಿ ಆಕ್ಸಿಜನ್ ಮಾಸ್ಕ್ ಹಾಕಿಕೊಂಡು ಬಂದು ಮತ ಹಾಕಿದ್ದಾರೆ.

ಇನ್ನೊಂದೆಡೆ ರಾಜಾಜಿನಗರ ಎರಡನೇ ಬ್ಲಾಕ್‌ನ ನಿವಾಸಿ ಗೀತಾ (83) ಕಳೆದ ಮೂರು ವರ್ಷಗಳಿಂದ ಆಕ್ಸಿಜನ್ ಕಾನ್ಸಂಟ್ರೇಟರ್ ಬಳಸುತ್ತಿದ್ದಾರೆ. ಇದೇ ವೇಳೆ ಅವರು ಹರಿದಾಸ ಸಾಹಿತ್ಯ ಕುರಿತು ಪಿಹೆಚ್‌ಡಿ ಮಾಡುತ್ತಿದ್ದಾರೆ. ಕಳೆದ ತಿಂಗಳು ಉತ್ತರಾಧಿಮಠದವರು ನಡೆಸಿದ ಹರಿದಾಸ ಸಾಹಿತ್ಯ ಪರೀಕ್ಷೆಯಲ್ಲಿ ಚಿನ್ನದ ಪದಕ ಗಳಿಸಿದ್ದಾರೆ. ಹರಿದಾಸ ಸಾಹಿತ್ಯ ಕುರಿತು ಪಾಠ ಮಾಡುತ್ತಾರೆ. ಚುನಾವಣಾ ಪ್ರಚಾರಕ್ಕೆ ಹೋದಾಗ ನಾನು ವೋಟು ಹಾಕಬೇಕು. ಆಕ್ಸಿಜನ್ ಸಿಲಿಂಡರ್ ಇರುವ ಆಂಬುಲೆನ್ಸ್ ವ್ಯವಸ್ಥೆ ಮಾಡು ಎಂದು ಕಟ್ಟಪ್ಪಣೆ ಮಾಡಿದರು. ಅದೀಗ ಜಾರಿಗೊಂಡಿದೆ. ಅದೇ ರೀತಿ ಗೀತಮ್ಮ ವೋಟು ಹಾಕಿ ಎರಡೂ ಕೈ ಎತ್ತಿ ಜೈ ಶ್ರೀರಾಮ್ ಎಂದಿದ್ದಾರೆ.

ಮತದಾನದ ಬಳಿಕ ತುಮಕೂರು, ಮಂಡ್ಯದಲ್ಲಿ ದುರಂತ ಅಂತ್ಯ ಕಂಡ ಮತದಾರರು!

ತುಮಕೂರು, ಏ.26–ಮತದಾನದ ಬಳಿಕ ದಿಢೀರನೆ ಕುಸಿದು ಬಿದ್ದು ಮತದಾರರೊಬ್ಬರು ಸ್ಥಳದಲ್ಲೇ ಸಾವನ್ನಪ್ಪಿದ ಘಟನೆ ತುಮಕೂರಿನಲ್ಲಿ ನಡೆದಿದೆ. ಮಯೂರ ಯುವ ವೇದಿಕೆಯ ಸದಸ್ಯ ಹೆಚ್.ಕೆ. ರಮೇಶ್, ಮೃತಪಟ್ಟವರು. ಇಂದು (ಏ.26) ನಗರದ ಎಸ್‌ಎಸ್ ಪುರಂ ಮತಗಟ್ಟೆಗೆ ಪತ್ನಿ ಸಮೇತ ಬಂದು ಮತ ಚಲಾಯಿಸಿದ್ದರು. ಬಳಿಕ ತಮ್ಮದೇ ಮಾಲೀಕತ್ವದ ಬಟ್ಟೆ ಅಂಗಡಿಯಲ್ಲಿದ್ದಾಗ ಕುಸಿದು ಬಿದ್ದು ಹೃದಯಾಘಾತದಿಂದ ಮೃತಪಟ್ಟಿದ್ದಾರೆ ಎಂದು ಶಂಕಿಸಲಾಗಿದೆ.

ಮತದಾನ ಬಳಿಕ ಸಾವನ್ನಪ್ಪಿದ ಅಜ್ಜ: ಮಂಡ್ಯ: ಮತದಾನದ ಬಳಿಕ ಮಂಡ್ಯ ಜಿಲ್ಲೆಯ ಮದ್ದೂರು ತಾಲೂಕಿನ ಚನ್ನೇಗೌಡನಹಳ್ಳಿಯ ಅಜ್ಜ ಮೃತಪಟ್ಟಿದ್ದಾರೆ. ಕುಂದೂರಯ್ಯ (87) ಸಾವನ್ನಪ್ಪಿರುವ ಅಜ್ಜ. ಕಾಲುನೋವಿನಿಂದ ಬಳಲುತ್ತಿದ್ದ ಕುಂದೂರಯ್ಯ ಅವರು, ಇಂದು ಬೆಳಗ್ಗೆಯೇ ಮತಗಟ್ಟೆಗೆ ತೆರಳಿ ಮತದಾನ ಮಾಡಿದ್ದರು. ಬಳಿಕ ಮನೆಗೆ ಬಂದಿದ್ದ ಮೇಲೆ ಅಜ್ಜ ದಿಢೀರ್ ಸಾವನ್ನಪ್ಪಿದ್ದಾರೆ.


ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

27.04.2024 ಶನಿವಾರ, ಮಳೆ ನಕ್ಷತ್ರ: ಭರಣಿ 27.04.2024 ರಿಂದ 10.05.2024
ಕ್ರೋಧಿ ನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ಚೈತ್ರ ಮಾಸ, ಕೃಷ್ಣ ಪಕ್ಷ,
ತಿಥಿ: ಬಿದಿಗೆ, ನಕ್ಷತ್ರ: ಅನೂರಾಧ, ರಾಹುಕಾಲ: ಬೆಳಗ್ಗೆ 10.30 ರಿಂದ 12 ರವರೆಗೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10ಕ್ಕೆ ಸಿ.ಎಫ್.ಟಿ.ಆರ್.ಐ ಶೋಧ ಅನುಶೋಧ –ಪ್ರಾಯೋಜಿತ ಕಾರ್ಯಕ್ರಮ, 6.40 ಪದ ಸಂಸ್ಕೃತಿ–ಡಾ. ಶ್ರೀಧರ ಹೆಗಡೆ ಭದ್ರನ್, 6.50 ರೈತರಿಗೆ ಸಲಹೆ, 7.15 "ಯಾರಿಗೂ ಕಾಣದ ಪ್ರವಾಸ ತಾಣ" ಮಾಲಿಕೆಯಲ್ಲಿ ಅಂತರಸಂತೆ ಕಬಿನಿ ಬಳಿಯ ಭೀಮನಕೊಲ್ಲಿಯ ಕುರಿತು ಮಾತನಾಡುತ್ತಾರೆ ಶ್ರೀಮತಿ ಶ್ರೀವಿದ್ಯಾಕಾಮತ್, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ–ಕೋವಿಲಾಡಿ ಆರ್.ಕಲಾ–ಹಾಡುಗಾರಿಕೆ, 11.00 ಮಿಶ್ರಮಾಧುರ್ಯ

ಮಧ್ಯಾಹ್ನ: 12.30ದೇವರ ನಾಮ, 12.45 ಜನಪದ ಸಂಗೀತ, 1.00 ಮತ ಹಾಕೋಣ ಬನ್ನಿ, 1.20 ಭಾವಗೀತೆ, 3.00 ಜನಪದ ಸಂಗೀತ, 3.30 ಮಕ್ಕಳ ಮಂಟಪ–ನಂದಗೋಕುಲ, ಪ್ರಸ್ತುತಿ–ಕೆ. ಬಿ. ಮೀನಾ, 4.00 ನಾಟಕ–ಫ್ಯಾಮಿಲಿ ಫೋಟೊ, ರಚನೆ– ಸುಬ್ರಾಯ ಜಿ. ಭಟ್, ನಿರ್ಮಾಣ–ಉಮೇಶ್ ಎಸ್.ಎಸ್., 4.30 ನೆನಪಿನಂಗಳ, 6.50 ಕೃಷಿರಂಗ–ವ್ಯವಸಾಯದ ತಮ ಅನುಭವ ಹಂಚಿಕೊಳ್ಳುತ್ತಾರೆ ಟಿ. ನರಸೀಪುರ ತಾಲೂಕು ರಂಗಸಮುದ್ರದ ಆರ್. ಎಸ್. ರಮಾನಂದ ಅವರೊಂದಿಗೆ ಸಂದರ್ಶನ. ಸಂದರ್ಶಕರು–ಎನ್. ಕೇಶವಮೂರ್ತಿ, 8.00 ಯುವವಾಣಿ, 10.00 ರಾಷ್ಟ್ರೀಯ ಸಂಗೀತ ಕಾರ್ಯಕ್ರಮ, ಪಂಡಿತ್ ಭೀಮಣ್ಣ ಜಾಧವ್ – ಸುಂದರಿ


- **ರಾಮ್‌ಸನ್ಸ್ ಬೊಂಬೆ ಮನೆ:** ದಸರೆ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10 ರಿಂದ ಸಂಜೆ 7ರವರೆಗೆ
- **ಸ್ವಾನಂದ ಯೋಗಶಾಲಾ ಮತ್ತು ವೆಲ್‌ನೆಸ್ ಸೆಂಟರ್, ಶ್ರೀ ವಾಸುದೇವ ಮಹಾರಾಜ್ ಫೌಂಡೇಷನ್** : ಸದ್ಗುರು ಶ್ರೀ ಶ್ರೀಧರ ಸ್ವಾಮಿಗಳ 51ನೇ ಆರಾಧನಾ ಮಹೋತ್ಸವ, ಸಮಾಜ ಸೇವಕ ಎನ್. ಶ್ರೀಧರ್ ದೀಕ್ಷಿತ್ ಅವರಿಗೆ ಸ್ವಾನಂದ ಸೇವಾರತ್ನ ಪ್ರಶಸ್ತಿ ಪ್ರದಾನ, ಉದ್ಘಾಟನೆ : ಮಾಜಿ ಮುಡಾ ಅಧ್ಯಕ್ಷ ಹೆಚ್.ವಿ. ರಾಜೀವ್, ಶ್ರೀಧರ ಸ್ವಾಮಿಗಳ ಭಾವಚಿತ್ರಕ್ಕೆ ಪುಷ್ಪಾರ್ಚನೆ : ಹಿರಿಯ ಸಮಾಜ ಸೇವಕ ಡಾ. ಕೆ. ರಘುರಾಮ್ ವಾಜಪೇಯಿ, ಅಧ್ಯಕ್ಷತೆ : ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಉಪಸ್ಥಿತರು : ಶ್ರೀಮತಿ ಉಮಾ ಪಾರ್ಥನಾಥ್, ಸಂಸ್ಕೃತ ವಿದುಷಿ ಕೆ. ಲೀಲಾ ಪ್ರಕಾಶ್, ಕಾಂಗ್ರೆಸ್ ಮುಖಂಡ ಎನ್.ಎಂ. ನವೀನ್ ಕುಮಾರ್, ಯೋಗ ಮತ್ತು ಆರೋಗ್ಯ ತಜ್ಞರಾದ ಡಾ. ನಂದಿನಿ ಮೂರ್ತಿ, ಹಿಮಾಲಯ ಪ್ರತಿಷ್ಠಾನ ಸಂಸ್ಥಾಪಕ ಎನ್. ಅನಂತ, ಸ್ಥಳ: ಸ್ವಾನಂದ ಯೋಗಶಾಲೆ ಆವರಣ, ಶ್ರೀ ರಾಘವೇಂದ್ರ ಸ್ವಾಮಿ ಮಠದ ಹತ್ತಿರ, ಕುವೆಂಪುನಗರ, ಸಂಜೆ 5ಕ್ಕೆ.
- **ಶ್ರೀರಾಮಕೃಷ್ಣ ಆಶ್ರಮ** : ಸ್ವಾಮಿ ಮಹೀಪಾಲಾನಂದ ಅವರಿಂದ ಉಪನ್ಯಾಸ, ಸ್ಥಳ: ಆಶ್ರಮದ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.
- **ಶ್ರೀ ರಾಮಸೇವಾ ಮಂಡಲಿ** : 71ನೇ ವರ್ಷದ ಶ್ರೀ ರಾಮೋತ್ಸವ, ಶ್ರೀ ಹನುಮಂತೋತ್ಸವ, ಸ್ಥಳ: ಶ್ರೀರಾಮ ಸೇವಾ ಮಂಡಲಿ, 9ನೇ ಅಡ್ಡ ರಸ್ತೆ, ವಿದ್ಯಾರಣ್ಯಪುರಂ, ಸಂಜೆ 6ಕ್ಕೆ.
- **ಶ್ರೀ ರಾಮಾಭ್ಯುದಯ ಸಭಾ, ಪಬ್ಲಿಕ್ ಚಾರಿಟಬಲ್ ಟ್ರಸ್ಟ್:** 134ನೇ ವರ್ಷದ ಶ್ರೀ ರಾಮೋತ್ಸವ, ಬೆಳಗ್ಗೆ 9.30ಕ್ಕೆ ಶ್ರೀ ರಾಮ ಪಟ್ಟಾಭಿಷೇಕ ಮತ್ತು ಅರ್ಚನೆ, ಶ್ರೀಮತಿ ವಸಂತ ವೆಂಕಟೇಶ್ ಅವರಿಂದ ಗಮಕ ವಾಚನ, ಕೃ. ರಾಮಚಂದ್ರ–ವ್ಯಾಖ್ಯಾನ, ಮಧ್ಯಾಹ್ನ 12.30ಕ್ಕೆ ಮಹಾಮಂಗಳಾರತಿ, ಮಧ್ಯಾಹ್ನ 1ಕ್ಕೆ ಪ್ರಸಾದ ವಿನಿಯೋಗ, ಸ್ಥಳ: ಶ್ರೀರಾಮಮಂದಿರ, ವಿನೋಬ ರಸ್ತೆ, ಶ್ರೀರಾಮಪೇಟೆ.
- **ಸುಯೋಗ್ ಆಸ್ಪತ್ರೆ** : ವೈದ್ಯರುಗಳಿಗೆ ಪುನರ್ ಶಿಕ್ಷಣ ಕಾರ್ಯಾಗಾರ, ಉದ್ಘಾಟನೆ ಮತ್ತು ಪ್ರಾಸ್ತಾವಿಕ: ಸುಯೋಗ್ ಆಸ್ಪತ್ರೆ ಅಧ್ಯಕ್ಷ ಡಾ. ಎಸ್.ಪಿ.ಯೋಗಣ್ಣ, ಉಪನ್ಯಾಸಕರು : ಡಾ. ಅಭಿಶೇಕ್, ಡಾ. ಅಭಿಲಾಶ್, ಸ್ಥಳ: ಹೋಟೆಲ್ ಲಿ ರುಚಿ, ಹುಣಸೂರು ರಸ್ತೆ, ಸಂಜೆ 7ಕ್ಕೆ.

ಮೈಸೂರು ಮಿತ್ರ


ಮೈಸೂರಲ್ಲಿ ಸಾಧು-ಸಂತರು, ಗಣ್ಯರು, ಜನಪ್ರತಿನಿಧಿಗಳಿಂದ ಮತದಾನ



ಸುತ್ತೂರು ಶ್ರೀಗಳು


ಜಯರಾಜೇಂದ್ರ ಶ್ರೀಗಳು


ಗಣಪತಿ ಸಚ್ಚಿದಾನಂದ ಶ್ರೀಗಳು


ವಿಜಯಾನಂದತೀರ್ಥ ಶ್ರೀಗಳು


ಚಿದಾನಂದ ಶ್ರೀಗಳು


ಯೋಗಾನರಸಿಂಹ ಸ್ವಾಮಿ ದೇವಸ್ಥಾನದ ವ್ಯವಸ್ಥಾಪಕ ಶ್ರೀನಿವಾಸ


ಚಾಮರಾಜನಗರ ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವ ವಿದ್ಯಾಲಯದ ಮುಖ್ಯ ಸಂಚಾಲಕಿ ರಾಜಯೋಗಿನಿ ಬ್ರಹ್ಮಾಕುಮಾರಿ ದಾನೇಶ್ವರೀಜೀ ಹಾಗೂ ಬಿ.ಕೆ. ಇಂದುಮತೀಜೀ ಮತದಾನ ಮಾಡಿದರು.

ಮೈಸೂರಿನ ಸಿದ್ದರಾಮನಹುಂಡಿಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮತದಾನ

ಕರ್ನಾಟಕದ 28 ಕ್ಷೇತ್ರದಲ್ಲಿ ಕಾಂಗ್ರೆಸ್ 20 ಸ್ಥಾನ ಗೆಲ್ಲಲಿದೆ: ಸಿಎಂ ವಿಶ್ವಾಸ

● ಗ್ಯಾರಂಟಿ ಕಾಂಗ್ರೆಸ್ ಕೈ ಹಿಡಿಯಲಿದೆ ● ಹಳೇ ಮೈಸೂರು ಭಾಗದಲ್ಲಿ ಕಾಂಗ್ರೆಸ್‌ಗೆ ಗೆಲುವು ನಿಶ್ಚಿತ ● ಮೋದಿ ಭಾಷಣ ಪ್ರಚೋದನಾಕಾರಿ, ಹತಾಶ ಭಾವ ● ಮೋದಿ ಭಾಷಣದಲ್ಲಿ ಆರ್‌ಎಸ್‌ಎಸ್ ಹಿಡನ್ ಅಜೆಂಡಾವಿದೆ ● ಬಿಜೆಪಿ ಪ್ರಕಾರ ಪಿಕ್ ಪಾಕೆಟ್ ಎಂದರೇನು?

ಮೈಸೂರು, ಏ.26(ಬಿಎಲ್‌ಯು)- ಮುಖ್ಯಮಂತ್ರಿ ಸಿದ್ದರಾಮಯ್ಯ ತಮ್ಮ ಹುಟ್ಟೂರು ಮೈಸೂರಿನ ಸಿದ್ದರಾಮನ ಹುಂಡಿಯಲ್ಲಿ ಇಂದು ಪುತ್ರ ಡಾ.ಯತೀಂದ್ರ ಜೊತೆ ಮತದಾನ ಮಾಡಿದರು.

ಅವರು ಸಿದ್ದರಾಮನಹುಂಡಿಗೆ ಆಗ ಮಿಸುತ್ತಿದ್ದಂತೆ ಊರಿನ ಜನರು ಪಟಾಕಿ ಸಿಡಿಸಿ ಜೈಕಾರ ಕೂಗಿ ಅದ್ದೂರಿ ಸ್ವಾಗತ ಕೋರಿದರು. ನೂರಾರು ಜನರು ಸೇರಿದ್ದರಿಂದ ಕಾರಿನಲ್ಲೇ ಕುಳಿತಿದ್ದ ಸಿದ್ದರಾಮಯ್ಯ ಗ್ರಾಮದ ಪ್ರವೇಶ ದ್ವಾರದಿಂದ ಮತಗಟ್ಟೆ ತನಕ ನಿಧಾನವಾಗಿ ಸಾಗಿದರು.

ತರುವಾಯ ಸಿದ್ದರಾಮನಹುಂಡಿಯ ಮತಗಟ್ಟೆ ಸಂಖ್ಯೆ 86ರಲ್ಲಿ ಮತದಾನ ಮಾಡಿದರು. ಈ ವೇಳೆ ಮಾಜಿ ಶಾಸಕ ಡಾ.ಯತೀಂದ್ರ ಕೂಡ ತಂದೆಯ ನಂತರ ಮತ ಚಲಾಯಿಸಿದರು. ಈ ವೇಳೆ ಪತ್ರಕರ್ತರ ಜೊತೆ ಮಾತನಾಡಿದ ಸಿದ್ದರಾಮಯ್ಯ, ಕರ್ನಾಟಕದಲ್ಲಿ ಕಾಂಗ್ರೆಸ್‌ಗೆ ಉತ್ತಮವಾದ ವಾತಾವರಣವಿದೆ. ಕರ್ನಾಟಕದ 28 ಕ್ಷೇತ್ರಗಳಲ್ಲಿ 20 ಸ್ಥಾನ ಗೆದ್ದೇ ಗೆಲ್ಲುತ್ತೇವೆ. ಇಂದು ನಡೆದ 14 ಕ್ಷೇತ್ರದಲ್ಲಿ ಕೂಡ ಹೆಚ್ಚು ಕ್ಷೇತ್ರಗಳಲ್ಲಿ ಕಾಂಗ್ರೆಸ್ ಗೆಲ್ಲಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಇದು ಗುಪ್ತ ಮತದಾನವಾದ ಕಾರಣ ಇಷ್ಟೆ ಸಂಖ್ಯೆ ಗೆಲ್ಲುತ್ತೇವೆ ಎಂದು ಲೆಕ್ಕಾಚಾರ ಹಾಕಿ ಹೇಳಲು ಸಾಧ್ಯವಿಲ್ಲ. ಆದರೆ ಕಾಂಗ್ರೆಸ್‌ಗೆ ಎಲ್ಲೆಡೆ ಉತ್ತಮ ಬೆಂಬಲ ವ್ಯಕ್ತವಾಗಿದ್ದು, ಹೆಚ್ಚಿನ ಸ್ಥಾನ ಗೆಲ್ಲುತ್ತೇವೆ ಎಂದಷ್ಟೆ ಹೇಳಬಲ್ಲೆ ಎಂದು ತಿಳಿಸಿದರು.

ಹಳೇ ಮೈಸೂರು ಭಾಗದ ಮೈಸೂರು-ಕೊಡಗು, ಚಾಮರಾಜನಗರ, ಮಂಡ್ಯ, ಹಾಸನ ಕ್ಷೇತ್ರಗಳಲ್ಲಿ ಕೂಡ ನಾವು ಗೆಲುವು ಸಾಧಿಸುತ್ತೇವೆ. ನಮ್ಮ ಸರ್ಕಾರ ನೀಡಿರುವ ಗ್ಯಾರಂಟಿಗೆ ಜನರು ಮತ ಹಾಕುತ್ತಾರೆ. ಗ್ಯಾರಂಟಿ ಯೋಜನೆ ನಮ್ಮ ಕೈ ಹಿಡಿಯಲಿದೆ. ಇದರಿಂದ ಹೆಚ್ಚು ಸ್ಥಾನಗಳಲ್ಲಿ ನಾವು ಗೆಲ್ಲುತ್ತೇವೆ ಎಂಬ ವಿಶ್ವಾಸವಿದೆ ಎಂದು ಪುನರುಚ್ಚರಿಸಿದರು.

ಮಂಗಳಸೂತ್ರ ಸೇರಿದಂತೆ ಹಲವು ವಿಚಾರ ಉಲ್ಲೇಖಿಸಿ ಪ್ರಧಾನಮಂತ್ರಿ ನರೇಂದ್ರ ಮೋದಿ ಕಳೆದ ಮೂರು ದಿನಗಳಿಂದ ಮಾಡುತ್ತಿರುವ ಭಾಷಣ ಹತಾಶೆಯಿಂದ ಕೂಡಿದೆ. ಅವರ ಭಾಷಣ ಭಾವನಾತ್ಮಕವಾಗಿ ಇಲ್ಲ. ಅದರ ಬದಲು ಪ್ರಚೋದನಾಕಾರಿಯಾಗಿದೆ ಎಂದು ಸಿದ್ದರಾಮಯ್ಯ ಆರೋಪಿಸಿದರು.

ದಲಿತರ ಮೀಸಲಾತಿ ಹಾಗೂ ಸವಲತ್ತುಗಳನ್ನು ಮುಸ್ಲಿಂರಿಗೆ ನೀಡುತ್ತೇವೆ ಎಂಬ ನರೇಂದ್ರ ಮೋದಿ ಅವರ ಆರೋಪಗಳು ಆರ್‌ಎಸ್‌ಎಸ್ ಹಿಡನ್ ಅಜೆಂಡಾ ಆಗಿದೆ. ಇದರಿಂದ ನರೇಂದ್ರ ಮೋದಿ ಮಾಡುತ್ತಿರುವ ಭಾಷಣ ಆರ್‌ಎಸ್‌ಎಸ್ ಭಾಷಣವಾಗಿದೆ ಎಂದು ಟೀಕಿಸಿದರು. ಹತಾಶೆಯಿಂದ ನರೇಂದ್ರ ಮೋದಿ ಮಾಡುತ್ತಿರುವ ಭಾಷಣ ಸಂವಿಧಾನಕ್ಕೆ ವಿರುದ್ಧವಾಗಿದೆ. ಅವರ ಒಂದೊಂದು ಮಾತು ಪ್ರಚೋದನಾಕಾರಿಯಾಗಿದೆ. ಪ್ರಧಾನಮಂತ್ರಿ ಸ್ಥಾನದಲ್ಲಿರುವ ನರೇಂದ್ರ ಮೋದಿ ಧರ್ಮದ ಬಗ್ಗೆ ಮಾತನಾಡಬಾರದು. ಇದು ಸಂವಿಧಾನ ವಿರೋಧಿಯಾದ ಮಾತುಗಳು. ಈ ಬಗ್ಗೆ ಕಾಂಗ್ರೆಸ್ ಚುನಾವಣಾ ಆಯೋಗಕ್ಕೆ ದೂರು ನೀಡಿದೆ. ಚುನಾವಣಾ ಆಯೋಗ ಈ ಸಂಬಂಧ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು. ರಾಜ್ಯ ಕಾಂಗ್ರೆಸ್ ಸರ್ಕಾರ ಪಿಕ್ ಪಾಕೆಟ್ ಸರ್ಕಾರ ಎಂಬ ಬಿಜೆಪಿ ಜಾಹೀರಾತು ವಿರುದ್ಧ ಕಿಡಿಕಾರಿದ ಸಿದ್ದರಾಮಯ್ಯ, ಇವರ ಅರ್ಥದಲ್ಲಿ ಪಿಕ್ ಪಾಕೆಟ್ ಅಂದರೆ ಏನು ಎಂದು ಪ್ರಶ್ನಿಸಿದರು. ನಾವು ಯಾರ ಹಣವನ್ನು ಯಾರಿಂದಲೂ ಕಿತ್ತು ಗ್ಯಾರಂಟಿ ಯೋಜನೆಗಳಿಗೆ ಕೊಡುತ್ತಿಲ್ಲ. ಜೊತೆಗೆ ಮದ್ಯ ಸೇರಿದಂತೆ ಯಾವುದೇ ಬೆಲೆಗಳನ್ನು ಏರಿಕೆ ಕೂಡ ಮಾಡಿಲ್ಲ. ಇದರಿಂದ ಪಿಕ್ ಪಾಕೆಟ್ ಎಂಬ ಆರೋಪ ಮಾಡುವುದು ಎಷ್ಟು ಸರಿ ಎಂದು ಸಿದ್ದರಾಮಯ್ಯ ಮರು ಪ್ರಶ್ನಿಸಿದರು.

ಮತದಾನದ ತರುವಾಯ ಸಿದ್ದರಾಮಯ್ಯ ತಮ್ಮ ಬಾಲ್ಯ ಸ್ನೇಹಿತ ಕೆಂಪಿರಯ್ಯ ಮನೆಗೆ ಭೇಟಿ ನೀಡಿದರು. ನಂತರ ತಮ್ಮ ಕುಲದೇವರಾದ ಶ್ರೀ ಸಿದ್ದರಾಮೇಶ್ವರ ದೇವಸ್ಥಾನಕ್ಕೆ ಭೇಟಿ ನೀಡಿ ಪೂಜೆ ಸಲ್ಲಿಸಿದರು. ತರುವಾಯ ಮೈಸೂರು ವಿಮಾನ ನಿಲ್ದಾಣದಿಂದ ವಿಶೇಷ ವಿಮಾನದಲ್ಲಿ ಕಲ್ಬುರ್ಗಿಗೆ ತೆರಳಿದರು.


ಮೈಸೂರಿನ ಸಿದ್ದರಾಮನಹುಂಡಿಯಲ್ಲಿ ಶುಕ್ರವಾರ ಮುಖ್ಯಮಂತ್ರಿ ಸಿದ್ದರಾಮಯ್ಯ ಮತದಾನ ಮಾಡಿದರು. ತಂದೆ ಜೊತೆ ಮತದಾನ ಮಾಡಿದ ಅವರ ಪುತ್ರ ಡಾ.ಯತೀಂದ್ರರನ್ನು ಚಿತ್ರದಲ್ಲಿ ಕಾಣಬಹುದು.

ಎನ್‌ಡಿಎ ಮೈತ್ರಿಕೂಟ ಹೆಚ್ಚು ಸ್ಥಾನ ಗೆಲ್ತದೆ! ಸಿದ್ದರಾಮಯ್ಯ ಮಾತಿನ ಯಡವಟ್ಟು

ಭಾರತದಲ್ಲಿ ಇಂಡಿಯಾ ಮೈತ್ರಿಕೂಟ ಹೆಚ್ಚು ಸ್ಥಾನ ಗೆಲ್ಲುತ್ತದೆ ಎಂದು ಹೇಳುವ ಬದಲು ಎನ್‌ಡಿಎ ಮೈತ್ರಿಕೂಟ ಹೆಚ್ಚು ಸ್ಥಾನ ಗೆಲ್ಲುತ್ತದೆ ಎಂದು ಹೇಳುವ ಮೂಲಕ ಮುಖ್ಯಮಂತ್ರಿ ಸಿದ್ದರಾಮಯ್ಯ ಯಡವಟ್ಟು ಮಾಡಿದರು. ದೇಶದಲ್ಲಿ ಮೊದಲ ಹಂತದಲ್ಲಿ 105 ಕ್ಷೇತ್ರಗಳಿಗೆ ಚುನಾವಣೆ ನಡೆದಿದೆ. ಇದರಲ್ಲಿ ಎನ್‌ಡಿಎ ಮೈತ್ರಿಕೂಟ ಹೆಚ್ಚು ಸ್ಥಾನಗಳಲ್ಲಿ ಗೆಲುವು ಸಾಧಿಸಲಿದೆ ಎಂದು ಹೇಳಿದರು. ಇಂಡಿಯಾ ಮೈತ್ರಿಕೂಟ ಎನ್ನುವ ಬದಲು ಎನ್‌ಡಿಎ ಮೈತ್ರಿಕೂಟ ಎಂದು ಸಿದ್ದರಾಮಯ್ಯ ತಪ್ಪಾಗಿ ಹೇಳಿದರು. ಪಕ್ಕದಲ್ಲೇ ಇದ್ದ ಪುತ್ರ ಡಾ.ಯತೀಂದ್ರ ಸೇರಿದಂತೆ ಅವರ ಬಹಳಷ್ಟು ಮಂದಿಗೆ ಸಿದ್ದರಾಮಯ್ಯ ನೀಡಿದ ಹೇಳಿಕೆ ತಪ್ಪು ಎಂದು ತಿಳಿಯಲೇ ಇಲ್ಲ. ಇದರಿಂದ ಸಿದ್ದರಾಮಯ್ಯ ಅವರ ತಪ್ಪು ಹೇಳಿಕೆ ಕೊನೆ ತನಕ ಯಾರ ಅರಿವಿಗೂ ಬರಲೇ ಇಲ್ಲ.

ದೇವೇಗೌಡರದು ಕೃತಕ ಕಣ್ಣೀರು

ಮಾಜಿ ಪ್ರಧಾನಮಂತ್ರಿ ದೇವೇಗೌಡರ ಕಣ್ಣೀರು ಕೃತಕವಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಲೇವಡಿ ಮಾಡಿದರು. ರಾಜಕಾರಣದಲ್ಲಿ ಯಾವತ್ತೂ ಕಣ್ಣೀರು ಹಾಕಬಾರದು. ಆದರೆ ದೇವೇಗೌಡರು ಸೇರಿದಂತೆ ಅವರ ಕುಟುಂಬಸ್ಥರು ಯಾವಾಗಲೂ ಕಣ್ಣೀರು ಹಾಕುತ್ತಾರೆ. ಆದರೆ ಇದು ಕೃತಕವಾದ ಕಣ್ಣೀರು ಎಂದು ಟೀಕಿಸಿದರು. ರಾಜಕಾರಣದಲ್ಲಿ ಹೀಗೆ ಕಣ್ಣೀರು ಹಾಕಬಾರದು ಎಂದರು.

ಚಾಮುಂಡೇಶ್ವರಿಗೆ ಪೂಜೆ ಸಲ್ಲಿಸಿದ ನಂತರ ಕುಟುಂಬ ಸಮೇತ ಯದುವೀರ್ ಮತದಾನ

ಕ್ಷೇತ್ರದೆಲ್ಲೆಡೆ ಗೆಲುವಿನ ವಾತಾವರಣದ ವಿಶ್ವಾಸ

● ಯದುವೀರ್‌ಗೆ ಪತ್ನಿ ತ್ರಿಷಿಕಾ ಕುಮಾರಿ ಸಾಥ್ ● ಮಗನ ಜೊತೆ ತಾಯಿ ಪ್ರಮೋದಾ ದೇವಿ ಕೂಡ ಮತದಾನ ● ಯುವ ಮತದಾರರಿಗೆ ಯದುವೀರ್ ಶುಭ ಕೋರಿಕೆ


ಮೈಸೂರಿನ ಅಗ್ರಹಾರದ ಶ್ರೀಕಾಂತ ಶಾಲೆಯಲ್ಲಿ ಶುಕ್ರವಾರ ಮೈಸೂರು-ಕೊಡಗು ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಪತ್ನಿ ತ್ರಿಷಿಕಾ ಕುಮಾರಿ ಹಾಗೂ ತಾಯಿ ಪ್ರಮೋದಾ ದೇವಿ ಜೊತೆ ಮತದಾನ ಮಾಡಿದರು.

ಮೈಸೂರು, ಏ.26(ಬಿಎಲ್‌ಯು)- ಮೈಸೂರು-ಕೊಡಗು ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ನಾಡದೇವತೆ ಚಾಮುಂಡೇಶ್ವರಿಗೆ ಪೂಜೆ ಸಲ್ಲಿಸಿದ ನಂತರ ಕುಟುಂಬ ಸಮೇತ ಇಂದು ಮತ ಚಲಾಯಿಸಿದರು.

ಮತದಾನಕ್ಕೆ ಮೊದಲು ಯದುವೀರ್, ಪತ್ನಿ ತ್ರಿಷಿಕಾ, ತಾಯಿ ಪ್ರಮೋದಾದೇವಿ ಜೊತೆ ಚಾಮುಂಡಿಬೆಟ್ಟಕ್ಕೆ ತೆರಳಿ ತಮ್ಮ ಕುಲದೇವತೆ ತಾಯಿ ಚಾಮುಂಡೇಶ್ವರಿ ದೇವಿಗೆ ವಿಶೇಷ ಪೂಜೆ ಸಲ್ಲಿಸಿದರು. ಸುಮಾರು 15 ನಿಮಿಷಗಳ ಕಾಲ ದೇವಸ್ಥಾನದಲ್ಲೇ ಇದ್ದ ಯದುವೀರ್, ತಮ್ಮ ಗೆಲುವಿಗಾಗಿ ಚಾಮುಂಡೇಶ್ವರಿಯಲ್ಲಿ ಪ್ರಾರ್ಥಿಸಿದರು. ತರುವಾಯ ನೇರವಾಗಿ ಮೈಸೂರಿನ ಅಗ್ರಹಾರದ ಶಂಕರಮಠ ರಸ್ತೆಯ ಶ್ರೀಕಾಂತ ಶಾಲೆಯ ಮತಗಟ್ಟೆಗೆ ಆಗಮಿಸಿದ ಯದುವೀರ್, ಬೂತ್ ನಂಬರ್ 176ರಲ್ಲಿ ಮತದಾನ ಮಾಡಿದರು. ಈ ವೇಳೆ ಯದುವೀರ್ ಪತ್ನಿ ತ್ರಿಷಿಕಾ ಕುಮಾರಿ ಕೂಡ ಮತ ಚಲಾಯಿಸಿದರು.

ಮತದಾನದ ತರುವಾಯ ಯದುವೀರ್ ಜೊತೆ ಸೆಲ್ಫಿ ತೆಗೆಸಿಕೊಂಡ ಕೆಲವು ಮತದಾರರು ನಿಮ್ಮ ಗೆಲುವು ಖಚಿತ ಎಂದು ವಿಶ್ವಾಸದ ನುಡಿಗಳನ್ನಾಡಿದರು.

ಈ ವೇಳೆ ಪತ್ರಕರ್ತರ ಜೊತೆ ಮಾತನಾಡಿದ ಯದುವೀರ್, ಆರಂಭದಿಂದಲೂ ನನಗೆ ಗೆಲ್ಲುವ ವಿಶ್ವಾಸವಿದೆ. ಜೊತೆಗೆ ಕ್ಷೇತ್ರದಲ್ಲಿ ನನ್ನ ಗೆಲುವಿಗೆ ಉತ್ತಮ ವಾತಾವರಣವಿದ್ದು, ನಾನು ಜಯಶಾಲಿಯಾಗುತ್ತೇನೆ ಎಂದು ನಂಬಿಕೆ ಇದೆ ಎಂದರು.

ಎಷ್ಟು ಮತಗಳ ಅಂತರದಿಂದ ಗೆಲುವು ಸಾಧಿಸುತ್ತೀರಾ ಎಂಬ ಪ್ರಶ್ನೆಗೆ, ಅಂತರ ಎಷ್ಟು ಎಂಬುದನ್ನು ಮಾಧ್ಯಮದವರಾದ ನೀವು ತೀರ್ಮಾನ ಮಾಡಿ. ಆದರೆ ನಾನು ಗೆಲುವು ಸಾಧಿಸುತ್ತೇನೆ ಎಂದಷ್ಟೆ ಹೇಳಬಲ್ಲೆ ಎಂದು ಹೇಳಿದರು. ಹಿಂದೆ ಹಲವು ಚುನಾವಣೆಯಲ್ಲಿ ಮತ ಚಲಾಯಿಸಿದ್ದೇನೆ. ಆದರೆ ಅಭ್ಯರ್ಥಿಯಾಗಿ ಮತದಾನ ಮಾಡುವುದರಲ್ಲಿ ವಿಶೇಷತೆ ಇಲ್ಲ ಎಂದು ಸ್ಪಷ್ಟಪಡಿಸಿದ ಯದುವೀರ್, ಹೊಸದಾಗಿ ಮತದಾನ ಮಾಡುತ್ತಿರುವ ಯುವ ಜನರಿಗೆ ಶುಭಾಶಯ ಹೇಳುತ್ತೇನೆ. ಮತದಾನ ಪ್ರಕ್ರಿಯೆಯಲ್ಲಿ ಮೊದಲ ಬಾರಿಗೆ ಮತದಾನ ಮಾಡುವವರಿಗೆ ಪ್ರಾಮುಖ್ಯತೆ ಇದೆ ಎಂದು ಅಭಿಪ್ರಾಯಪಟ್ಟರು.

ಮತದಾನ ಮಾಡುವುದು ನಮ್ಮ ಹಕ್ಕು ಪ್ರಜಾಪ್ರಭುತ್ವವನ್ನು ಗಟ್ಟಿಗೊಳಿಸುವ ನಿಟ್ಟಿನಲ್ಲಿ ಎಲ್ಲರೂ ಕಡ್ಡಾಯವಾಗಿ ಮತದಾನದ ಹಕ್ಕು ಚಲಾಯಿಸಬೇಕು ಎಂದು ಯದುವೀರ್ ಸಲಹೆ ನೀಡಿದರು.

ಕುಟುಂಬ ಸಮೇತ ಮತ ಹಾಕಿದ ಕಾಂಗ್ರೆಸ್ ಅಭ್ಯರ್ಥಿ ಲಕ್ಷ್ಮಣ

ಮೈಸೂರು, ಏ.26(ಜಿಎ)-ಲೋಕಸಭಾ ಚುನಾವಣೆ ಹಿನ್ನೆಲೆ ಮೈಸೂರು-ಕೊಡಗು ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಎಂ.ಲಕ್ಷ್ಮಣ ಅವರು ಕುಟುಂಬ ಸಮೇತರಾಗಿ ಮತದಾನ ಮಾಡಿ, ಗೆಲುವಿನ ವಿಶ್ವಾಸ ವ್ಯಕ್ತಪಡಿಸಿದರು.

ಮೈಸೂರಿನ ಯಾದವಗಿರಿಯಲ್ಲಿರುವ ಸುನಂದ ಪ್ರೈಮರಿ ಶಾಲೆಯ ಮತಗಟ್ಟೆಗೆ 12.30ಕ್ಕೆ ಪತ್ನಿ ರೂಪಶ್ರೀ, ಪುತ್ರಿ ವರ್ಷಿತಾ ಹಾಗೂ ಪುತ್ರ ಆದಿತ್ಯ ಜೊತೆಗೆ ಆಗಮಿಸಿ ಕುಟುಂಬ ಸಮೇತರಾಗಿ ಮತದಾನ ಮಾಡಿದರು.

ನಂತರ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಪರೀಕ್ಷೆಗೆ ಎಲ್ಲಾ ರೀತಿ ತಯಾರಿ ಮಾಡಿದ್ದೆ. ಅದರಂತೆ ಇಂದು ಪರೀಕ್ಷೆ ಬರೆದಿದ್ದೇನೆ. ಉತ್ತಮ ಫಲಿತಾಂಶ ಬರುವ ನಿರೀಕ್ಷೆ ಇದೆ. ಜನರು ಬಿಜೆಪಿ ವಿರುದ್ಧವಿದ್ದ ತಮ್ಮ ಆಕ್ರೋಶವನ್ನು ಮತದಾನ ಮಾಡುವ ಮೂಲಕ ತೋರಿಸುತ್ತಿದ್ದಾರೆ. ಜನರ ಭಾವನೆ ವಿರುದ್ಧ ಹೋರಾಟ ಮಾಡುತ್ತಿದ್ದವರಿಗೆ ಉತ್ತರ ನೀಡುತ್ತಿದ್ದಾರೆ. ಮೈಸೂರಿನಲ್ಲಿ ಕೆಲವೆಡೆ ಹಣ ಹಂಚಿಕೆಯಾಗುತ್ತಿರುವ ಬಗ್ಗೆ ಪ್ರತಿಕ್ರಿಯಿಸಿ, ಹಣ ಹಂಚಿಕೆ ಬಗ್ಗೆ ಈಗಾಗಲೇ ಅಧಿಕಾರಿಗಳ ಗಮನಕ್ಕೆ ತಂದು ದೂರು ನೀಡಲಾಗಿದೆ ಎಂದರು. ಮೈಸೂರು ಜಿಲ್ಲೆ ಸೇರಿದಂತೆ ಕೊಡಗಿನಲ್ಲಿಯೂ ಕಾಂಗ್ರೆಸ್‌ಗೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ. ಮುಖ್ಯಮಂತ್ರಿಗಳು ಸೇರಿದಂತೆ ಎಲ್ಲಾ ನಾಯಕರು ನನ್ನ ಕ್ಷೇತ್ರದ ಬಗ್ಗೆ ಹೆಚ್ಚಿನ ಕಾಳಜಿ ವಹಿಸಿದ್ದಾರೆ. ಕಳೆದ ಬಾರಿಗಿಂತ ಮತದಾನದ ಹೆಚ್ಚಾಗಿದೆ. ಬಹುತೇಕ ಮತಗಟ್ಟೆಯಲ್ಲಿ ಜನರು ಉತ್ಸುಕರಾಗಿ ಮತದಾನ ಮಾಡಿದ್ದಾರೆ ಎಂದು ತಿಳಿಸಿ, ಮತದಾನಕ್ಕೆ ಬಂದ ಜನರಿಗೆ ಧನ್ಯವಾದ ತಿಳಿಸಿದರು.



ಯದುವೀರ್ ಕ್ಲೀನ್ ಇಮೇಜ್ ಪಾಲಿಟಿಕ್ಸ್‌ಗೆ ನಾಂದಿ ಹಾಡಿದ್ದಾರೆ


ಮಗನ ವಿವೇಚನಾಯುಕ್ತ ರಾಜಕಾರಣಕ್ಕೆ ತಾಯಿ ಪ್ರಮೋದಾ ದೇವಿ ಪ್ರಶಂಸೆ

ಮೈಸೂರು, ಏ.26(ಬಿಎಲ್‌ಯು)-ಚುನಾವಣಾ ರಾಜಕೀಯಕ್ಕೆ ಪಾದಾರ್ಪಣೆ ಮಾಡುವ ಮೂಲಕ ಕ್ಲೀನ್ ಇಮೇಜ್ ಪಾಲಿಟಿಕ್ಸ್‌ಗೆ ಯದುವೀರ್ ಪಯತ್ನ ಮಾಡಿದ್ದಾರೆ ಎಂದು ಪ್ರಮೋದಾ ದೇವಿ ಒಡೆಯರ್ ಅಭಿಪ್ರಾಯಪಟ್ಟರು.

ಮೈಸೂರಿನ ಅಗ್ರಹಾರದ ಶ್ರೀಕಾಂತ ಶಾಲೆಯ ಬೂತ್ ನಂಬರ್ 179ರಲ್ಲಿ ಮತದಾನ ಮಾಡಿದ ಪ್ರಮೋದಾ ದೇವಿ, ಇವತ್ತಿನ ರಾಜಕಾರಣದಲ್ಲಿ ಪರಸ್ಪರ ಟೀಕೆ, ಆರೋಪ-ಪ್ರತ್ಯಾರೋಪ ಮಾಡುತ್ತಿರುವುದು ಸಾಮಾನ್ಯವಾಗಿದೆ. ಇಂತಹ ಸಂದರ್ಭದಲ್ಲಿ ಯಾರ ಬಗ್ಗೆಯೂ ಟೀಕೆ ಹಾಗೂ ಆರೋಪ ಮಾಡದ ಯದುವೀರ್ ಕ್ಲೀನ್ ಇಮೇಜ್ ಪಾಲಿಟಿಕ್ಸ್‌ಗೆ ಪ್ರಯತ್ನ ಮಾಡಿದ್ದಾರೆ ಎಂದು ಹೇಳಿದರು. ಯದುವೀರ್ ಈ ತನಕ ಯಾರ ಬಗ್ಗೆಯೂ ಆರೋಪ ಮಾಡಿಲ್ಲ, ಟೀಕಿಸಿಲ್ಲ. ಈ ಮೂಲಕ ಕ್ಲೀನ್ ಇಮೇಜ್ ಪಾಲಿಟಿಕ್ಸ್‌ನ್ನು ಸಾಬೀತು ಮಾಡಿದ್ದಾರೆ. ಇದರಿಂದ ಯದುವೀರ್‌ಗೆ ಜಯ ಸಿಗಲಿ ಎಂದು ಶುಭ ಹಾರೈಸುತ್ತೇನೆ ಎಂದು ತಿಳಿಸಿದರು.

ಮತದಾನ ಮಾಡಿರುವುದು ನನಗೆ ಸಂತೋಷ ತಂದಿದೆ. ಮತದಾನ ನಮ್ಮ ಹಕ್ಕು ಎಂದು ತಿಳಿದು ಎಲ್ಲರೂ ಕಡ್ಡಾಯವಾಗಿ ಮತದಾನ ಮಾಡಬೇಕು ಎಂದು ಇದೇ ವೇಳೆ ಪ್ರಮೋದಾ ದೇವಿ ಸಲಹೆ ನೀಡಿದರು. ಶ್ರೀಕಾಂತ ಶಾಲೆಯ ಬೂತ್ ನಂಬರ್ 179ರಲ್ಲಿ ಪ್ರಮೋದಾದೇವಿ ಒಡೆಯರ್ ಮತದಾನ ಮಾಡಿದರು. ಪ್ರಮೋದಾ ದೇವಿ ಒಡೆಯರ್ ಮತ ಚಲಾಯಿಸಲು ಬಂದ ಸಂದರ್ಭದಲ್ಲಿ ಮತಗಟ್ಟೆಯಲ್ಲಿ ಸರದಿ ಸಾಲು ಇತ್ತು. ಈ ಸಂದರ್ಭದಲ್ಲಿ ಸಾಲಿನಲ್ಲಿ ನಿಲ್ಲದೆ ಮತ ಚಲಾಯಿಸುವಂತೆ ಅಲ್ಲಿದ್ದ ಮತದಾರರು ಮನವಿ ಮಾಡಿದರು. ಆದರೆ ತಮಗೆ ಗಣ್ಯರ ಆತಿಥ್ಯ ಬೇಡವೆಂದು ಸರದಿ ಸಾಲಿನಲ್ಲೇ ನಿಂತು ಪ್ರಮೋದಾ ದೇವಿ ಮತದಾನದ ಹಕ್ಕು ಚಲಾವಣೆ ಮಾಡಿದರು. ಶ್ರೀಕಾಂತ ಶಾಲೆಯಲ್ಲಿ 5 ಬೂತ್‌ಗಳಿದ್ದು, ಯದುವೀರ್, ತ್ರಿಷಿಕಾ ಕುಮಾರಿ ಅವರ ಮತಗಟ್ಟೆ ಸಂಖ್ಯೆ ಹಾಗೂ ಪ್ರಮೋದಾ ದೇವಿ ಅವರ ಮತಗಟ್ಟೆ ಸಂಖ್ಯೆ ಬೇರೆಯಾಗಿತ್ತು. ಯದುವೀರ್ ಮತ ಚಲಾವಣೆ ಮಾಡಿದ ಬೂತ್‌ನಲ್ಲಿ ಮತದಾರರು ವಿರಳವಾಗಿದ್ದ ಕಾರಣ ನೇರವಾಗಿ ಹೋಗಿ ಕೇವಲ ಮೂರು ನಿಮಿಷದಲ್ಲಿ ಮತ ಚಲಾಯಿಸಿ ಹೊರ ಬಂದರು. ಪ್ರಮೋದಾ ದೇವಿ ಅವರು ಸರದಿ ಸಾಲಿನಲ್ಲಿ ನಿಂತು ಮತ ಚಲಾವಣೆ ಮಾಡುವ ತನಕ ಶಾಲಾ ಆವರಣದಲ್ಲಿ ಯದುವೀರ್ ತಾಯಿಗಾಗಿ ಹತ್ತು ನಿಮಿಷಗಳ ಕಾಲ ಕಾದರು. ತರುವಾಯ ತಾಯಿ ಬಂದ ನಂತರ ಒಟ್ಟಿಗೆ ಅಲ್ಲಿಂದ ನಿರ್ಗಮಿಸಿದರು.


ಶಾಸಕ ಕೆ.ಹರೀಶ್‌ಗೌಡ ತಮ್ಮ ಕುಟುಂಬದವರೊಂದಿಗೆ ಮತ ಚಲಾವಣೆ ಮಾಡಿದರು.


ಮಾಜಿ ಶಾಸಕರೂ ಆದ ನಗರ ಬಿಜೆಪಿ ಅಧ್ಯಕ್ಷ ಎಲ್.ನಾಗೇಂದ್ರ ಕುಟುಂಬ ಸದಸ್ಯರೊಂದಿಗೆ ಮತದಾನ ಮಾಡಿದರು.


ವೈದ್ಯಕೀಯ ವಿದ್ಯಾರ್ಥಿ ವಿ. ಪ್ರೇರಣಾ ಮೈಸೂರು ಜೆ.ಪಿ.ನಗರದ ಜೆ.ಎಸ್.ಎಸ್. ಪಬ್ಲಿಕ್ ಶಾಲೆಯಲ್ಲಿ ಪ್ರಥಮ ಬಾರಿಗೆ ಮತದಾನ ಮಾಡಿದರು. ಈ ವೇಳೆ ತಂದೆ ಮೈಸೂರು ಪೇಂಟ್ಸ್ ಮತ್ತು ವಾರ್ನಿಶ್ ಕಾರ್ಖಾನೆಯ ಮಾಜಿ ಅಧ್ಯಕ್ಷ ಎಚ್.ವಿ. ವೆಂಕಟೇಶ್, ತಾಯಿ ಡಾ. ಪೂರ್ಣಿಮಾ, ಸಹೋದರಿ ವಿ.ರಚನಾ ಇದ್ದಾರೆ.

ನಕ್ಕರೆ ಅದೇ ಸ್ವರ್ಗ

ವೈದ್ಯರು : "ನಾಲ್ಕನೇ ವಾರ್ಡ್‌ನ ರೋಗಿಗೆ ಜ್ಞಾನ ಬಂತೆ?"
ನರ್ಸ್ : "ಬಂದಿತ್ತು ಸಾರ್, ಆದರೆ ನೀವು ಕೊಟ್ಟ ಬಿಲ್ ನೋಡಿ ಎಚ್ಚರ ತಪ್ಪಿದ್ದಾನೆ."

ಮೈಸೂರು ಮಿತ್ರ

ಶನಿವಾರ, 27 ಏಪ್ರಿಲ್ 2024

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ..........

ಎಂತಹ ಕಷ್ಟದ ಸಂಗತಿಯಿದ್ದರೂ ಕಳೆದು ಹೋದ ಮೇಲೆ ಮುಂದೆ ಉಳಿಯುವುದು ಆ ಸಂಗತಿಯಲ್ಲ. ಅದನ್ನು ನಾವು ಹೇಗೆ ಎದುರಿಸಿದೆವೆಂಬುದು ಮಾತ್ರ –ನುಡಿಮುತ್ತು

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಇದ್ದಲಿಗೆ ಮಸಿ ಬುದ್ಧಿ ಹೇಳಿದಂತೆ



ನಿಮ್ಮ ಪತ್ರಗಳು

■ ಆಸ್ತಿ ತೆರಿಗೆ ಪಾವತಿ ದಿನಾಂಕ ವಿಸ್ತರಿಸಲಿ

ಮಾನ್ಯರೆ,

ಮೈಸೂರು ನಗರ ವ್ಯಾಪ್ತಿಯ ಆಸ್ತಿ–ತೆರಿಗೆಯನ್ನು ಶೇ.5 ರಷ್ಟು ರಿಯಾಯಿತಿ ದರದಲ್ಲಿ ಕಟ್ಟಲು ಇದೇ ಏಪ್ರಿಲ್ ತಿಂಗಳ 30ನೇ ತಾರೀಖು ಕಡೆ ದಿನವಾಗಿದೆ. ಒಟ್ಟು ತೆರಿಗೆಯಲ್ಲಿ ಶೇ.5 ರಷ್ಟು ರಿಯಾಯಿತಿ ಸಿಗುವುದರಿಂದ ಮೈಸೂರಿನ 80 ರಷ್ಟು ಜನರು ಏಪ್ರಿಲ್ ತಿಂಗಳಲ್ಲೇ ತೆರಿಗೆ ಪಾವತಿ ಮಾಡುವ ಸಾಧ್ಯತೆ ಇದೆ. ಆದರೆ ಈ ವರ್ಷದ ಆಸ್ತಿ ತೆರಿಗೆ ಕಳೆದ ವರ್ಷಕ್ಕಿಂತ ಶೇ.15 ರಿಂದ 20 ರಷ್ಟು ಹೆಚ್ಚಾಗಿದೆ. ಈ ಬಗ್ಗೆ ಪಾಲಿಕೆ ಆಯುಕ್ತರು ಈ ವರ್ಷ ಆಸ್ತಿ ತೆರಿಗೆಯಲ್ಲಿ ಹೆಚ್ಚಳವೇ ಆಗಿಲ್ಲ ಎಂದು ಮಾಧ್ಯಮಗಳ ಮೂಲಕ ಹೇಳಿಕೆ ನೀಡಿದರು. ಇದು ಸಾರ್ವಜನಿಕರಿಗೆ ಗೊಂದಲ ಉಂಟಾಯಿತು. ನಂತರ ಅವರು ಆಸ್ತಿ ಮೌಲ್ಯವನ್ನು ಹೆಚ್ಚು ಮಾಡಿದ್ದರಿಂದಾಗಿ ಆಸ್ತಿ ತೆರಿಗೆಯಲ್ಲೂ ಹೆಚ್ಚಾಗಿದೆ ಎಂದು ಮತ್ತೆ ಮಾಧ್ಯಮಗಳ ಮೂಲಕ ಹೇಳಿದ್ದರು.

ಈ ಗೊಂದಲ ನಿವಾರಣೆಯಾದ ನಂತರವೇ ಜನರು ತೆರಿಗೆ ಕಟ್ಟಲು ಪ್ರಾರಂಭಿಸಿದರು. ಇದಲ್ಲದೆ ಈ ಸಲದ ಲೋಕಸಭಾ ಚುನಾವಣೆಯಲ್ಲಿ ಕೆಲವರು ಸಕ್ರಿಯ ಭಾಗವಹಿಸುವುದರಿಂದಾಗಿ ಬಹುತೇಕ ಜನರು ಇನ್ನೂ ಈ ವರ್ಷದ ಆಸ್ತಿ ತೆರಿಗೆಯನ್ನು ಕಟ್ಟಲು ಸಾಧ್ಯವಾಗಿಲ್ಲ. ಈ ತೆರಿಗೆ ರಿಯಾಯಿತಿಯನ್ನು ಮುಂದಿನ ಮೇ ತಿಂಗಳ ತನಕ ವಿಸ್ತರಿಸಿ ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡಲಿ. ಈ ಬಗ್ಗೆ ಪಾಲಿಕೆಯ ಆಯುಕ್ತರು ಸೂಕ್ತ ಕ್ರಮ ಕೈಗೊಳ್ಳಬೇಕು.

–ಬೂಕನಕೆರೆ ವಿಜೇಂದ್ರ, ಕುವೆಂಪುನಗರ, ಮೈಸೂರು

■ ಅಮೃತ ಬಡಾವಣೆಯ ಆರ್ತನಾದ ಕೇಳುವವರು ಯಾರು?

ಮಾನ್ಯರೆ,

ಮೈಸೂರು ಸಾಂಸ್ಕೃತಿಕ ನಗರ, ಅರಮನೆಗಳ ಪಟ್ಟಣ, ಜಗತ್ಪ್ರಸಿದ್ಧ ಪ್ರವಾಸಿ ತಾಣ. ಆದರೆ, ಮೈಸೂರಿನ ಅದೆಷ್ಟೋ ಹಿಂದುಳಿದ ಪ್ರದೇಶಗಳ ಚಿತ್ರಣ ಮಾತ್ರ ಇದಕ್ಕೆ ಅಪವಾದ. ಇದಕ್ಕೆ ಮೈಸೂರಿನ ರಾಜೀವ್ ನಗರ 2ನೇ ಹಂತದಲ್ಲಿ ರಿಂಗ್ ರೋಡ್ ಸಮೀಪ ಕರ್ನಾಟಕ ಕೊಳಚೆ ಪ್ರದೇಶ ಅಭಿವೃದ್ಧಿ ಮಂಡಳಿ ವತಿಯಿಂದ ನರ್ಮ್ ಅಡಿಯಲ್ಲಿ ನಿರ್ಮಾಣವಾದ 586 ಮನೆಗಳ ಅಮೃತ ಬಡಾವಣೆ ಉತ್ತಮ ಉದಾಹರಣೆಯಾಗಿದೆ.

ಇಲ್ಲಿ ಬಹುತೇಕ ಅಲ್ಪಸಂಖ್ಯಾತರು, ಪರಿಶಿಷ್ಟ ಜಾತಿ ಮತ್ತು ಹಿಂದುಳಿದ ಬಡ ಕುಟುಂಬಗಳು ನೆಲೆಸಿದ್ದು, ಸುಮಾರು 3000 ಜನಸಂಖ್ಯೆ ಹೊಂದಿದೆ. ಆದರೆ ಅಷ್ಟೇ ಸಮಸ್ಯೆಗಳನ್ನೂ ಹಾಸು ಹೊದ್ದಿದೆ. ಮುಖ್ಯವಾಗಿ ಈ ಪ್ರದೇಶ ಅತ್ತ ನಗರ ಪಾಲಿಕೆಗೂ ಸೇರದೆ ಇತ್ತ ಗ್ರಾಮ ಪಂಚಾಯತಿಗೂ ಸೇರದೆ ತ್ರಿಶಂಕು ಸ್ಥಿತಿಯಲ್ಲಿದೆ. ಇಲ್ಲಿನ ಜನರು ತಮ್ಮ ಸಮಸ್ಯೆಗಳನ್ನೂ ಹೇಳಿಕೊಳ್ಳಲು ಯಾವುದೇ ಸ್ಥಳೀಯ ಸರಕಾರ ಇಲ್ಲ. ಕಸ ವಿಲೇವಾರಿಯಾಗದೆ ಎಲ್ಲೆಂದರಲ್ಲಿ ರಾಶಿ ರಾಶಿ ಕಸ, ಹಂದಿ, ನಾಯಿ, ಬಿಡಾಡಿ ದನಗಳ ಆವಾಸ ಸ್ಥಾನವಾಗಿದ್ದು ಕೊಳೆತು ನಾರುತ್ತಿದೆ. ಒಳಚರಂಡಿ ಕಟ್ಟಿಕೊಂಡು ರಸ್ತೆಯಲ್ಲಿ ತುಂಬಿ ಹರಿಯುತ್ತಿದೆ. ಇದರಿಂದ ಸಾಂಕ್ರಾಮಿಕ ಕಾಯಿಲೆಗೆ ಆಹ್ವಾನ ನೀಡುತ್ತಿದೆ. ನಗರದ ಹೊರವಲಯವಾದರೂ ಯಾವುದೇ ಬಸ್ ವ್ಯವಸ್ಥೆ ಇಲ್ಲ. ಉಚಿತ ಪ್ರಯಾಣ ಇಲ್ಲಿನ ಮಹಿಳೆಯರಿಗೆ ಸಿಗುತ್ತಿಲ್ಲ. ದುಡಿದ ಹಣ ಆಟೋಗೆ ಕೊಟ್ಟು ಬದುಕು ಕಟ್ಟಿಕೊಳ್ಳಲು ನಗರಕ್ಕೆ ಬರಬೇಕು.

ಸಣ್ಣ ವಯಸ್ಸಿನ ನೂರಾರು ಮಕ್ಕಳು ಇದ್ದರೂ ಅಂಗನವಾಡಿ ಸೌಲಭ್ಯವಿಲ್ಲ. ದೊಡ್ಡ ಮಕ್ಕಳು ಶಾಲೆಗೆ ನಡೆದೇ ದೂರದ ರಾಜೇಂದ್ರನಗರ ಶಾಲೆಗೆ ಬರಬೇಕು. ಇದರಿಂದ ಎಷ್ಟೋ ಮಕ್ಕಳು ಶಾಲೆಯಿಂದ ವಿಮುಖರಾಗಿದ್ದಾರೆ. ಸಮುದಾಯ ಭವನ ಇದ್ದರೂ ಅದು ಕಳ್ಳ ಕಾಕರ ಕೃಪೆಯಿಂದ ಕಿಟಕಿ, ಬಾಗಿಲು ಕಳೆದುಕೊಂಡು ಬೀದಿನಾಯಿಗಳ ಆಶ್ರಯ ತಾಣವಾಗಿದೆ. ಮನೆ ಕಟ್ಟಿಕೊಟ್ಟರೆ ನಮ್ಮ ಕೆಲಸ ಮುಗೀತು ಅನ್ನೋ KSDB ಈ ಬಡಾವಣೆಯನ್ನು ಯಾವುದಾದರೂ ಸ್ಥಳೀಯ ಸರಕಾರಕ್ಕೆ ಹಸ್ತಾಂತರ ಮಾಡದೆ ದಶಕಗಳಿಂದ ಜನರು ಈ ಸಮಸ್ಯೆಗಳಿಂದ ಹೈರಾಣವಾಗಿದ್ದಾರೆ. ಇನ್ನಾದರೂ ಅಮೃತ ಬಡಾವಣೆಯ ಜನರ ಬವಣೆ ತಪ್ಪಿಸಿ ಹೆಸರಿಗೆ ತಕ್ಕ ಹಾಗೆ ಅಮೃತ ಸಿಗದಿದ್ದರೂ ಪರವಾಗಿಲ್ಲ ಶುದ್ಧ ನೀರು, ಗಾಳಿ, ಪರಿಸರ, ಶಾಲೆ, ಆರೋಗ್ಯ ಸೇವೆ ನೀಡುವತ್ತ ಸರಕಾರ ಗಮನ ನೀಡಲಿ.

–ನಾಗೇಂದ್ರ ಕಿಲಗೆರೆ, ಸಾಮಾಜಿಕ ಕಾರ್ಯಕರ್ತ, ಮೈಸೂರು

■ ಕನ್ನಡಿಗರಿಗೆ ವರವಾಗಿ ಬಂದ ವರನಟ

ಮಾನ್ಯರೆ,

ಇಂದಿನ ಮುಂದಿನ ಪೀಳಿಗೆಗೆ ಆದರ್ಶ ನಾಯಕ,
ನಟಸಾರ್ವಭೌಮ ಅಭಿನಯ ಕಲಾ ಕುಲ ತಿಲಕ,
ದಾದಾ ಸಾಹೇಬ್ ಫಾಲ್ಕೆ ಪ್ರಶಸ್ತಿ ವಿಜೇತ ಸರ್ವಜ್ಞಮೂರ್ತಿ,
ಬಡವರ ಬಂಧು ನಿಮ್ಮಯ ಪಾತ್ರಗಳಿಗೆ ಸಾವಿಲ್ಲ ಎಂದೆಂದೂ,
ಗಾಜನೂರು ಗಂಡು ಮುತ್ತುರಾಜ್ ಬಂಗಾರದ ಮನುಷ್ಯ,
ಬಹದ್ದೂರ್ ಗಂಡು, ಮಿಸ್ಟರ್ ರಾಜಕುಮಾರ್ ದೇವತಾ ಮನುಷ್ಯ,
ಬೇಡರ ಕಣ್ಣಪ್ಪನಾಗಿ ಉದಯಿಸಿದ ನವತಾರೆ,
ಅಣ್ಣಾವ್ರು ಕನ್ನಡ ಚಿತ್ರರಂಗದ ಧ್ರುವತಾರೆ,
ಡಾ॥ ರಾಜ್ ಭಾರತೀಯ ಚಿತ್ರರಂಗದ ಮೇರು ನಟ,
ಕನ್ನಡಿಗರಿಗೆ ವರವಾಗಿ ಬಂದ ವರನಟ,
ನೀವು ಜನಿಸಿದ್ದು ಈ ನಾಡಿನ ಭಾಗ್ಯ,
ನಿಮ್ಮನ್ನು ಪಡೆದ ಕನ್ನಡಿಗರು ನಾವೇ ಭಾಗ್ಯವಂತರು.


–ಅಹಲ್ಯ .ಸಿ.ನಾ. ಚಂದ್ರ, ಜನತಾನಗರ, ಮೈಸೂರು

ತಿದ್ದುಪಡಿ ಹಾಗೂ ಸ್ಪಷ್ಟೀಕರಣ



ಏಪ್ರಿಲ್ 26ರ 'ಮೈಸೂರು ಮಿತ್ರ' ಸಂಚಿಕೆಯ 3ನೇ ಪುಟದಲ್ಲಿ "ವಿ. ರಾಮಸ್ವಾಮಿ ಮನವೊಲಿಕೆ ಫಲಶೃತಿ; ಮತದಾನ ಬಹಿಷ್ಕಾರ ಕೈಬಿಟ್ಟ ಗ್ರಾಮಸ್ಥರು" ಶೀರ್ಷಿಕೆಯಡಿ ಪ್ರಕಟವಾಗಿರುವ ವರದಿಯಲ್ಲಿ ಬದನವಾಳು ಗ್ರಾಮಸ್ಥರ ಮನವೊಲಿಸುವಲ್ಲಿ ಸಂಸದ ವಿ. ಶ್ರೀನಿವಾಸಪ್ರಸಾದ್ ಸಹೋದರ ವಿ. ರಾಮಸ್ವಾಮಿ ಯಶಸ್ವಿಯಾದರು ಎಂದು ಪ್ರಕಟವಾಗಿದ್ದು, ಅದನ್ನು ನಂಜನಗೂಡು ತಾಲೂಕು ಹಲ್ಲರೆ ಗ್ರಾಮಸ್ಥರ ಮನವೊಲಿಸುವಲ್ಲಿ ವಿ. ರಾಮಸ್ವಾಮಿ ಯಶಸ್ವಿಯಾದರು ಎಂದು ಓದಿಕೊಳ್ಳುವುದು. ತಪ್ಪಿಗಾಗಿ ವಿಷಾದಿಸುತ್ತೇವೆ.

– ಸಂಪಾದಕ




ಕಾರ್ಕಳ ಆನಂದ ಭಟ್
ಮೊ: 7676554198
ಫ್ಲಾಟ್ ನಂ. 204, ಮೂರನೇ ಮಹಡಿ, ಏಕದಂತ ಅಪಾರ್ಟ್‌ಮೆಂಟ್ಸ್, OPP
H.P. ಗ್ಯಾಸ್ ಪೆರ್ವಾಜೆ ರಸ್ತೆ, ಕಾರ್ಕಳ– 574 104, ಉಡುಪಿ ಜಿಲೆ

ದಿಕ್ಕುದೆಸೆ

ಪ್ರಭಾವ ಕಳೆದುಕೊಳ್ಳುತ್ತಿರುವ ಪಕ್ಷೇತರರು

ದೇಶದಲ್ಲಿ ಹದಿನೆಂಟನೇ ಲೋಕಸಭಾ ಸಾರ್ವತ್ರಿಕ ಚುನಾವಣಾ ಪ್ರಕ್ರಿಯೆ ಆರಂಭವಾಗಿದೆ. ಈಗಾಗಲೇ ರಾಜ್ಯದಲ್ಲಿ ಮೊದಲ ಹಂತದಲ್ಲಿ 14 ಕ್ಷೇತ್ರಗಳಲ್ಲಿ ಮತದಾನ ಮುಗಿದಿದೆ. ಪ್ರತಿಯೊಂದು ರಾಜಕೀಯ ಪಕ್ಷಗಳ ಮಾಸ್(MASS) ಲೀಡರ್‌ಗಳು, ಸ್ಟಾರ್ ಪ್ರಚಾರಕರು ರೋಡ್ ಶೋಗಳು, ರ್‍ಯಾಲಿಗಳು, ಪ್ರಚಾರ ಸಭೆಗಳ ಮೂಲಕ ಮತದಾರರನ್ನು ಓಲೈಸಲು ಅಬ್ಬರದ ಪ್ರಚಾರ ನಡೆಸಿದರು. ಈಗಲೂ ನಡೆಸುತ್ತಿದ್ದಾರೆ. ಈ ಮಧ್ಯೆ ಪಕ್ಷೇತರ ಅಭ್ಯರ್ಥಿಗಳ ಕೀರಲು ಧ್ವನಿಯು ಅಲ್ಲಲ್ಲಿ ಕೇಳಿಸುತ್ತಿದೆ. ಪ್ರತಿ ಚುನಾವಣೆಯಲ್ಲೂ ಪಕ್ಷೇತರರು ಭಾರಿ ಸಂಖ್ಯೆಯಲ್ಲಿ ಸ್ಪರ್ಧಿಸುತ್ತಿದ್ದರೂ 'ಲೆಕ್ಕಕ್ಕುಂಟು ಆಟಕ್ಕಿಲ್ಲ' ಎಂಬ ಸ್ಥಿತಿಯಲ್ಲಿದ್ದಾರೆ.



> ❝ ವರ್ಷದಿಂದ ವರ್ಷಕ್ಕೆ ಪಕ್ಷೇತರರಾಗಿ ಸ್ಪರ್ಧಿಸುತ್ತಿರುವವರಲ್ಲಿ ಗೆಲ್ಲುವವರ ಸಂಖ್ಯೆ ಇಳಿಕೆಯಾಗುತ್ತಿದ್ದರೂ ಸ್ಪರ್ಧಿಸುತ್ತಿರುವವರ ಸಂಖ್ಯೆ ಭಾರಿ ಪ್ರಮಾಣದಲ್ಲಿ ಹೆಚ್ಚುತ್ತಿರುವುದು ಗಮನಾರ್ಹವಾಗಿದೆ. ಪಕ್ಷೇತರರನ್ನು ಹಬ್ಬಗಳಲ್ಲಿ ಕಟ್ಟುವ ತೋರಣಗಳಿಗೆ ಹೋಲಿಸಬಹುದು. ವಿವಿಧ ಮಾದರಿಯ ಆಕರ್ಷಕ ತೋರಣಗಳು ಹಬ್ಬಗಳ ಸಂಭ್ರಮ, ಸಡಗರ ಹೆಚ್ಚಿಸುತ್ತವೆ. ಹಬ್ಬ ಮುಗಿದ ನಂತರ ಇವು ಅಪ್ರಸ್ತುತವಾಗುತ್ತವೆ. ಇದೇ ರೀತಿ ಪ್ರಜಾಪ್ರಭುತ್ವ ವ್ಯವಸ್ಥೆಗೆ ಆಧಾರವಾಗಿರುವ ಚುನಾವಣಾ ಹಬ್ಬದಲ್ಲಿ ಪಕ್ಷೇತರರು ತೋರಣದಂತೆ ಚುನಾವಣೆಗಳಲ್ಲಿ ಸಂಭ್ರಮಕ್ಕೆ ಕಾರಣೀಭೂತರಾಗಿದ್ದಾರೆ.

ದೇಶದಲ್ಲಿ 1952ರಿಂದ ಇಲ್ಲಿಯವರೆಗಿನ ಪ್ರತಿ ಚುನಾವಣೆಯಲ್ಲಿ ಸಾವಿರಾರು ಅಭ್ಯರ್ಥಿಗಳು ಪಕ್ಷೇತರರಾಗಿ ಸ್ಪರ್ಧಿಸಿ ತಮ್ಮ ಅದೃಷ್ಟ ಪರೀಕ್ಷಿಸಿದ್ದಾರೆ. ಆದರೆ ದೇಶದ ರಾಜಕೀಯದಲ್ಲಿ ಯಾವುದೇ ಸೈದ್ಧಾಂತಿಕ ಬದ್ಧತೆ ಇಲ್ಲದ ಪಕ್ಷೇತರರು ಮತದಾರರ ವಿಶ್ವಾಸ ಪಡೆಯುವಲ್ಲಿ ವಿಫಲರಾಗಿ ಅಪ್ರಸ್ತುತರಾಗುತ್ತಿದ್ದಾರೆ. ಕ್ಷೇತ್ರದ ಮತದಾರರಿಗೆ ಪರಿಚಯವಿಲ್ಲದಿರುವುದು, ವೈಯಕ್ತಿಕ ವರ್ಚಸ್ಸಿನ ಕೊರತೆ, ರಾಜಕೀಯ ಪಕ್ಷಗಳಿಗಿರುವಂತಹ ಸಂಘಟನೆ, ಸಂಪನ್ಮೂಲಗಳ ಕೊರತೆ, ಕ್ಷೇತ್ರಕ್ಕೆ ಸಂಬಂಧಿಸಿದಂತೆ ಸೀಮಿತ ಸಾಮಾನ್ಯ ವಿಷಯಗಳಿರುವ ಚುನಾವಣಾ ಪ್ರಣಾಳಿಕೆಯಂತಹ ಅನೇಕ ಕಾರಣಗಳಿಂದ ಪಕ್ಷೇತರರು ಚುನಾವಣೆಗಳಲ್ಲಿ ವಿಜಯ ಗಳಿಸುವಲ್ಲಿ ವಿಫಲರಾಗುತ್ತಿದ್ದಾರೆ.

ಯಾರು ಈ ಪಕ್ಷೇತರರು?: ಯಾವುದೇ ನೋಂದಾಯಿತ ರಾಷ್ಟ್ರೀಯ/ಪ್ರಾದೇಶಿಕ ಪಕ್ಷಗಳ ಸಾಮಾನ್ಯ ಸದಸ್ಯನಾಗಿರದ ಅಥವಾ ತಾನು ಪ್ರತಿನಿಧಿಸುತ್ತಿರುವ ಪಕ್ಷವನ್ನು ತ್ಯಜಿಸಿದ ಅಥವಾ ಪಕ್ಷದಿಂದ ಹೊರ ಹಾಕಲ್ಪಟ್ಟ ಸಂದರ್ಭದಲ್ಲಿ ಸ್ವತಂತ್ರವಾಗಿ ಚುನಾವಣೆಯಲ್ಲಿ ಸ್ಪರ್ಧಿಸುವವರು ಪಕ್ಷೇತರರೆನಿಸಿಕೊಳ್ಳುತ್ತಾರೆ. ಇವರು ಚುನಾವಣಾ ಆಯೋಗ ನೀಡುವ ಚುನಾವಣಾ ಚಿಹ್ನೆಯಡಿ ಸ್ಪರ್ಧಿಸುತ್ತಾರೆ.

ಚುನಾವಣೆಯಲ್ಲಿ ಸ್ಪರ್ಧಿಸಲು 1952ರಲ್ಲಿ ಸಾಮಾನ್ಯ ವರ್ಗದ ಅಭ್ಯರ್ಥಿಗಳು 500 ರೂ. ಮತ್ತು ಪರಿಶಿಷ್ಟ ಜಾತಿ, ಪಂಗಡಕ್ಕೆ ಸೇರಿದವರು 250 ರೂ. ಭದ್ರತಾ ಠೇವಣಿ ಸಲ್ಲಿಸಬೇಕಾಗಿತ್ತು. ಪ್ರಸ್ತುತ ಸಾಮಾನ್ಯ ವರ್ಗದವರು 25 ಸಾವಿರ ಮತ್ತು ಪರಿಶಿಷ್ಟ ಜಾತಿ/ಪಂಗಡಕ್ಕೆ ಸೇರಿದವರು 12,500 ರೂ. ಭದ್ರತಾ ಠೇವಣಿ ಸಲ್ಲಿಸಬೇಕು. ಯಾವನೇ ಅಭ್ಯರ್ಥಿಗೆ ಚಲಾವಣೆಯಾದ ಒಟ್ಟು ಮತದಲ್ಲಿ ಆರರಲ್ಲಿ ಒಂದು ಭಾಗದಷ್ಟು ಮತಗಳು ದೊರೆಯದಿದ್ದಲ್ಲಿ ಆತನು ಕಟ್ಟಿದ ಠೇವಣಿಯನ್ನು ಚುನಾವಣಾ ಆಯೋಗವು ಮುಟ್ಟುಗೋಲು ಹಾಕಿಕೊಳ್ಳುತ್ತದೆ.

1952ರ ಪ್ರಥಮ ಚುನಾವಣೆ–ಪಕ್ಷೇತರರ ಸಾಧನೆ: 1952ರಲ್ಲಿ ದೇಶದಲ್ಲಿ ನಡೆದ ಮೊದಲ ಸಾರ್ವತ್ರಿಕ ಚುನಾವಣೆಯಲ್ಲಿ ಭಾರಿ ಸಂಖ್ಯೆಯಲ್ಲಿ ಪಕ್ಷೇತರರು ಸ್ಪರ್ಧಿಸಿದ್ದರೂ ಗೆಲುವಿನ ಪ್ರಮಾಣ ಅತ್ಯಲ್ಪವಾಗಿತ್ತು. ಮತದಾರರ ಮೇಲೆ ಪ್ರಭಾವ ಬೀರುವಲ್ಲಿ ಪಕ್ಷೇತರರು ವಿಫಲರಾಗಿದ್ದರು. ಸ್ಪರ್ಧೆಯಲ್ಲಿದ್ದ 533 ಪಕ್ಷೇತರರಲ್ಲಿ ಕೇವಲ ಮೂವತ್ತೇಳು ಅಭ್ಯರ್ಥಿಗಳು ವಿಜಯಿಯಾಗಿದ್ದರು. ಯಶಸ್ಸಿನ ಪ್ರಮಾಣ ಕೇವಲ ಶೇ.6.9ರಷ್ಟು ಆಗಿತ್ತು. 1957ರ ಚುನಾವಣೆಯಲ್ಲಿ 1519 ಪಕ್ಷೇತರರು ಸ್ಪರ್ಧಿಸಿ ನಲ್ವತ್ತೆರಡು ಅಭ್ಯರ್ಥಿಗಳು (ಶೇ.8.7) ವಿಜಯಿಯಾಗಿದ್ದರು. ಇವರು ಶೇ.19.3ರಷ್ಟು ಮತಗಳನ್ನು ಗಳಿಸಿದ್ದರು. 1952 ಮತ್ತು 1957ರ ಚುನಾವಣೆಗಳಲ್ಲಿ ಶೇ.67ರಷ್ಟು ಪಕ್ಷೇತರ ಅಭ್ಯರ್ಥಿಗಳು ಠೇವಣಿ ಕಳೆದುಕೊಂಡಿದ್ದರು. 1952ರಿಂದ ನಿರಂತರವಾಗಿ ಪಕ್ಷೇತರರಿಗೆ ಸಿಗುವ ಮತಗಳ ಪ್ರಮಾಣ ತೀರಾ ಕುಸಿದಿದೆ. ಗೆಲ್ಲುವ ಪ್ರಮಾಣವು ಕಡಿಮೆಯಾಗಿದೆ. ಆದರೆ ಪಕ್ಷೇತರರಾಗಿ ಸ್ಪರ್ಧಿಸುತ್ತಿರುವ ಅಭ್ಯರ್ಥಿಗಳ ಸಂಖ್ಯೆ ಕಡಿಮೆಯಾಗಿಲ್ಲ. ಇದುವೇ ಪ್ರಜಾಪ್ರಭುತ್ವದ ವೈಶಿಷ್ಟ್ಯ. 1962ರಲ್ಲಿ ಪಕ್ಷೇತರರಾಗಿ ಸ್ಪರ್ಧಿಸಿದವರಲ್ಲಿ ಕೇವಲ ಇಪ್ಪತ್ತು ಅಭ್ಯರ್ಥಿಗಳು ಗೆಲುವು ಸಾಧಿಸಿದ್ದರು. ಗೆಲುವಿನ ಪ್ರಮಾಣ ಶೇ.4.2 ಆಗಿದ್ದರೆ, ಶೇ.78ರಷ್ಟು ಪಕ್ಷೇತರಿಗೆ ಇಡುಗಂಟು ನಷ್ಟವಾಗಿತ್ತು. 1967ರಲ್ಲಿ ಪಕ್ಷೇತರರು ಕೇವಲ ಶೇ.13.8 ಮತ ಪಡೆದು 35 ಅಭ್ಯರ್ಥಿಗಳು ಗೆಲುವಿನ ನಗೆ ಬೀರಿದ್ದರು. 1977ರಲ್ಲಿ ಪಕ್ಷೇತರರ ಮತ ಗಳಿಕೆ ಪ್ರಮಾಣ ಶೇ.5.5ಕ್ಕೆ ಕುಸಿದು ಒಂಭತ್ತು ಅಭ್ಯರ್ಥಿಗಳು ವಿಜಯಿಯಾಗಿದ್ದರು. 1984ರಲ್ಲಿ ಇಂದಿರಾ ಗಾಂಧಿಯವರ ಹತ್ಯೆಯ ನಂತರ ನಡೆದ ಚುನಾವಣೆಯಲ್ಲಿ ಪಕ್ಷೇತರರ ವಿಜಯದ ಪ್ರಮಾಣ ಕೇವಲ ಶೇ.0.30ಕ್ಕೆ ಕುಸಿದು ಹದಿಮೂರು ಅಭ್ಯರ್ಥಿಗಳು ಗೆಲುವು ಸಾಧಿಸಿದ್ದರು. ಈ ಚುನಾವಣೆಯಲ್ಲಿ ಶೇ.96ರಷ್ಟು ಅಭ್ಯರ್ಥಿಗಳು ಠೇವಣಿ ಕಳೆದುಕೊಂಡಿದ್ದರು. 1991ರಲ್ಲಿ ಪಕ್ಷೇತರರ ಮತ ಗಳಿಕೆ ಪ್ರಮಾಣ ಇನ್ನೂ ಕೆಳಕ್ಕೆ ಅಂದರೆ ಶೇ.4.5ಕ್ಕೆ ಕುಸಿದು ಕೇವಲ ಓರ್ವ ಪಕ್ಷೇತರ ಸಂಸತ್ತು ಪ್ರವೇಶಿಸುವಲ್ಲಿ ಯಶಸ್ವಿಯಾಗಿದ್ದರು. 2014ರಲ್ಲಿ ಪಕ್ಷೇತರರು ಶೇ.3.0ರಷ್ಟು ಮತ ಪಡೆದು ಮೂವರು ಸಂಸದರಾದರೆ, 2019ರಲ್ಲಿ ಮತ ಗಳಿಕೆ ಪ್ರಮಾಣ ಮತ್ತೂ ಕುಸಿದು (ಶೇ.2.6) ಕೇವಲ ನಾಲ್ವರು ಗೆಲುವು ದಾಖಲಿಸಿದ್ದರು. 1998ರಲ್ಲಿ ಪಕ್ಷೇತರರು ಪಡೆದ ಶೇ.2.4 ಮತ ಪ್ರಮಾಣ ಇದುವರೆಗಿನ ಅತ್ಯಂತ ಕನಿಷ್ಠ ದಾಖಲೆಯಾಗಿದೆ.

ಕೆಲವು ವಿಶಿಷ್ಟ ಮಾಹಿತಿಗಳು: 1952ರಲ್ಲಿ ದೇಶದಲ್ಲಿ ಕಾಂಗ್ರೆಸ್‌ನ ಭಾರಿ ಪ್ರಭಾವವಿದ್ದ ಕಾಲದಲ್ಲಿ ಕರ್ನಾಟಕದ ಕೊಪ್ಪಳ ಲೋಕಸಭಾ ಕ್ಷೇತ್ರದಲ್ಲಿ ಶಿವಮೂರ್ತಿ ಸ್ವಾಮಿ ಅಳವಂಡಿಯವರು ಪಕ್ಷೇತರರಾಗಿ ಗೆದ್ದು ಸಂಸತ್ತು ಪ್ರವೇಶಿಸಿದ ಮೊದಲ ಸಂಸದ ಎಂಬ ಗೌರವಕ್ಕೆ ಪಾತ್ರರಾಗಿದ್ದರು. ಇವರು ಕಾಂಗ್ರೆಸ್‌ನ ಮಾಧವ ರಾವ್ ಅನ್ವರಿಯವರನ್ನು ಸೋಲಿಸಿದ್ದರು.

1957ರ ಸಾರ್ವತ್ರಿಕ ಚುನಾವಣೆ ಒಂದು ವಿಶಿಷ್ಟ ಕೆಟ್ಟ ದಾಖಲೆ ನಿರ್ಮಿಸಿತು. ಉತ್ತರ ಪ್ರದೇಶದ ಮೈನ್‌ಪುರಿ ಲೋಕಸಭಾ ಕ್ಷೇತ್ರದಲ್ಲಿ ಸ್ಪರ್ಧಿಸಿದ್ದ ಪಕ್ಷೇತರ ಅಭ್ಯರ್ಥಿ ಶಂಕರ್‌ಲಾಲ್‌ಗೆ ಒಂದೇ ಒಂದು ಮತ ದೊರೆಯದೇ ಶೂನ್ಯ ಮತದ ದಾಖಲೆ ಬರೆದಿದ್ದರು. ಅವರ ಪರ ಅವರೇ ಚಲಾಯಿಸಿದ ಮತ ಕೂಡ ತಿರಸ್ಕೃತವಾಗಿತ್ತು. ಇದೇ ಚುನಾವಣೆಯಲ್ಲಿ ಕರ್ನಾಟಕದ (ಹಿಂದಿನ ಮೈಸೂರು ರಾಜ್ಯ) ಬಿಜಾಪುರ ಕ್ಷೇತ್ರದಲ್ಲಿ ಪಕ್ಷೇತರರಾಗಿ ಸ್ಪರ್ಧಿಸಿದ್ದ ಮರಿಗೆಪ್ಪ ಸಿದ್ದಪ್ಪ ಸುಗಂಧಿ ಎಂಬುವರು ರಾಷ್ಟ್ರೀಯ ಕಾಂಗ್ರೆಸ್‌ನ ಗಿರಿಧರಲಾಲ್ ದುಬೆಯವರನ್ನು 10,936 ಮತಗಳಿಂದ ಸೋಲಿಸಿ ಗೆಲುವಿನ ನಗೆ ಬೀರಿದ್ದರು.

ಹೊಟ್ಟೆ ಪಕ್ಷದ ರಂಗಸ್ವಾಮಿ: ಕರ್ನಾಟಕದಲ್ಲಿ ಪ್ರತಿ ಚುನಾವಣೆ ಬಂದಾಗ ನೆನಪಾಗುವ ವ್ಯಕ್ತಿ **ಹೊಟ್ಟೆ ಪಕ್ಷದ ರಂಗಸ್ವಾಮಿ**. 1967ರಿಂದ 2004ರವರೆಗೆ ಪ್ರತಿಯೊಂದು ಚುನಾವಣೆಯಲ್ಲಿ ದೊಡ್ಡ ದೊಡ್ಡ ದಿಗ್ಗಜರ ಎದುರು ಸ್ಪರ್ಧಿಸಿ ಸೋತು ಸುದ್ದಿಯಾಗುತ್ತಿದ್ದರು. 1967ರಲ್ಲಿ ಇವರು ರಾಜ್ಯದ ಮುಖ್ಯಮಂತ್ರಿಯಾಗಿದ್ದ ಕೆಂಗಲ್ ಹನುಮಂತಯ್ಯನವರೆದುರು ಸ್ಪರ್ಧಿಸಿದ್ದರು. ರಂಗಸ್ವಾಮಿಯವರು ದೇಶದ ಪ್ರಧಾನಿಗಳಾಗಿದ್ದ ಇಂದಿರಾ ಗಾಂಧಿ, ರಾಜೀವ್ ಗಾಂಧಿ, ನರಸಿಂಹರಾವ್ ಎದುರು ಸ್ಪರ್ಧಿಸಿದ್ದರು. 2004ರಲ್ಲಿ ಕೊನೆಯದಾಗಿ ಕರ್ನಾಟಕದ ಮುಖ್ಯಮಂತ್ರಿ ಎಸ್.ಎಂ.ಕೃಷ್ಣರೆದುರು ಸ್ಪರ್ಧಿಸಿ ಪರಾಭವಗೊಂಡಿದ್ದರು. 'ಹಸಿದ ಹೊಟ್ಟೆಗೆ ಊಟ ಕೊಡಿ' ಇವರ ಧ್ಯೇಯವಾಕ್ಯವಾಗಿತ್ತು. ಚುನಾವಣಾ ಆಯೋಗವು ಆರಂಭದಲ್ಲಿ ಇವರಿಗೆ ಆನೆ ನಂತರ ಬಿಲ್ಲು–ಬಾಣ ಚುನಾವಣಾ ಚಿಹ್ನೆಯಾಗಿ ನೀಡಿತ್ತು. ನಂತರದ ಚುನಾವಣೆಗಳಲ್ಲಿ ನಿರಂತರವಾಗಿ ಇವರಿಗೆ ಏರೋಪ್ಲೇನ್ ಚಿಹ್ನೆ ನೀಡಲಾಗಿತ್ತು. ಎಂಭತ್ತಾರು ಚುನಾವಣೆಗಳಲ್ಲಿ ಸ್ಪರ್ಧಿಸಿ ಒಂದರಲ್ಲೂ ಗೆಲುವು ದಾಖಲಿಸದೇ ಇವರು ವಿಶಿಷ್ಟ ಗಿನ್ನಿಸ್ ವರ್ಲ್ಡ್ ರೆಕಾರ್ಡ್‌ಗೆ ಭಾಜನರಾಗಿದ್ದರು. ಇವರನ್ನು ಎಲ್ಲ ಪಕ್ಷದ ನಾಯಕರು ಗೌರವದಿಂದ ಕಾಣುತ್ತಿದ್ದರು. ಹೊಟ್ಟೆ ಪಕ್ಷದ ಎಲ್ಲವೂ ಅವರೇ ಆಗಿದ್ದರು. ಪಕ್ಷವನ್ನು ನೋಂದಾಯಿಸಿರದ ಕಾರಣ ಒಂದು ರೀತಿಯಲ್ಲಿ ಪಕ್ಷೇತರರಾಗಿದ್ದರು.

ಈ ಬಾರಿ ಪಂಜಾಬ್‌ನ ಫರೀದ್ ಕೋಟ್ ಕ್ಷೇತ್ರದಿಂದ ಇಂದಿರಾ ಗಾಂಧಿ ಹಂತಕರಲ್ಲಿ ಒಬ್ಬನಾದ ಬಿಯಂತ್ ಸಿಂಗ್‌ನ ಪುತ್ರ ಸರಬ್ಜಿತ್ ಸಿಂಗ್ ಪಕ್ಷೇತರನಾಗಿ ಸ್ಪರ್ಧಿಸುತ್ತಿರುವುದು ದೇಶದ ಗಮನ ಸೆಳೆದಿದೆ. ಕರ್ನಾಟಕದಲ್ಲಿ ಈ ಬಾರಿ ಬೇರೆ ಬೇರೆ ಕಾರಣಗಳಿಗಾಗಿ ಪಕ್ಷದ ನಿರ್ದೇಶನವನ್ನು ಧಿಕ್ಕರಿಸಿ ಕೆಲವರು ಪಕ್ಷೇತರರಾಗಿ ಸ್ಪರ್ಧಿಸುತ್ತಿದ್ದಾರೆ. ಶಿವಮೊಗ್ಗದಲ್ಲಿ ಕೆ.ಎಸ್.ಈಶ್ವರಪ್ಪ, ದಾವಣಗೆರೆಯಲ್ಲಿ ಕಾಂಗ್ರೆಸ್ ಟಿಕೆಟ್ ಆಕಾಂಕ್ಷಿಯಾಗಿದ್ದ ವಿನಯ್ ಕುಮಾರ್ ಪಕ್ಷೇತರರಾಗಿ ಸ್ಪರ್ಧಿಸುತ್ತಿದ್ದಾರೆ. ಬೆಂಗಳೂರು ಗ್ರಾಮಾಂತರ ಕ್ಷೇತ್ರದಲ್ಲಿ ಡಾ. ಸಿ.ಎನ್.ಮಂಜುನಾಥ ವಿರುದ್ಧ ಅದೇ ಹೆಸರಿನ ಮೂವರು ಪಕ್ಷೇತರರಾಗಿ ಸ್ಪರ್ಧಿಸುತ್ತಿರುವುದು ವಿಶೇಷವಾಗಿದೆ.

ತಮಿಳ್ನಾಡಿನ ರಾಮನಾಥಪುರಂ ಲೋಕಸಭಾ ಕ್ಷೇತ್ರವು ಇದೇ ಕಾರಣಕ್ಕೆ ಗಮನ ಸೆಳೆದಿದೆ. ತಮಿಳ್ನಾಡಿನ ಮಾಜಿ ಮುಖ್ಯಮಂತ್ರಿ ದಿ. ಜಯಲಲಿತಾ ಗೈರು ಹಾಜರಿಯಲ್ಲಿ ಎರಡು ಬಾರಿ ರಾಜ್ಯದ ಮುಖ್ಯಮಂತ್ರಿಯಾಗಿದ್ದರು. ಎಐಎಡಿಎಂಕೆ ಪಕ್ಷದೊಳಗಿನ ಅಂತಃಕಲಹದಿಂದ 2022ರಲ್ಲಿ ಪಕ್ಷದಿಂದ ಉಚ್ಚಾಟಿಸಲ್ಪಟ್ಟಿರುವ ಓ. ಪನ್ನೀರ್ ಸೆಲ್ವಂ (OPS) ಪಕ್ಷೇತರರಾಗಿ ಹಲಸಿನಹಣ್ಣಿನ ಚಿಹ್ನೆಯಡಿ ಸ್ಪರ್ಧಿಸಿದ್ದರು. ವಿಶೇಷವೆಂದರೆ ಇಲ್ಲಿ ಇದೇ ಹೆಸರಿನ ನಾಲ್ವರು ಕೂಡ ಪಕ್ಷೇತರರಾಗಿ ಸ್ಪರ್ಧಿಸಿರುವುದು OPSಗೆ ಫಜೀತಿ ತಂದೊಡ್ಡಿದೆ. ಮತದಾರರು ಗೊಂದಲಕ್ಕೊಳಗಾಗಿ ಹಲಸಿನಹಣ್ಣನ್ನು ಮೂಸಿ ತಿರಸ್ಕರಿಸಿದ್ದಾರೋ ಅಥವಾ ಸವಿದು OPS ಅನ್ನು ಗೆಲ್ಲಿಸುತ್ತಾರೋ ಕಾದು ನೋಡಬೇಕಾಗಿದೆ.

ರಾಜಕೀಯ ಪರಿಣತರ ಪ್ರಕಾರ ದೇಶದಲ್ಲಿ ಮತದಾರರು ಪಕ್ಷೇತರರ ಮೇಲೆ ಭರವಸೆ ಕಳೆದುಕೊಂಡಿದ್ದಾರೆ. ದೇಶದ ಚುನಾವಣೆಗಳಲ್ಲಿ ಪಕ್ಷೇತರರು ವಿಶೇಷ ಪ್ರಭಾವ ಬೀರದಿದ್ದರೂ ಕೆಲವೊಮ್ಮೆ ಪ್ರಬಲ ರಾಜಕೀಯ ಪಕ್ಷಗಳ ಬಲಿಷ್ಠ ಅಭ್ಯರ್ಥಿಗಳ ಚುನಾವಣಾ ಫಲಿತಾಂಶವನ್ನು ಬದಲಾಯಿಸುವಲ್ಲಿ ಯಶಸ್ವಿಯಾಗಿದ್ದಾರೆ. ಕೆಲವೆಡೆ ಅನ್ಯಾನ್ಯ ಕಾರಣಗಳಿಂದ ಸೀಮಿತ ಪ್ರದೇಶದಲ್ಲಿ ಜನಪ್ರಿಯರಾಗಿರುವವರು ಪಕ್ಷೇತರರಾಗಿ ಸ್ಪರ್ಧಿಸಿದ ಸಂದರ್ಭಗಳಲ್ಲಿ ಪ್ರಬಲ ರಾಜಕೀಯ ಪಕ್ಷಗಳ ಅಭ್ಯರ್ಥಿಗಳು ತಮ್ಮ ವಿಜಯ ಸುನಿಶ್ಚಿತಗೊಳಿಸಲು ಇಂತಹವರು ನಾಮಪತ್ರ ವಾಪಸು ಪಡೆಯಲು ಧಾರಾಳ ಆಮಿಷಗಳನ್ನು ನೀಡಿ ಒಲಿಸಿರುವ ಉದಾಹರಣೆಗಳಿವೆ.

ಯಾವುದೇ ಪಕ್ಷಕ್ಕೆ ಬಹುಮತ ಬರದ ಸಂದರ್ಭದಲ್ಲಿ ಪಕ್ಷೇತರರಾಗಿ ವಿಜಯಿಯಾದವರು ತಾವು ಪ್ರತಿನಿಧಿಸುವ ಕ್ಷೇತ್ರಕ್ಕಿಂತ ವೈಯಕ್ತಿಕವಾಗಿ ಸಿಗಬಹುದಾದ ಲಾಭವನ್ನು ದೃಷ್ಟಿಯಲ್ಲಿಟ್ಟು ವ್ಯವಹರಿಸಿರುವುದು ಕಂಡು ಬಂದಿದೆ. ಈ ಕಾರಣಗಳಿಂದ ಪಕ್ಷೇತರರು ವಿಶ್ವಾಸಾರ್ಹತೆ ಕಳೆದುಕೊಳ್ಳುತ್ತಿದ್ದಾರೆ. ರಾಜಕೀಯ ಪಕ್ಷಗಳು ಆಡಳಿತ ನಡೆಸುತ್ತಿರುವಾಗ ಪಕ್ಷೇತರರಿಂದ ಕ್ಷೇತ್ರದಲ್ಲಿ ನಿರೀಕ್ಷಿತ ಅಭಿವೃದ್ಧಿಯಾಗುವುದಿಲ್ಲ ಎಂಬ ಕಾರಣಕ್ಕೂ ಜನರು ಪಕ್ಷೇತರರನ್ನು ತಿರಸ್ಕರಿಸುತ್ತಿದ್ದಾರೆ. ಇತ್ತೀಚಿನ ವರ್ಷಗಳಲ್ಲಿ ಮತದಾರರ ಆಸೆ, ಆಕಾಂಕ್ಷೆ, ನಿರೀಕ್ಷೆ ಹೆಚ್ಚುತ್ತಿವೆ. ಇವುಗಳನ್ನು ಪಕ್ಷೇತರರಿಂದ ಈಡೇರಿಸಲಾಗುವುದಿಲ್ಲ ಎಂಬ ಭಾವನೆ ಇದೆ. ಆದ್ದರಿಂದ ಮತದಾರರು ಅಭಿವೃದ್ಧಿಗಾಗಿ ವಿಶ್ವಾಸ, ಪ್ರಬುದ್ಧತೆ ಹಾಗೂ ಸ್ಪಷ್ಟತೆಯೊಂದಿಗೆ ರಾಜಕೀಯ ಪಕ್ಷಗಳ ಅಭ್ಯರ್ಥಿಗಳನ್ನು ಚುನಾಯಿಸುತ್ತಿದ್ದಾರೆ.

2019ರ ಚುನಾವಣೆಯಲ್ಲಿ ಸ್ಪರ್ಧಿಸಿದ ಎಂಟು ಸಾವಿರಕ್ಕಿಂತ ಹೆಚ್ಚು ಪಕ್ಷೇತರರಲ್ಲಿ ಕೇವಲ ನಾಲ್ವರು ವಿಜಯಿಯಾಗಿದ್ದರು. ಗೆಲುವಿನ ಪ್ರಮಾಣ ಶೇ. 0.11ಕ್ಕೆ ಕುಸಿದಿತ್ತು. ಶೇ.99.6ರಷ್ಟು ಪಕ್ಷೇತರರಿಗೆ ಠೇವಣಿ ನಷ್ಟವಾಗಿತ್ತು. ವಿಜಯಿಗಳು ಕೂಡ ರಾಜಕೀಯ ಪಕ್ಷಗಳ ಬೆಂಬಲದಿಂದ ಜಯಿಸಿದ್ದರು. ರಾಜ್ಯದ ಮಂಡ್ಯದಲ್ಲಿ ವಿಜಯಿಯಾದ ಸುಮಲತಾ ಅಂಬರೀಶ್‌ರಿಗೆ ಬಿಜೆಪಿ ಬೆಂಬಲಿಸಿತ್ತು. ಮಹಾರಾಷ್ಟ್ರದ ಅಮರಾವತಿಯಿಂದ ಆಯ್ಕೆಯಾದ ನವನೀತ್ ರಾಣಾ ಅವರಿಗೆ ಕಾಂಗ್ರೆಸ್–ಎನ್‌ಸಿಪಿ ಬೆಂಬಲ ನೀಡಿತ್ತು ಉಲ್ಫಾದ (ULFA) ಮಾಜಿ ಕಮಾಂಡರ್ ನಬ ಕುಮಾರ ಸರ್ನಿಯಾರು, ಅಸ್ಸಾಂನ ಕೊತ್ರಾಝಾರ್ ಮತ್ತು ದಾದ್ರಾ ನಗರ್‌ಹವೇಲಿಯಿಂದ ಮೋಹನ್ ಭಾಯ್ ಸಂಜಿ ಭಾಯ್ ದೆಲ್ಕರ್ ಅವರು ಪಕ್ಷೇತರರಾಗಿ ವಿಜಯಿಯಾಗಿದ್ದರು.

ವರ್ಷದಿಂದ ವರ್ಷಕ್ಕೆ ಪಕ್ಷೇತರರಾಗಿ ಸ್ಪರ್ಧಿಸುತ್ತಿರುವವರಲ್ಲಿ ಗೆಲ್ಲುವವರ ಸಂಖ್ಯೆ ಇಳಿಕೆಯಾಗುತ್ತಿದ್ದರೂ ಸ್ಪರ್ಧಿಸುತ್ತಿರುವವರ ಸಂಖ್ಯೆ ಭಾರಿ ಪ್ರಮಾಣದಲ್ಲಿ ಹೆಚ್ಚುತ್ತಿರುವುದು ಗಮನಾರ್ಹವಾಗಿದೆ. ಪಕ್ಷೇತರರನ್ನು ಹಬ್ಬಗಳಲ್ಲಿ ಕಟ್ಟುವ ತೋರಣಗಳಿಗೆ ಹೋಲಿಸಬಹುದು. ವಿವಿಧ ಮಾದರಿಯ ಆಕರ್ಷಕ ತೋರಣಗಳು ಹಬ್ಬಗಳ ಸಂಭ್ರಮ, ಸಡಗರ ಹೆಚ್ಚಿಸುತ್ತವೆ. ಹಬ್ಬ ಮುಗಿದ ನಂತರ ಇವು ಅಪ್ರಸ್ತುತವಾಗುತ್ತವೆ. ಇದೇ ರೀತಿ ಪ್ರಜಾಪ್ರಭುತ್ವ ವ್ಯವಸ್ಥೆಗೆ ಆಧಾರವಾಗಿರುವ ಚುನಾವಣಾ ಹಬ್ಬದಲ್ಲಿ ಪಕ್ಷೇತರರು ತೋರಣದಂತೆ ಚುನಾವಣೆಗಳಲ್ಲಿ ಸಂಭ್ರಮಕ್ಕೆ ಕಾರಣೀಭೂತರಾಗಿದ್ದಾರೆ.

ಮತಗಟ್ಟೆಗಳಿಗೆ ಭೇಟಿ ನೀಡಿದ ಯದುವೀರ್: ಶಾಸಕ ಜಿ.ಟಿ. ದೇವೇಗೌಡರು ಸಾಥ್





ಶಾಸಕ ಜಿ.ಟಿ. ದೇವೇಗೌಡರೊಂದಿಗೆ ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು ಮತಗಟ್ಟೆಯೊಂದಕ್ಕೆ ಭೇಟಿ ನೀಡಿದ ವೇಳೆ ಕಾರ್ಯಕರ್ತರೊಂದಿಗೆ ಸಮಾಲೋಚನೆ ನಡೆಸಿದರು. ನಂತರ ಮೈಸೂರಿನ ಖಾಸಗಿ ಹೋಟೆಲ್‌ನಲ್ಲಿ ಪಕ್ಷದ ಮುಖಂಡರು ಹಾಗೂ ಕಾರ್ಯಕರ್ತರೊಂದಿಗೆ ಯದುವೀರ್ ಉಪಾಹಾರ ಸೇವಿಸಿ, ಕೆಲ ಸಮಯ ಅಲ್ಲಿ ಕಳೆದರು.

ಮೈಸೂರು, ಏ.26– ಮತದಾನದ ದಿನವಾದ ಶುಕ್ರವಾರ ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಎಲ್ಲಾ ಬೂತ್‌ಗಳಿಗೂ ಭೇಟಿ ನೀಡಿ ಕಾರ್ಯಕರ್ತರಿಂದ ಮಾಹಿತಿ ಪಡೆದರು.

ಬೆಳಗ್ಗೆ ಚಾಮುಂಡೇಶ್ವರಿ ತಾಯಿ ದರ್ಶನ ಪಡೆದ ನಂತರ ಕುಟುಂಬ ಸಮೇತರಾಗಿ ಮತದಾನ ಮಾಡಿದ ಬಳಿಕ ಬೂತ್‌ಗಳಿಗೆ ಭೇಟಿ ನೀಡಿದರು. ಇವರಿಗೆ ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ. ದೇವೇಗೌಡ ಹಾಗೂ ಬಿಜೆಪಿ–ಜೆಡಿಎಸ್ ಮುಖಂಡರು ಸಾಥ್ ನೀಡಿದರು.

ಪ್ರತಿಯೊಂದು ಮತಗಟ್ಟೆಗೆ ಭೇಟಿ ನೀಡಿದ ನಂತರ ಮತಗಟ್ಟೆಯ ಬಳಿ ಟೇಬಲ್ ಹಾಕಿಕೊಂಡು ತಮ್ಮ ಪರ ಕಾರ್ಯ ನಿರ್ವಹಿಸುತ್ತಿದ್ದ ಕಾರ್ಯಕರ್ತರೊಂದಿಗೆ ಮಾತನಾಡಿ, ಸದರಿ ಮತಗಟ್ಟೆಯ ಬಗ್ಗೆ ಮಾಹಿತಿ ಪಡೆದು ಕಾರ್ಯಕರ್ತರಿಗೆ ಧನ್ಯವಾದ ತಿಳಿಸಿದರು. ಈ ವೇಳೆ ಹಲವು ಕಡೆ ಮತದಾರರು ಯದುವೀರ್ ಅವರೊಂದಿಗೆ ಸಂತಸದಿಂದ ಮಾತನಾಡಿ, ಚುನಾವಣೆಯಲ್ಲಿ ನೀವೇ ಗೆಲ್ಲುತ್ತೀರಿ ಎಂಬ ವಿಶ್ವಾಸದ ಮಾತುಗಳನ್ನಾಡಿದರು. ಕೆಲವೆಡೆ ಯುವ ಜನತೆ ಯದುವೀರ್ ಅವರೊಂದಿಗೆ ಸೆಲ್ಫಿ ಕ್ಲಿಕ್ಕಿಸಿಕೊಂಡು ಸಂಭ್ರಮಿಸಿದರು.

ಮತದಾನ ಮುಗಿದ ಬಳಿಕ ಕೊಂಚ ರಿಲ್ಯಾಕ್ಸ್ ಆದ ಅವರು ಖಾಸಗಿ ಹೋಟೆಲ್‌ನಲ್ಲಿ ಕಾರ್ಯಕರ್ತರೊಂದಿಗೆ ಉಪಾಹಾರ ಸೇವಿಸಿದರು. ಈ ವೇಳೆ ಅವರು ತಮ್ಮ ಗೆಲುವಿಗಾಗಿ ಶ್ರಮಿಸಿದ ಎಲ್ಲಾ ಮುಖಂಡರು ಹಾಗೂ ಕಾರ್ಯಕರ್ತರಿಗೆ ಧನ್ಯವಾದ ಅರ್ಪಿಸಿದರು.



ಅಧಿಕೃತ ಪತ್ರಿಕಾ ವಿತರಕ ಸಂಘದ ಅಧ್ಯಕ್ಷ ರವಿ ಅವರು ತಮ್ಮ ಪುತ್ರ ಆರ್. ಅಮೃತ್‌ಗೌಡ ಅವರೊಂದಿಗೆ ವಿಜಯನಗರ ಒಂದನೇ ಹಂತದ ಸಂಜೀವಯ್ಯ ಮೆಮೋರಿಯಲ್ ಟ್ರಸ್ಟ್ ಮತಗಟ್ಟೆಯಲ್ಲಿ ಮತಚಲಾಯಿಸಿದರು.



ಜೆಡಿಎಸ್ ರಾಜ್ಯ ವಕ್ತಾರ ರವಿಚಂದ್ರೇಗೌಡ ಅವರು ಪುತ್ರಿ ಪ್ರೇಕ್ಷಾ ಅವರೊಂದಿಗೆ ಮತಗಟ್ಟೆಗೆ ತೆರಳಿ ಮತ ಚಲಾಯಿಸಿದರು.



ಕೆಪಿಸಿಸಿ ಕಾರ್ಯದರ್ಶಿ ವರುಣ ಮಹೇಶ್ ತಮ್ಮ ಕುಟುಂಬದೊಂದಿಗೆ ಮತ ಚಲಾಯಿಸಿದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy News papers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com


ಮೈಸೂರು ಮಿತ್ರ




ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡರು ತಮ್ಮ ಪತ್ನಿ ಲಲಿತಾರೊಂದಿಗೆ ಮೈಸೂರು ತಾಲೂಕು ಗುಂಗ್ರಾಲ್ ಛತ್ರದ ಮತಗಟ್ಟೆಯಲ್ಲಿ ಮತ ಚಲಾಯಿಸಿದರು.



ಹುಣಸೂರಿನ ಮತಗಟ್ಟೆಯಲ್ಲಿ ಶಾಸಕ ಜಿ.ಡಿ.ಹರೀಶ್‌ಗೌಡರು ಹಕ್ಕು ಚಲಾಯಿಸಿದರು.



ಶಾಸಕ ಟಿ.ಎಸ್.ಶ್ರೀವತ್ಸ ಅವರು ಕೆಆರ್ ಕ್ಷೇತ್ರದ ಮತಗಟ್ಟೆಯಲ್ಲಿ ಮತದಾನ ಮಾಡಿದರು.



ಶ್ರೀರಾಂಪುರದ ಶ್ರೀಮತಿ ಪುಟ್ಟತಾಯಮ್ಮ ಪ್ರೌಢಶಾಲೆಯ ಮತಗಟ್ಟೆಯಲ್ಲಿ ಎಂಎಲ್‌ಸಿ ಮಂಜೇಗೌಡ ಮತದಾನ ಮಾಡಿದರು.



ಮಾಜಿ ಶಾಸಕ ಎಸ್.ಎ.ರಾಮದಾಸ್ ಅವರು ಕೆಆರ್ ಕ್ಷೇತ್ರದಲ್ಲಿ ಮತ ಚಲಾಯಿಸಿದರು.



ಇಟ್ಟಿಗೆಗೂಡಿನ ಸಾವಿತ್ರಿ ಕಾನ್ವೆಂಟ್ ಮತಗಟ್ಟೆಯಲ್ಲಿ ಮಾಜಿ ಮೇಯರ್ ಸಂದೇಶ್‌ಸ್ವಾಮಿ ಮತ ಚಲಾಯಿಸಿದರು.

ವಿಜಯನಗರದಲ್ಲಿ ಸಂಸದ ಪ್ರತಾಪ್ ಸಿಂಹ ಮತದಾನ

ಎಲ್ಲಾ ಕ್ಷೇತ್ರದಲ್ಲಿಯೂ ಗೆಲ್ಲುತ್ತೇವೆ: ವಿಶ್ವಾಸ

ಮೈಸೂರು, ಏ.26(ಜಿಎ)– ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಹಾಲಿ ಸಂಸದ ಪ್ರತಾಪ್ ಸಿಂಹ ಅವರು ಮೈಸೂರಿನ ವಿಜಯನಗರ 3ನೇ ಹಂತದಲ್ಲಿರುವ ರಾಯಲ್ ಕಾಂಕಾರ್ಡ್ ಇಂಟರ್‌ನ್ಯಾಷನಲ್ ಶಾಲೆಯ ಮತಗಟ್ಟೆ ಸಂಖ್ಯೆ 106ರಲ್ಲಿ ಸರದಿ ಸಾಲಿನಲ್ಲಿ ನಿಂತು ಮತ ಚಲಾಯಿಸಿದರು.



ನಂತರ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಶಿವಮೊಗ್ಗ ಹೊರತುಪಡಿಸಿ ಹಳೆ ಮೈಸೂರು ಪ್ರಾಂತ್ಯದ ಎಲ್ಲಾ ಕಡೆ ಚುನಾವಣೆ ನಡೆಯುತ್ತಿದೆ. ಜೆಡಿಎಸ್ ಮತ್ತು ಬಿಜೆಪಿ ಮೈತ್ರಿಯಾಗಿರುವುದರಿಂದ ಎಲ್ಲಾ ಕ್ಷೇತ್ರಗಳಲ್ಲಿ ಗೆಲ್ಲುತ್ತೇವೆ. ನಾಡಿಗೆ ನಾಲ್ವಡಿ ಕೃಷ್ಣರಾಜ ಒಡೆಯರ್ ಸಾಕಷ್ಟು ಕೆಲಸ ಮಾಡಿದ್ದಾರೆ. ನೂರು ವರ್ಷವಾದರೂ ಅವರ ಕೆಲಸವನ್ನು ಜನರು ಈಗಲೂ ನೆನೆಯುತ್ತಿದ್ದಾರೆ. ಈ ಬಾರಿ ಅವರ ವಂಶಸ್ಥರೇ ನಿಂತಿರುವುದರಿಂದ ಗೆಲ್ಲುತ್ತೇವೆ ಎಂದರು. ಈ ಹಿಂದೆ ಜೆಡಿಎಸ್ ಕಾರ್ಯಕರ್ತರು ನನ್ನ ಜೊತೆ ಇದ್ದರು. ಈ ಬಾರಿ ಮೈತ್ರಿಯಾಗಿರುವುದರಿಂದ ಇನ್ನು ಅನುಕೂಲವಾಗಲಿದೆ. ಚುನಾವಣೆ ನಡೆಯುತ್ತಿರುವುದು ದೇಶದ ಸದೃಢತೆಗಾಗಿ. ಪ್ರಧಾನಿ ನರೇಂದ್ರ ಮೋದಿಯವರು ಸದೃಢವಾಗಿ ದೇಶ ಕಟ್ಟುವ ಕೆಲಸ ಮಾಡಿದ್ದಾರೆ. ಈ ಬಾರಿ ರಾಜ್ಯದಲ್ಲಿ 28 ಕ್ಕೆ 28 ಸ್ಥಾನ ಗೆಲ್ಲುತ್ತೇವೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಸಿಎಫ್‌ಟಿಆರ್‌ಐ ಶಾಲೆಯಲ್ಲಿ ಡಿಸಿ ರಾಜೇಂದ್ರ ಹಕ್ಕು ಚಲಾವಣೆ

ಮೈಸೂರು, ಏ.26(ಜಿಎ)–ಮೈಸೂರು ಜಿಲ್ಲಾಧಿಕಾರಿ ಮತ್ತು ಜಿಲ್ಲಾ ಚುನಾವಣಾಧಿಕಾರಿಯೂ ಆದ ಡಾ.ಕೆವಿ.ರಾಜೇಂದ್ರ ಅವರು ಸಿಎಫ್‌ಟಿಆರ್‌ಐ ಶಾಲೆಯಲ್ಲಿ ಮತ ಚಲಾಯಿಸಿ, ಸೆಲ್ಫಿ ಬೂತ್ ಬಳಿ ಜಿಲ್ಲಾ ಪಂಚಾಯಿತ್ ಸಿಇಓ ಕೆ.ಎಂ.ಗಾಯಿತ್ರಿ, ನಗರ ಪೊಲೀಸ್ ಆಯುಕ್ತ ಬಿ.ರಮೇಶ್ ಫೋಟೋ ಕ್ಲಿಕ್ಕಿಸಿಕೊಂಡರು.



ನಂತರ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಯಾರಿಗೆ ಎಷ್ಟೇ ಒತ್ತಡವಿದ್ದರೂ ಮತದಾನದಿಂದ ವಂಚಿತರಾಗಬಾರದು. ನಾನು ಜಿಲ್ಲಾ ಚುನಾವಣಾಧಿಕಾರಿಯಾಗಿ ಎಷ್ಟೇ ಒತ್ತಡ ಇದ್ದರೂ ಕೂಡ ಮತದಾನ ಮಾಡಿದ್ದೇನೆ. ಜಿಲ್ಲೆಯಾದ್ಯಂತ ಜನರು ಸ್ವಯಂ ಪ್ರೇರಣೆಯಿಂದ ಈ ಬಾರಿ ಹೆಚ್ಚಿನ ಪ್ರಮಾಣದಲ್ಲಿ ಮತದಾನ ಮಾಡಿ ತಮ್ಮ ಸಾಂವಿಧಾನಿಕ ಹಕ್ಕು ಚಲಾಯಿಸಿದ್ದಾರೆ ಎಂದರು. ಜಿಲ್ಲೆಯಲ್ಲಿ ಹೆಚ್ಚು ಪ್ರಮಾಣದಲ್ಲಿ ಮತದಾನವಾಗಲೂ ಜಿಲ್ಲಾ ಸ್ವೀಪ್ ಸಮಿತಿ ಶ್ರಮ ಕಾರಣವಾಗಿದೆ. ದೊಡ್ಡ ಮಟ್ಟದಲ್ಲಿ ಯಾವುದೇ ಸಮಸ್ಯೆ ಎದುರಾಗಿಲ್ಲ. ಕೆಲವೊಂದು ಇವಿಎಂಗಳಲ್ಲಿ ದೋಷ ಕಂಡು ಬಂದಿದ್ದು, ಅಧಿಕಾರಿಗಳು ತಕ್ಷಣ ಬಗೆಹರಿಸಿದ್ದಾರೆ ಎಂದು ತಿಳಿಸಿದರು.

ಕುಟುಂಬ ಸಮೇತರಾಗಿ ಮತ ಚಲಾಯಿಸಿದ ಶಾಸಕ ತನ್ವೀರ್ ಸೇಠ್

ಮೈಸೂರು, ಏ.26(ಜಿಎ)– ಶಾಸಕರು ಮತ್ತು ಕೆಪಿಸಿಸಿ ಕಾರ್ಯಾಧ್ಯಕ್ಷರೂ ಆದ ತನ್ವೀರ್ ಸೇಠ್ ಮತಗಟ್ಟೆ ಸಂಖ್ಯೆ 127ಕ್ಕೆ ಭೇಟಿ ನೀಡಿ ಕುಟುಂಬ ಸಮೇತರಾಗಿ ಮತ ಚಲಾಯಿಸಿದರು.

ಉದಯಗಿರಿಯ ತಮ್ಮ ನಿವಾಸದಿಂದ ಕೂಗಳತೆ ದೂರದಲ್ಲಿರುವ ಬನುಮಯ್ಯ ಕಾಲೇಜಿನ ಮತಗಟ್ಟೆಗೆ ತಮ್ಮ ಪತ್ನಿಯೊಂದಿಗೆ ನಡೆದುಕೊಂಡು ಬಂದರು. ಅವರ ತಾಯಿಯನ್ನು ಮತಗಟ್ಟೆಯಲ್ಲಿದ್ದ ವೀಲ್ಹ್ ಚೇರ್ ಸಹಾಯದಿಂದ ಮತಗಟ್ಟೆಗೆ ಕರೆದುಕೊಂಡು ಬಂದು ಕುಟುಂಬ ಸಮೇತ ಮತದಾನ ಮಾಡಿದರು.



ನಂತರ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಸಂವಿಧಾನ, ಪ್ರಜಾಪ್ರಭುತ್ವ ಹಾಗೂ ರಾಜ್ಯದ ಜನರ ಹಿತದೃಷ್ಟಿಯಿಂದ ಎಲ್ಲರೂ ಉತ್ಸಾಹದಿಂದ ಮತದಾನ ಮಾಡುತ್ತಿದ್ದಾರೆ. ದೇಶದಲ್ಲಿ ಕಳೆದ ಹತ್ತು ವರ್ಷಗಳಿಂದ ಯಾವುದೇ ಅಭಿವೃದ್ಧಿಯಾಗಿಲ್ಲ. ಜನರ ಉತ್ಸಾಹ ನೋಡಿದರೆ ನೈಜ ಫಲಿತಾಂಶ ಬರುತ್ತದೆ ಎಂಬ ನಿರೀಕ್ಷೆ ಇದೆ. ಜನರ ಬದುಕಿನ ಜೊತೆ ಚೆಲ್ಲಾಟ ಆಡಿದವರಿಗೆ ಮತದಾರರು ಉತ್ತರ ನೀಡಲಿದ್ದಾರೆ. ಸಾಮಾನ್ಯ ಮತದಾರರು ಸ್ವಯಂ ಪ್ರೇರಣೆಯಿಂದ ಮತದಾನ ಮಾಡುತ್ತಿದ್ದಾರೆ. ಇದರಿಂದ ದೇಶವನ್ನು ಬಲಿಷ್ಠವಾಗಿ ಮಾಡಬಹುದು ಎಂದರು.



ಸರದಿ ಸಾಲಿನಲ್ಲಿ ನಿಂತು ಮಹಿಳೆಯರು ಹಾಗೂ ಹಿರಿಯರು ಶಾಂತಿಯುತವಾಗಿ ಮತದಾನ ಮಾಡಿದರು.



ವಿಧಾನಪರಿಷತ್ ಮಾಜಿ ಸದಸ್ಯ ಸಂದೇಶ್ ನಾಗರಾಜ್ ಅವರು, ತಮ್ಮ ಪುತ್ರ ಸಂದೇಶ್ ಎನ್. ಅವರೊಡಗೂಡಿ ಮತದಾನ ಮಾಡಿದರು.




ಮೈಸೂರು ನಗರ ಪೊಲೀಸ್ ಆಯುಕ್ತ ಬಿ.ರಮೇಶ್ ಅವರು ತಮ್ಮ ಪತ್ನಿ ಶ್ರೀಮತಿ ಜ್ಯೋತಿ ರಮೇಶ್ ಅವರೊಂದಿಗೆ ಮತ ಚಲಾವಣೆ ಮಾಡಿದರು.



ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಗಾಯಿತ್ರಿ ಅವರು ಕುಟುಂಬ ಸದಸ್ಯರೊಂದಿಗೆ ಮತದಾನ ಮಾಡಿದರು.



ಮಾಜಿ ಉಪಮೇಯರ್ ವಿ.ಶೈಲೇಂದ್ರ ಅವರು ಕುಟುಂಬಸ್ಥರೊಂದಿಗೆ ಮತಗಟ್ಟೆಗೆ ಆಗಮಿಸಿ, ಮತದಾನ ಮಾಡಿದರು.



ಮಾಜಿ ಎಂಎಲ್‌ಸಿ ಮರಿತಿಬ್ಬೇಗೌಡ ಮತ ಚಲಾಯಿಸಿದರು.



ಬಿಜೆಪಿ ಮುಖಂಡ ಪಡುವಾರಹಳ್ಳಿ ರಾಮಕೃಷ್ಣ ಮತದಾನ ಮಾಡಿದರು.



ಲಯನ್ ಜೆ.ಲೋಕೇಶ್ ಅವರು ಕುಟುಂಬಸ್ಥರೊಂದಿಗೆ ಮತದಾನ ಮಾಡಿದರು.



ಉದ್ಯಮಿ ಕೆ.ಪ್ರದೀಪ್‌ಸಿಂಗ್ ಅವರು ಪತ್ನಿ ನಿರ್ಮಲಾ ಪ್ರದೀಪ್‌ಸಿಂಗ್, ಪುತ್ರ ಅಮೃತ್‌ಸಿಂಗ್‌ರೊಂದಿಗೆ ಮತದಾನ ಮಾಡಿದರು.



ಕೃಷ್ಣರಾಜ ವಿಧಾನಸಭಾ ಕ್ಷೇತ್ರದ ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ಪತ್ನಿ ಎಲ್.ಕುಸುಮಾ, ಪುತ್ರಿ ಪ್ರನುಷಾ ದೀಪಕ್ ಅವರೊಂದಿಗೆ ಮರಿಮಲ್ಲಪ್ಪ ಕಾಲೇಜು ಮತ ಕೇಂದ್ರದ ಬೂತ್ ನಂ.239ರಲ್ಲಿ ಮತ ಚಲಾಯಿಸಿದರು.



ಮೈಸೂರು ಜಿಲ್ಲಾ ಬಿಜೆಪಿ ಅಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ ಪತ್ನಿಯೊಂದಿಗೆ ಆಗಮಿಸಿ, ಮತದಾನ ಮಾಡಿದರು.



ಮಾಜಿ ಕಾರ್ಪೋರೇಟರ್ ಎಸ್‌ಬಿಎಂ ಮಂಜು, ಪತ್ನಿ ಹಾಗೂ ಪುತ್ರಿಯೊಂದಿಗೆ ಮತದಾನ ಮಾಡಿದರು.

ಮತ ಚಲಾಯಿಸಿ ಸಂಭ್ರಮಿಸಿದ ತೃತೀಯಲಿಂಗಿಗಳು

ಮೈಸೂರು, ಏ.26(ಜಿಎ)–ಪ್ರಜಾಪ್ರಭುತ್ವದ ದೊಡ್ಡ ಹಬ್ಬವಾದ ಮತದಾನದ ಹಬ್ಬವನ್ನು ತೃತೀಯ ಲಿಂಗಿಗಳು ಮತಗಟ್ಟೆಯಲ್ಲಿ ಮತದಾನ ಮಾಡುವ ಮೂಲಕ ಆಚರಿಸಿದ್ದಾರೆ.

ಪ್ರತಿ ಚುನಾವಣೆಯಲ್ಲಿ ಮತದಾನ ಮಾಡುವಂತೆ ಎಲ್ಲಾ ವರ್ಗದವರಿಗೆ ಜಾಗೃತಿ ಮೂಡಿಸಲಾಗುತ್ತದೆ. ಆದರೆ, ತೃತೀಯಲಿಂಗಿಗಳು ಮತದಾರರ ಪಟ್ಟಿಯಲ್ಲಿ ನಮ್ಮ ಹೆಸರಿಲ್ಲ ಎಂದು ಹೇಳಿಕೊಂಡು ಮತದಾನದಿಂದ ವಂಚಿತರಾಗುತ್ತಿದ್ದರು. ಈ ಬಾರಿ ಕಳೆದ ಬಾರಿಗಿಂತ ಹೆಚ್ಚಿನ ತೃತೀಯಲಿಂಗಿಗಳು ಮತದಾನ ಮಾಡುವ ಮೂಲಕ ತಮ್ಮ ಹಕ್ಕನ್ನು ಪ್ರದರ್ಶಿಸಿದ್ದಾರೆ.




ಮೈಸೂರಿನ ಚಾಮರಾಜ ಜೋಡಿ ರಸ್ತೆಯಲ್ಲಿರುವ ಉರ್ದು ಶಾಲೆಯಲ್ಲಿ ತೃತೀಯಲಿಂಗಿಗಳ ಮುಖ್ಯಸ್ಥೆ ಪ್ರಣತಿ ಪ್ರಕಾಶ್ ಮತದಾನ ಮಾಡಿ ತಮ್ಮ ಸಂತಸವನ್ನು 'ಮೈಸೂರು ಮಿತ್ರ'ನೊಂದಿಗೆ ಹಂಚಿಕೊಂಡಿದ್ದಾರೆ.

ನಮ್ಮ ಸಮುದಾಯದವರು ಈ ಬಾರಿ ಮೈಸೂರು ಜಿಲ್ಲೆ ಸೇರಿದಂತೆ ತಾಲೂಕಿನ ಮತಕೇಂದ್ರಗಳಿಗೆ ಭೇಟಿ ನೀಡಿ ಕಳೆದ ಬಾರಿಗಿಂತ ಹೆಚ್ಚಿನ ಪ್ರಮಾಣದಲ್ಲಿ ಮತದಾನ ಮಾಡಿ ಸಮುದಾಯದ ವಾಟ್ಸ್ ಅಪ್ ಗ್ರೂಪ್‌ನಲ್ಲಿ ಮತದಾನ ಮಾಡಿದರ ಬಗ್ಗೆ ಫೋಟೋ ಹಂಚಿಕೊಂಡಿದ್ದಾರೆ ಎಂದು ತಿಳಿಸಿದರು.

ಚಿತ್ರದುರ್ಗದ ಮತಗಟ್ಟೆಯಲ್ಲೇ ಚುನಾವಣಾ ಸಿಬ್ಬಂದಿ ಸಾವು

ಚಿತ್ರದುರ್ಗ, ಏ.26– ಲೋಕಸಭಾ ಚುನಾವಣೆ ಹಿನ್ನೆಲೆಯಲ್ಲಿ ಚುನಾವಣಾ ಕಾರ್ಯಕ್ಕೆಂದು ತೆರಳಿದ್ದ ಚುನಾವಣಾ ಸಿಬ್ಬಂದಿ ಕಾರ್ಯ ನಿರ್ವಹಿಸುತ್ತಲೇ ಲೋ ಬಿಪಿಯಿಂದಾಗಿ ತಲೆ ಸುತ್ತು ಬಂದು ಬಿದ್ದಿದ್ದಾರೆ. ಕೂಡಲೇ ಅವರನ್ನು ಸ್ಥಳೀಯ ಚಳ್ಳಕೆರೆ ಆಸ್ಪತ್ರೆಗೆ ದಾಖಲಿಸಲು ಮುಂದಾದರೂ ಅಷ್ಟರೊಳಗೆ ಅವರು ಕೊನೆಯುಸಿರೆಳೆದಿದ್ದರು.ಚಿತ್ರದುರ್ಗ ಜಿಲ್ಲೆ ಚಳ್ಳಕೆರೆ ತಾಲೂಕಿನ ಹೊಟ್ಟೆಪ್ಪನಹಳ್ಳಿಯಲ್ಲಿ ಘಟನೆ ನಡೆದಿದ್ದು, ಮೃತರನ್ನು ಹೊಟ್ಟೆಪ್ಪನಹಳ್ಳಿ ಮತಗಟ್ಟೆ ಸಿಬ್ಬಂದಿ ಯಶೋಧಮ್ಮ (55) ಎಂದು ಗುರುತಿಸಲಾಗಿದೆ. ಎಲ್ಲ ಚುನಾವಣಾ ಸಿಬ್ಬಂದಿಯಂತೆ ಮತಗಟ್ಟೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಯಶೋಧಮ್ಮ ಅವರು ಲೋ ಬಿಪಿಯಿಂದಾಗಿ ಅಸ್ವಸ್ಥಗೊಂಡಿದ್ದಾರೆ. ಚಳ್ಳಕೆರೆ ಆಸ್ಪತ್ರೆಗೆ ಕರೆತರುವಷ್ಟರಲ್ಲಿ ಮೃತರಾಗಿದ್ದಾರೆ. ಮೃತ ಯಶೋಧಮ್ಮ ಚಳ್ಳಕೆರೆ ಪಟ್ಟಣದ ವಿಠಲನಗರದ ನಿವಾಸಿಯಾಗಿದ್ದರು.



ಡಿ.ವೆಂಕಟರಾಜು ಹಾಗೂ ಶ್ರೀಮತಿ ಪವಿತ್ರ ದಂಪತಿ ಮತದಾನ ಮಾಡಿದರು.



ವಿಧಾನಪರಿಷತ್ ಸದಸ್ಯ ಡಿ.ತಿಮ್ಮಯ್ಯ ಅವರು ಕಾಂಗ್ರೆಸ್ ಮುಖಂಡ ಎಡತೊರೆ ಲಿಂಗರಾಜು ಇತರರೊಂದಿಗೆ ಮತದಾನ ಮಾಡಿದರು.


ಸಚಿವ ಚಲುವರಾಯಸ್ವಾಮಿ ಕುಟುಂಬದವರೊಂದಿಗೆ ಮತದಾನ.


ಕುಟುಂಬದವರ ಜೊತೆ ಮತ ಚಲಾಯಿಸಿದ ಸಿ.ಎಸ್.ಪುಟ್ಟರಾಜು.


ಕುಟುಂಬದವರ ಜೊತೆ ಮತ ಚಲಾಯಿಸಿದ ಡಿ.ಸಿ.ತಮ್ಮಣ್ಣ.


ಡಾ.ಶ್ರೀತ್ರಿನೇತ್ರಮಹಂತಸ್ವಾಮಿ ಮತದಾನ.

ರಾಜ್ಯದಲ್ಲೇ ಅತೀ ಹೆಚ್ಚು ಮಂಡ್ಯದಲ್ಲಿ ಶೇ.81ರಷ್ಟು ಮತದಾನ

● ಸಣ್ಣಪುಟ್ಟ ಘಟನೆ ಹೊರತುಪಡಿಸಿ ಬಹುತೇಕ ಶಾಂತಿಯುತ ● ಹಲವು ಮತಕೇಂದ್ರದಲ್ಲಿ ಕೈಕೊಟ್ಟ ಇವಿಎಂ ● ಸಿಎಲ್‌ಆರ್‌ಎಸ್, ಸಿಎಸ್ಪಿ, ಸುಮಲತಾ ಸೇರಿ ಗಣ್ಯರ ಓಟಿಂಗ್ ● ಹಲವು ಮತ ಕೇಂದ್ರಗಳಿಗೆ ಅಭ್ಯರ್ಥಿ ಹೆಚ್ಚಿಕೆ ಭೇಟಿ ● ಅಮೇರಿಕಾ, ಲಂಡನ್‌ನಿಂದ ಆಗಮಿಸಿ ಮತದಾನ


ರವಿಂದ್ರ ಶ್ರೀಕಂಠಯ್ಯ ಪತ್ನಿಯೊಂದಿಗೆ ಮತದಾನ.


ಮಧು ಜಿ.ಮಾದೇಗೌಡ ಮತದಾನ.


ಕುಟುಂಬದೊಂದಿಗೆ ನರೇಂದ್ರಸ್ವಾಮಿ ಮತದಾನ.


ದರ್ಶನ್ ಮತ ಚಲಾವಣೆ.


ಶಾಸಕ ಮಂಜು ಕುಟುಂಬದೊಂದಿಗೆ ಮತದಾನ


ಕುಟುಂಬ ಸದಸ್ಯರೊಂದಿಗೆ ನಾರಾಯಣಗೌಡ.

ಮಂಡ್ಯ,ಏ.26– ಮಂಡ್ಯ ಲೋಕಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಸಣ್ಣ–ಪುಟ್ಟ ಘಟನೆಗಳನ್ನು ಹೊರತುಪಡಿಸಿ ಯಶಸ್ವಿಯಾಗಿ ಮತದಾನ ಪ್ರಕ್ರಿಯೆ ಪೂರ್ಣಗೊಂಡಿದ್ದು, ಜಿಲ್ಲೆಯಲ್ಲಿ ಶೇ.81.48ರಷ್ಟು ಮತದಾನವಾಗಿದೆ.

ಬೆಳಿಗ್ಗೆ 7ಗಂಟೆಯಿಂದಲೇ ಆರಂಭವಾದ ಮತದಾನ ಪ್ರಕ್ರಿಯೆಯಲ್ಲಿ ಮತದಾರರು ಬೆಳ್ಳಂ ಬೆಳಿಗ್ಗೆ ಚುರುಕಿನಿಂದ ಮತಚಲಾಯಿಸಿದರು. ಬೆಳಿಗ್ಗೆ 9ಗಂಟೆ ವೇಳೆಗೆ ಶೇ.7.70ರಷ್ಟು ಮತದಾನವಾಗಿತ್ತು. ಕೆಲಸಕ್ಕೆ ಹೋಗುವವರು ಹಾಗೂ ಕೃಷಿಕರು ಬಲು ಬೇಗ ಮತದಾನ ಮಾಡಿ, ತಮ್ಮ ಕಾರ್ಯಕ್ಕೆ ತೆರಳುತ್ತಿದ್ದ ದೃಶ್ಯ ಕಂಡು ಬಂತು.

ಬಳಿಕ ಬೆಳಿಗ್ಗೆ 9ಗಂಟೆಗೆ ಇನ್ನು ವೇಗ ಪಡೆದ ಮತದಾನ ಪ್ರಕ್ರಿಯೆಯು 11 ಗಂಟೆ ಆಗುವಷ್ಟರಲ್ಲಿ 21.24ರಷ್ಟು ಮತದಾನವಾದರೆ, ಮಧ್ಯಾಹ್ನ 1ಗಂಟೆ ವೇಳೆಗೆ 40ರಷ್ಟು ಮತದಾನ ನಡೆದಿತ್ತು. ಬಳಿಕ ಮಧ್ಯಾಹ್ನ ಮೂರು ಗಂಟೆ ವೇಳೆಗೆ ಬಿಸಿಲಿನ ತಾಪ ಹೆಚ್ಚಾದ ಪರಿಣಾಮ 57.43ರಷ್ಟಾದರೆ 4ಗಂಟೆಯ ಬಳಿಕ ಮತ್ತೆ ಮತದಾನ



ಪ್ರಕ್ರಿಯೆ ಚುರುಕುಗೊಂಡು 5 ಗಂಟೆ ವೇಳೆಗೆ ಶೇ.74.87ರಷ್ಟು ಮತದಾನವಾದರೆ ಅಂತಿಮವಾಗಿ ಶೇ81ರಷ್ಟು ಮತದಾನವಾಗಿದೆ.

ಉತ್ಸಾಹದಿಂದ ಯುವಮತದಾರರ ಮತದಾನ: ಈ ಬಾರಿ ಹಲವು ಮಂದಿ ಯುವ ಮತದಾರರು ಅತ್ಯುತ್ಸಾಹದಿಂದ ಮತದಾನ ಮಾಡುತ್ತಿದ್ದ ದೃಶ್ಯ ಕಂಡು ಬಂತು. ಮಂಡ್ಯ ನಗರದ ಬನ್ನೂರು ಬಡಾವಣೆಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಪ್ರಥಮ ಬಾರಿಗೆ ಮತದಾನ ಮಾಡುತ್ತಿರುವ ಇಂಜಿನಿಯರಿಂಗ್ ವಿದ್ಯಾರ್ಥಿನಿಗಳಾದ ಪ್ರಾಚಿ, ಕಾರಸವಾಡಿಯ 43ನೇ ಬೂತ್‌ನಲ್ಲಿ ಮತದಾನ ಮಾಡಿದ ಸ್ಫಟಿಕಾ ಜೈನ್, ಅನ್ನಪೂರ್ಣೇಶ್ವರಿ ಬಡಾವಣೆಯಲ್ಲಿ ಮತದಾನ ಮಾಡಿದ ರುಚಿತಾ, ಮಂಡ್ಯ ನಗರದ ವಾರ್ಡ್ ನಂ.17ರ ಮತಗಟ್ಟೆ ಸಂಖ್ಯೆ 197ರ ಆದರ್ಶ ಆಂಗ್ಲ ಮಾಧ್ಯಮ ಶಾಲೆಯಲ್ಲಿ ಉಮೇ ಸಾನಿಯಾ ಇದೇ ಮೊದಲ ಬಾರಿಗೆ ಮತದಾನ ಮಾಡಿದರು. ಮತದಾನ ಮಾಡಿದ ಬಳಿಕ ಸಂತಸ ವ್ಯಕ್ತಪಡಿಸಿದರು. ಈ ಸಂದರ್ಭದಲ್ಲಿ ಮಾತನಾಡಿದ ಪ್ರಥಮ ಬಾರಿಗೆ ಮತದಾನ ಮಾಡಿದ ಪ್ರಾಚಿ ಎಂಬ ವಿದ್ಯಾರ್ಥಿನಿ, ಮೊದಲ ಬಾರಿಗೆ ಮತ ಹಾಕಿದ್ದು, ಖುಷಿ ತಂದಿದೆ. ಯುವ ಮತದಾರರು ಕಡ್ಡಾಯವಾಗಿ ಮತದಾನದಲ್ಲಿ ಪಾಲ್ಗೊಳ್ಳಿ ಎಂದು ಮನವಿ ಮಾಡಿದರು.

ಲಂಡನ್‌ನಿಂದ ಬಂದು ಮತದಾನ: ಲಂಡನ್‌ನಲ್ಲಿ ಐಟಿ ಕನ್ಸಲ್ಟೆಂಟ್ ಆಗಿರುವ ಮಂಡ್ಯದ ಯುವತಿ ಸೋನಿಕಾ ಸಾವಿರಾರು ಕಿಲೋ ಮೀಟರ್‌ನಿಂದ ಮತದಾನ ಮಾಡಲು ತವರು ಜಿಲ್ಲೆಗೆ ಆಗಮಿಸಿದ್ದು ಭಾರೀ ವಿಶೇಷವಾಗಿತ್ತು. ಲೋಕಸಭಾ ಚುನಾವಣೆಯಲ್ಲಿ ಮತದಾನ ಮಾಡಲೇಬೇಕೆಂದು ಮಂಡ್ಯ ತಾಲೂಕಿನ ಕಾಳೇನಹಳ್ಳಿ ಗ್ರಾಮದ ಸೋನಿಕಾ ಎಂಬುವವರು ವಾರದ ಹಿಂದೆಯೇ ಪ್ಲಾನ್ ಮಾಡಿ ಬಂದು ಹಕ್ಕು ಚಲಾಯಿಸಿ, ಪ್ರಜಾಪ್ರಭುತ್ವ ವ್ಯವಸ್ಥೆಗೆ ಸೋನಿಕಾ ಮಾದರಿಯಾಗಿದ್ದಾರೆ.

ಮತದಾನಕ್ಕಾಗಿ ಮಂಡ್ಯಕ್ಕೆ ಬಂದ ಪ್ರಕೃತಿ: ಮಂಡ್ಯ ನಗರದ ನಿವೃತ್ತ ತಹಶೀಲ್ದಾರ್ ಕೆ.ಎಂ.ಸ್ವಾಮಿ ಗೌಡ ಅವರ ಪುತ್ರಿ ಕೆ.ಎಸ್.ಪ್ರಕೃತಿ ಅವರು ಅಮೇರಿಕಾದ ಕ್ಯಾಲಿಫೋರ್ನಿಯಾದಿಂದ ಮಂಡ್ಯಕ್ಕೆ ಆಗಮಿಸಿ ಮಂಡ್ಯ ವಿಶ್ವವಿದ್ಯಾನಿಲಯ ಮತಗಟ್ಟೆ ಸಂಖ್ಯೆ 167 ರಲ್ಲಿ ಮತದಾನ ಮಾಡಿದರು.

ಜಿಲ್ಲೆಯ ವಿವಿಧೆಡೆ ಘಟಾನುಘಟಿಗಳಿಂದ ಮತದಾನ

ಮಂಡ್ಯ: ಮಂಡ್ಯ ಲೋಕಸಭಾ ಕ್ಷೇತ್ರದ ಚುನಾವಣೆಯಲ್ಲಿ ಘಟಾನುಘಟಿ ನಾಯಕರು ಮತಚಲಾಯಿಸಿದರು. ಜೆಡಿಎಸ್ ಅಭ್ಯರ್ಥಿ ಹೆಚ್.ಡಿ.ಕುಮಾರಸ್ವಾಮಿ ರಾಮನಗರ ಜಿಲ್ಲೆಯ ಬಿಡದಿ ಸಮೀಪದ ಕೇತಗಾನ ಹಳ್ಳಿಯ ಮತಕೇಂದ್ರದಲ್ಲಿ ಪತ್ನಿ ಅನಿತಾ ಕುಮಾರಸ್ವಾಮಿ ಹಾಗೂ ಪುತ್ರ ನಿಖಿಲ್ ಕುಮಾರಸ್ವಾಮಿ ಜೊತೆಗೆ ತೆರಳಿ ಮತಚಲಾಯಿಸಿದರು.

ಕಾಂಗ್ರೆಸ್ ಅಭ್ಯರ್ಥಿ ವೆಂಕಟರಮಣೇಗೌಡ ಆಲಿಯಾಸ್ ಸ್ಟಾರ್‌ಚಂದ್ರು ಬೆಂಗಳೂರಿನ ಮಹಾಲಕ್ಷ್ಮಿ ಲೇಔಟ್‌ನ ಮತಕೇಂದ್ರದಲ್ಲಿ ಮತಚಲಾಯಿಸಿದರೆ, ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ, ಸ್ವಗ್ರಾಮ ನಾಗಮಂಗಲ ತಾಲೂಕಿನ ಇಜ್ಜಲಘಟ್ಟದ ಮತಗಟ್ಟೆ ಸಂಖ್ಯೆ 212ರಲ್ಲಿ ಮತಚಲಾಯಿಸಿದರು. ಈ ಸಂದರ್ಭದಲ್ಲಿ ಅವರ ಪತ್ನಿ ಧನಲಕ್ಷ್ಮಿ ಹಾಗೂ ಪುತ್ರ ಸಚಿನ್ ಸಾಥ್ ನೀಡಿದರು.

ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಪಾಂಡವಪುರ ತಾಲೂಕಿನ ಚಿನಕುರಳಿ ಗ್ರಾಮದ ಕರ್ನಾಟಕ ಪಬ್ಲಿಕ್ ಶಾಲೆಯ ಮತಗಟ್ಟೆ ಸಂಖ್ಯೆ 138ರಲ್ಲಿ ಪತ್ನಿ ನಾಗಮ್ಮ ಹಾಗೂ ಪುತ್ರರಾದ ಶಿವರಾಜ್, ಅಶೋಕ್ ಜೊತೆಗೆ ಆಗಮಿಸಿ ಮತದಾನ ಮಾಡಿದರೆ ಅತ್ತ ಮದ್ದೂರು ತಾಲೂಕಿನ ದೊಡ್ಡರಸಿನಕೆರೆ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಮತಗಟ್ಟೆ ಸಂಖ್ಯೆ 164ರಲ್ಲಿ ಸಂಸದೆ ಸುಮಲತಾ ಅಂಬರೀಷ್ ಮತದಾನ ಮಾಡಿದರು.

ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ, ನಾಗಮಂಗಲ ತಾಲ್ಲೂಕಿನ ಆದಿಚುಂಚನಗಿರಿ ಸಮೀಪದ ಚುಂಚನಹಳ್ಳಿಯಲ್ಲಿ ಮತದಾನ ಮಾಡಿದರೆ, ಶಾಸಕರಾದ ಪಿ.ಎಂ. ನರೇಂದ್ರಸ್ವಾಮಿ, ಪತ್ನಿ ಹಾಗೂ ಮಕ್ಕಳ ಜೊತೆಗೆ ಮಳವಳ್ಳಿ ತಾಲ್ಲೂಕಿನ ಪುರಿಗಾಲಿಯಲ್ಲಿ ಮತಚಲಾಯಿಸಿದರು. ಅತ್ತ ಮದ್ದೂರಿನ ಕದಲೂರಿನಲ್ಲಿ ಶಾಸಕ ಉದಯ್‌ಗೌಡ ಸಹ ಕುಟುಂಬದವರೊಂದಿಗೆ ಮತ ಚಲಾಯಿಸಿದರು. ಮಂಡ್ಯ ಶಾಸಕ ಗಣಿಗ ರವಿಕುಮಾರ್, ಪತ್ನಿ ಜೊತೆಗೆ ಮಂಡ್ಯ ತಾಲೂಕಿನ ಗಣಿಗ ಗ್ರಾಮದಲ್ಲಿ ಮತ ಹಾಕಿದರೆ ಶಾಸಕ ದರ್ಶನ್ ಪುಟ್ಟಣ್ಣಯ್ಯ, ಪಾಂಡವಪುರ ತಾಲೂಕಿನ ಕ್ಯಾತನಹಳ್ಳಿಯಲ್ಲಿ ತಾಯಿ ಹಾಗೂ ಸಹೋದರಿಯರೊಂದಿಗೆ ಆಗಮಿಸಿ ಮತ ಚಲಾಯಿಸಿದರು. ಶ್ರೀರಂಗಪಟ್ಟಣ ಶಾಸಕ ರಮೇಶ್ ಬಂಡಿಸಿದ್ದೇಗೌಡ ತಮ್ಮ ತಾಯಿ ಹಾಗೂ ಮಾಜಿ ಶಾಸಕಿ ವಿಜಯಲಕ್ಷ್ಮಿ ಬಂಡಿಸಿದ್ದೇಗೌಡ, ಪತ್ನಿ ಹಾಗೂ ಮಕ್ಕಳೊಂದಿಗೆ ಹಕ್ಕು ಚಲಾಯಿಸಿದರು.


ಕೆ.ಆರ್.ಪೇಟೆ ತಾಲೂಕಿನ ಹರಳಹಳ್ಳಿಯಲ್ಲಿ ಪತ್ನಿಯೊಂದಿಗೆ ಶಾಸಕ ಹೆಚ್.ಟಿ. ಮಂಜು ಮತಚಲಾಯಿಸಿದರೆ, ಮಾಜಿ ಸಚಿವ ಕೆ.ಸಿ.ನಾರಾಯಣಗೌಡ ಪತ್ನಿ ಹಾಗೂ ಮಕ್ಕಳೊಂದಿಗೆ ಕೆ.ಆರ್.ಪೇಟೆ ಟೌನ್‌ನಲ್ಲಿ ಹಕ್ಕು ಚಲಾಯಿಸಿದರು.



ಮೈಸೂರಿನ ರಾಜೀವ್‌ನಗರದಲ್ಲಿರುವ ಬಾಬು ಜಗಜೀವನರಾಮ್ ಶಾಲೆಯ ಮತಗಟ್ಟೆಯಲ್ಲಿ ಸೋಶಿಯಲ್ ಡೆಮಾಕ್ರಟಿಕ್ ಪಾರ್ಟಿ ಆಫ್ ಇಂಡಿಯಾ(SDPI) ರಾಜ್ಯಾಧ್ಯಕ್ಷರಾದ ಅಬ್ದುಲ್ ಮಜೀದ್ ಅವರು ತಮ್ಮ ಕುಟುಂಬದವರೊಂದಿಗೆ ಬಂದು ಮತ ಚಲಾಯಿಸಿದರು.


ಬಿಜೆಪಿ ರಾಜ್ಯ ಹಿಂದುಳಿದ ವರ್ಗಗಳ ಮೋರ್ಚಾ ಅಧ್ಯಕ್ಷ ರಘು ಕೌಟಿಲ್ಯ ಮತ ಚಲಾಯಿಸಿದರು



ಕರ್ನಾಟಕ ಪ್ರದೇಶ ಕುರುಬರ ಸಂಘದ ಮಾಜಿ ಅಧ್ಯಕ್ಷ ಬಿ.ಸುಬ್ರಹ್ಮಣ್ಯ ಮತ ಚಲಾಯಿಸಿದರು


ರಘುಲಾಲ್ ಅಂಡ್ ಕಂಪನಿ ಮಾಲೀಕರಾದ ರಾಘವನ್ ಹಾಗೂ ಅವರ ಪತ್ನಿ ಶಾರದಾ ರಾಘವನ್, ಪುತ್ರಿ ವೃಷಿ, ತಾಯಿ ಶಾರದಾ ನಾರಾಯಣ ಅವರು ಮತದಾನ ಮಾಡಿದರು




ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಕೆ.ಸಿ.ನಾರಾಯಣ ಗೌಡ ಮತ ಚಲಾಯಿಸಿದರು


ಬಿಜೆಪಿ ಮುಖಂಡ ಜಯಪ್ರಕಾಶ್(ಜೆಪಿ) ಮತ ಚಲಾಯಿಸಿದರು





ಮೈಸೂರು ಅರಮನೆ ಮಂಡಳಿ ಉಪನಿರ್ದೇಶಕ ಟಿ.ಎಸ್.ಸುಬ್ರಹ್ಮಣ್ಯ ಅವರು ಪತ್ನಿ ಸಮೇತರಾಗಿ ಮತ ಚಲಾಯಿಸಿದರು


ಮುಡಾ ಮಾಜಿ ಸದಸ್ಯೆ ಶ್ರೀಮತಿ ಲಕ್ಷ್ಮಿದೇವಿ ಅವರು ಮತ ಚಲಾಯಿಸಿದರು



ಪಂಜಾಬ್ ರನ್ ಮಳೆಗೆ ಕೊಚ್ಚಿ ಹೋದ ಕೆಕೆಆರ್





ಕೋಲ್ಕತ್ತಾ, ಏ.26– ಜಾನಿ ಭೈರ್‌ಸ್ಟೋವ್ ಭರ್ಜರಿ ಶತಕ ಹಾಗೂ ಶಶಾಂಕ್ ಸಿಂಗ್, ಪ್ರಭ್ ಸಿಮ್ರನ್‌ಸಿಂಗ್ ಸ್ಫೋಟಕ ಅರ್ಧ ಶತಕಗಳ ನೆರವಿನಿಂದ ಪಂಜಾಬ್ ಕಿಂಗ್ಸ್ ಕೋಲ್ಕತ್ತಾ ನೈಟ್ ರೈಡರ್ಸ್ ವಿರುದ್ಧ 8 ವಿಕೆಟ್‌ಗಳ ಭರ್ಜರಿ ಜಯ ಸಾಧಿಸಿದೆ.

ಆ ಮೂಲಕ ಐಪಿಎಲ್ ಇತಿಹಾಸದಲ್ಲಿ ಚೇಸಿಂಗ್‌ನಲ್ಲಿ ತಂಡವೊಂದು ಗಳಿಸಿದ ಗರಿಷ್ಠ ರನ್ ಇದಾಗಿದ್ದು, ಇತ್ತೀಚೆಗೆ ಸನ್‌ರೈಸರ್ಸ್ ಹೈದರಾಬಾದ್ ವಿರುದ್ಧ ನಡೆದ ಪಂದ್ಯದಲ್ಲಿ ಆರ್‌ಸಿಬಿ ಚೇಸಿಂಗ್‌ನಲ್ಲಿ 262 ರನ್ ಗಳಿಸಿತ್ತು. ಇದು ದಾಖಲೆಯಾಗಿತ್ತು. ಇದೀಗ ಪಂಜಾಬ್ ಕಿಂಗ್ಸ್ ಸಹ 262 ರನ್ ಗಳಿಸಿ ಆರ್‌ಸಿಬಿ ದಾಖಲೆ ಸರಿಗಟ್ಟಿದೆ.

ಬೃಹತ್ ಚೇಸಿಂಗ್ ಆರಂಭಿಸಿದ ಪಂಜಾಬ್ ಕಿಂಗ್ಸ್ ಆರಂಭದಿಂದಲೇ ಸ್ಫೋಟಕ ಆಟವಾಡಿತು. ತಂಡದ ಪರ ಇನ್ನಿಂಗ್ಸ್ ಆರಂಭಿಸಿದ ಪ್ರಭ್ ಸಿಮ್ರನ್ ಸಿಂಗ್ ಹಾಗೂ ಜಾನಿ ಭೈರ್‌ಸ್ಟೋವ್ ಮೊದಲ ವಿಕೆಟ್‌ಗೆ 6 ಓವರ್‌ಗಳಲ್ಲಿ 93 ರನ್ ಗಳಿಸಿತು. ಈ ವೇಳೆ 20 ಎಸೆತಗಳಲ್ಲಿ 5 ಸಿಕ್ಸರ್, 4 ಬೌಂಡರಿ ಒಳಗೊಂಡ ಬಿರುಸಿನ 54 ರನ್ ಗಳಿಸಿ ಪ್ರಭ್ ಸಿಮ್ರನ್ ಸಿಂಗ್ ವಿಕೆಟ್ ಒಪ್ಪಿಸಿದರು. ಇವರ ಬೆನ್ನಲ್ಲೇ 26 ರನ್ ಗಳಿಸಿದ್ದ ರೀಲಿ ರೋಸೋ ಸಹ ಪೆವಿಲಿಯನ್‌ಗೆ ಮರಳಿದರು. ನಂತರ ಜೊತೆಯಾದ ಜಾನಿ ಭೈರ್‌ಸ್ಟೋವ್ ಹಾಗೂ ಶಶಾಂಕ್ ಸಿಂಗ್ ಕೆಕೆಆರ್ ಬೌಲರ್‌ಗಳ ವಿರುದ್ಧ ಬೆಂಕಿ–ಬಿರುಗಾಳಿಯಂತೆ ಬ್ಯಾಟಿಂಗ್ ನಡೆಸಿದರು. ಪರಿಣಾಮ ಪಂಜಾಬ್ 18.4 ಓವರ್‌ಗಳಲ್ಲೇ 262 ರನ್ ಗಳಿಸಿ ವಿಜಯಮಾಲೆ ಹಾಕಿಕೊಂಡಿತು. ಪಂಜಾಬ್ ಪರ ಜಾನಿ ಭೈರ್‌ಸ್ಟೋವ್ 48 ಎಸೆತಗಳಲ್ಲಿ 9 ಸಿಕ್ಸರ್, 8 ಬೌಂಡರಿ ಒಳಗೊಂಡ ಅಜೇಯ 108 ರನ್, ಶಶಾಂಕ್ ಸಿಂಗ್ 28 ಎಸೆತಗಳಲ್ಲಿ 8 ಸಿಕ್ಸರ್, 2 ಬೌಂಡರಿ ಒಳಗೊಂಡ 68 ರನ್ ಗಳಿಸಿದರು. ಕೆಕೆಆರ್ ಪರ ಸುನೀಲ್ ನರೇನ್ 1 ವಿಕೆಟ್ ಪಡೆದರು.

ಇದಕ್ಕೂ ಮುನ್ನ ಇಲ್ಲಿನ ಈಡನ್ ಗಾರ್ಡನ್ಸ್ ಮೈದಾನದಲ್ಲಿ ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಮಾಡಿದ ಕೋಲ್ಕತ್ತಾ ನೈಟ್ ರೈಡರ್ಸ್ 20 ಓವರ್‌ಗಳಲ್ಲಿ 6 ವಿಕೆಟ್ ನಷ್ಟಕ್ಕೆ 261 ರನ್ ಗಳಿಸಿತು. ಆರಂಭಿಕರಾಗಿ ಕಣಕ್ಕಿಳಿದ ಸುನೀಲ್ ನರೇನ್ ಮತ್ತು ಫಿಲ್ ಸಾಲ್ಟ್ ಜೋಡಿ ಮೊದಲ ವಿಕೆಟ್‌ಗೆ 138 ರನ್ ಪೇರಿಸುವ ಮೂಲಕ ತಂಡಕ್ಕೆ ಭರ್ಜರಿ ಆರಂಭ ಒದಗಿಸಿತು. ಆದರೆ ಸುನೀಲ್ ನರೇನ್ 32 ಎಸೆತಗಳಲ್ಲಿ 9 ಸಿಕ್ಸರ್, 4 ಬೌಂಡರಿ ಒಳಗೊಂಡ ಸ್ಫೋಟಕ 71 ರನ್ ಗಳಿಸಿದರೆ, ಫಿಲ್ ಸಾಲ್ಟ್ 37 ಎಸೆತಗಳಲ್ಲಿ 75 ರನ್ ಬಾರಿಸಿ ಪೆವಿಲಿಯನ್‌ಗೆ ಮರಳಿದರು. ನಂತರ ಕಣಕ್ಕಿಳಿದ ವೆಂಕಟೇಶ್ ಅಯ್ಯರ್ 33, ಆಂಡ್ರೆ ರಸೆಲ್ 24, ಶ್ರೇಯಸ್ ಅಯ್ಯರ್ 28, ರಿಂಕು ಸಿಂಗ್ 5, ರಮಣದೀಪ್ ಸಿಂಗ್ 6 ರನ್ ಗಳ ಕೊಡುಗೆ ನೀಡಿದರು. ಪಂಜಾಬ್ ಪರ ಅರ್ಷ್‌ದೀಪ್ ಸಿಂಗ್ 2, ಸ್ಯಾಮ್ ಕರ್‍ರನ್, ಹರ್ಷಲ್ ಪಟೇಲ್ ಮತ್ತು ರಾಹುಲ್ ಚಹಾರ್ ತಲಾ ಒಂದೊಂದು ವಿಕೆಟ್ ಪಡೆದರು. ಜಾನಿ ಭೈರ್‌ಸ್ಟೋವ್ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

ಅಂಕಪಟ್ಟಿ ವಿವರ

ತಂಡ	ಪಂದ್ಯಗಳು	ಗೆಲುವು	ಸೋಲು	ಡ್ರಾ	ಅಂಕ
ರಾಜಸ್ಥಾನ	8	7	1	0	14
ಕೋಲ್ಕತ್ತಾ	8	5	3	0	10
ಹೈದರಾಬಾದ್	8	5	3	0	10
ಲಕ್ನೋ	8	5	3	0	10
ಚೆನ್ನೈ	8	4	4	0	08
ಡೆಲ್ಲಿ	9	4	5	0	08
ಗುಜರಾತ್	9	4	5	0	08
ಪಂಜಾಬ್	9	3	6	0	06
ಮುಂಬೈ	8	3	5	0	06
ಬೆಂಗಳೂರು	9	2	7	0	04

ಇಂದಿನ ಪಂದ್ಯಗಳು

[ಏಪ್ರಿಲ್ 27]

ಡೆಲ್ಲಿ V/S ಮುಂಬೈ
ಸ್ಥಳ: ಅರುಣ್ ಜೇಟ್ಲಿ ಕ್ರೀಡಾಂಗಣ, ಡೆಲ್ಲಿ
ಸಮಯ: ಮಧ್ಯಾಹ್ನ 3.30

ಲಕ್ನೋ V/S ರಾಜಸ್ಥಾನ್
ಸ್ಥಳ: ವಾಜಪೇಯಿ ಕ್ರೀಡಾಂಗಣ, ಲಕ್ನೋ
ಸಮಯ: ರಾತ್ರಿ 7.30

ಜೀವನ ಪೂರ್ತಿ ಮರೆಯಲಾಗದ ಕ್ಷಣ!

ಮೊದಲ ಬಾರಿ ಮತದಾನ ಮಾಡಿದವರ ಹರ್ಷದ ಮಾತು



ಮೈಸೂರು, ಏ.26(ಎಂಕೆ)– ಮತದಾನ ದೇಶದ ಸಂವಿಧಾನ, ಪ್ರಜಾಪ್ರಭುತ್ವ ವ್ಯವಸ್ಥೆಯ ಮೇಲಿನ ಗೌರವ ಹೆಚ್ಚಿಸಿದೆ... ಮೊದಲ ಮತದಾನದ ಘಳಿಗೆಯನ್ನು ಜೀವನ ಪೂರ್ತಿ ಮರೆಯಲ್ಲ... ಇದೊಂದು ಸಂತೋಷದ ಸವಿಗಳಿಗೆ ಎಂಬಿತ್ಯಾದಿ ಹರ್ಷದಾಯಕ ಅಭಿಪ್ರಾಯವನ್ನು ಮೊದಲ ಬಾರಿ ಮತದಾನ ಮಾಡಿದ ಯುವ ಮತದಾರರು ಹಂಚಿಕೊಂಡಿದ್ದಾರೆ.

ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಭೇರ್ಯ ಗ್ರಾಮದ ಮತಗಟ್ಟೆಯಲ್ಲಿ ಮೊದಲ ಬಾರಿಗೆ ಮತದಾನ ಮಾಡಿದ ಯುವ ಮತದಾರನೋರ್ವ, ಶಾಲಾ–ಕಾಲೇಜಿನಲ್ಲಿ ಮಾದರಿ ಮತದಾನ ಮಾಡಿದ್ದೇನೆ. ಆದರೆ, ನಿಜವಾಗಿ ಮತದಾನ ಮಾಡಿದ ಹೊಸ ಅನುಭವ ಖುಷಿ ತಂದಿದೆ. ಜೀವನದಲ್ಲಿ ಮೊದಲ ಮತದಾನ ಮಡಿದ್ದನ್ನು ಇಡೀ ಜೀವನ ಪೂರ್ತಿ ಮರೆಯಲ್ಲ. ಮತದಾನದಿಂದಾಗಿ ಪ್ರಜಾಪ್ರಭುತ್ವ, ಸಂವಿಧಾನದ ಮೇಲಿನ ಗೌರವ ಹೆಚ್ಚಾಗಿದೆ ಎಂದು ತಿಳಿಸಿದ್ದಾರೆ.

ಹಾಗೆಯೇ ಚಾಮುಂಡೇಶ್ವರಿ ಕ್ಷೇತ್ರದ ಮತಗಟ್ಟೆ ಸಂಖ್ಯೆ 323ರಲ್ಲಿ ಕುಟುಂಬದೊಂದಿಗೆ ಮೊದಲ ಬಾರಿಗೆ ಮತದಾನ ಮಾಡಿದ ಯುವತಿ, ಫಸ್ಟ್ ಟೈಂ ವೋಟ್ ಮಾಡಿದ್ದು ತುಂಬಾ ಖುಷಿ ತಂದಿದೆ. ಮತಗಟ್ಟೆಯಲ್ಲಿ ಕುಡಿಯುವ ನೀರು ಸೇರಿದಂತೆ ಎಲ್ಲಾ ಬಗೆಯ ಮೂಲ ಸೌಕರ್ಯದ ವ್ಯವಸ್ಥೆಯನ್ನು ಅಚ್ಚುಕಟ್ಟಾಗಿ ಮಾಡಲಾಗಿದೆ. ನಾನು ಮತ ನೀಡಿದ್ದನ್ನು ಬೇರೆಯವರಿಗೂ ತಿಳಿಸಿ, ಅವರೂ ಮತ ನೀಡುವಂತೆ ಹೇಳುತ್ತೇನೆ ಎಂದರು.

ಹಾಗೆಂಯೇ ಸಿದ್ಧಾರ್ಥನಗರ ಜಿಎಸ್‌ಎಸ್‌ಎಸ್ ಶಾಲೆಯಲ್ಲಿ ಮೊದಲ ಬಾರಿಗೆ ಮತದಾನ ಮಾಡಿದ ಸೃಷ್ಟಿ, ಮೊದಲ ಬಾರಿಯ ಮತದಾನ ನನ್ನ ಜೀವನ ಅವಿಸ್ಮರಣೀಯ ಘಳಿಗೆಯಾಗಿದೆ ಎಂದು ಹರ್ಷ ವ್ಯಕ್ತಪಡಿಸಿದರು.

ಪ್ರಮಾಣ ಪತ್ರ ವಿತರಣೆ: ಮೊದಲ ಬಾರಿಗೆ ಮತದಾನ ಮಾಡಿದವರಿಗೆ ಜಿಲ್ಲಾ ಸ್ವೀಪ್ ಸಮಿತಿ ವತಿಯಿಂದ ಮತದಾನ ಪ್ರಮಾಣ ಪತ್ರ ನೀಡಿ ಅಭಿನಂದಿಸಲಾಯಿತು. ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜಿನಲ್ಲಿ ಮೊದಲ ಬಾರಿಗೆ ಮತದಾನ ಮಾಡಿದ ವರ್ಷಿತ, ಈಶ್ವರ್, ಪಾಷಾ ಮತ್ತಿತರರಿಗೆ ಪ್ರಮಾಣ ಪತ್ರ ನೀಡಲಾಯಿತು. ಈ ವೇಳೆ ಸ್ವೀಪ್ ಸಮಿತಿ ಅಧಿಕಾರಿಗಳು ಉಪಸ್ಥಿತರಿದ್ದರು.

ಬಾರಾಮುಲ್ಲಾ ಎನ್ಕೌಂಟರ್: ಇಬ್ಬರು ಉಗ್ರರು ಬಲಿ

ಶ್ರೀನಗರ: ಜಮ್ಮು ಮತ್ತು ಕಾಶ್ಮೀರದ ಬಾರಾಮುಲ್ಲಾದಲ್ಲಿ ಭಯೋತ್ಪಾದಕರು ಮತ್ತು ಭದ್ರತಾ ಪಡೆಗಳ ನಡುವೆ ನಡೆದ ಎನ್‌ಕೌಂಟರ್‌ನಲ್ಲಿ ಇಬ್ಬರು ಉಗ್ರರು ಹತರಾಗಿದ್ದು, ಇಬ್ಬರು ಯೋಧರು ಗಾಯಗೊಂಡಿದ್ದಾರೆ. ಉತ್ತರ ಕಾಶ್ಮೀರದ ಸೋಪೋರ್ ಪ್ರದೇಶದ ಚೆಕ್ ಮೊಹಲ್ಲಾ ನೌಪೋರಾದಲ್ಲಿ ಗುರುವಾರ ಭಯೋತ್ಪಾದಕರು ಮತ್ತು ಭದ್ರತಾ ಪಡೆಗಳ ನಡುವೆ ಎನ್‌ಕೌಂಟರ್ ಪ್ರಾರಂಭಗೊಂಡು, ಶುಕ್ರವಾರವೂ ಗುಂಡಿನ ದಾಳಿ ಮುಂದುವರೆದಿದೆ. ಎನ್ಕೌಂಟರ್‌ನಲ್ಲಿ ಇದೂವರೆಗೆ ಇಬ್ಬರು ಉಗ್ರರು ಬಲಿಯಾಗಿದ್ದು, ಇಬ್ಬರು ಯೋಧರಿಗೆ ಗಾಯಗಳಾಗಿವೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ. ಎನ್‌ಕೌಂಟರ್‌ನಲ್ಲಿ ಗಾಯಗೊಂಡ ಇಬ್ಬರು ಸೇನಾ ಸಿಬ್ಬಂದಿಯನ್ನು ಚಿಕಿತ್ಸೆಗಾಗಿ ಆಸ್ಪತ್ರೆಗೆ ರವಾನಿಸಲಾಗಿದೆ.

ಒಂದನೇ ಪುಟದಿಂದ

ಶಾಂತಿಯುತ ಮತದಾನ

ಮತ ಚಲಾಯಿಸಿದರು. ಸಮಯ 11 ಗಂಟೆ ಮೀರಿದರೆ ಬಿಸಿಲಿನ ತಾಪ ಹೆಚ್ಚಾಗುತ್ತದೆ ಎಂಬ ಕಾರಣದಿಂದ ಬೆಳಿಗ್ಗೆ 7 ಗಂಟೆಯಿಂದಲೇ ಮತದಾರರು ಮತದಾನ ಮಾಡಿದರು. ಇದರಿಂದ ಮತದಾನದ ಆರಂಭದಲ್ಲೇ ಬಹುತೇಕ ಮತಗಟ್ಟೆಗಳಲ್ಲಿ ಮತದಾರರ ಸರದಿ ಸಾಲು ಕಂಡು ಬಂದಿತು.

ಮಧ್ಯಾಹ್ನ 1 ಗಂಟೆ ತನಕ ಒಬ್ಬರು, ಇಬ್ಬರು ಬಂದು ಮತದಾನ ಮಾಡುತ್ತಿದ್ದರು. ಆದರೆ ಮಧ್ಯಾಹ್ನ 2 ಗಂಟೆಯಿಂದ 4 ಗಂಟೆ ತನಕ ಮತದಾರರು ಮತಗಟ್ಟೆಯತ್ತ ಮುಖ ಹಾಕಲೇ ಇಲ್ಲ. ಇದರಿಂದ ಬಹಳಷ್ಟು ಮತಗಟ್ಟೆಗಳು ಈ ಸಮಯದಲ್ಲಿ ಭಣಗುಟ್ಟುತ್ತಿತ್ತು. ಬಿಸಿಲಿನ ತಾಪ ಸ್ವಲ್ಪ ಕಡಿಮೆಯಾಗುತ್ತಲೇ ಸಂಜೆ 4 ಗಂಟೆ ನಂತರ ಮತದಾರರು ಮತಗಟ್ಟೆಗಳತ್ತ ಮುಖ ಮಾಡಿದರು. ಈ ಸಂದರ್ಭದಲ್ಲಿ ಬಹಳಷ್ಟು ಮತಗಟ್ಟೆಗಳಲ್ಲಿ ಮತದಾರರ ಸರದಿ ಸಾಲು ಕಂಡು ಬಂದಿತು.

ಈ ಬಾರಿ ಗ್ರಾಮೀಣ ಪ್ರದೇಶದಂತೆ ನಗರ ಪ್ರದೇಶಗಳ ಮತಗಟ್ಟೆಗಳಲ್ಲಿ ಕೂಡ ಮತದಾರರು ಮತದಾನ ಮಾಡಲು ಉತ್ಸಾಹ ತೋರಿದರು. ಸೂಕ್ಷ್ಮ ಮತಗಟ್ಟೆಯಲ್ಲಿ ಸಿಸಿ ಕ್ಯಾಮರಾಗಳನ್ನು ಅಳವಡಿಸಲಾಗಿತ್ತು. ಜಿಲ್ಲಾಧಿಕಾರಿ ಕಚೇರಿಯಲ್ಲಿರುವ ಕಂಟ್ರೋಲ್ ರೂಂನಲ್ಲಿ ಮತಗಟ್ಟೆಗಳ ಚಲನವಲನಗಳನ್ನು ಅಧಿಕಾರಿಗಳು ಸೂಕ್ಷ್ಮವಾಗಿ ಗಮನಿಸುತ್ತಿದ್ದರು. ಪ್ರತಿಯೊಂದು ಮತಗಟ್ಟೆಗೂ ಬಿಗಿ ಪೊಲೀಸ್ ಬಂದೋಬಸ್ತ್ ವ್ಯವಸ್ಥೆ ಮಾಡಲಾಗಿತ್ತು. ಸೂಕ್ಷ್ಮ ಮತಗಟ್ಟೆಗಳಲ್ಲಿ ಶಸ್ತ್ರಸಜ್ಜಿತ ಅರೆ ಸೇನಾ ಪಡೆಯನ್ನು ನಿಯೋಜಿಸಲಾಗಿತ್ತು.

ಮತಗಟ್ಟೆಯ 200 ಮೀಟರ್ ವ್ಯಾಪ್ತಿ ಬಿಟ್ಟು ಅಭ್ಯರ್ಥಿಗಳ ಪ್ರತಿನಿಧಿಗಳು ಟೇಬಲ್‌ಗಳನ್ನು ಹಾಕಿಕೊಳ್ಳಲು ಅವಕಾಶ ಕಲ್ಪಿಸಲಾಗಿತ್ತು. ಯಾರೂ ಕೂಡ ಮತಗಟ್ಟೆ ಸನಿಹದಲ್ಲಿ ಪ್ರಚಾರ ಮಾಡದಂತೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗಿತ್ತು. ಯಾವುದೇ ಅಹಿತಕರ ಘಟನೆ ನಡೆಯದಂತೆ ಪೊಲೀಸ್ ಅಧಿಕಾರಿಗಳು ಮುಂಜಾಗ್ರತಾ ಕ್ರಮ ವಹಿಸಿ ಗಸ್ತು ತಿರುಗುತ್ತಿದ್ದರು.

ಮೂರಕ್ಕಿಂತ ಹೆಚ್ಚು ಬೂತ್‌ಗಳಿರುವ ಮತಗಟ್ಟೆಗಳಲ್ಲಿ ಮತದಾನ ಸಹಾಯ ಕೇಂದ್ರದ ಮೂಲಕ ಮತದಾರರಿಗೆ ಸಲಹೆ ನೀಡಲಾಗುತ್ತಿತ್ತು. ಮತಗಟ್ಟೆಯಲ್ಲಿ ಮತದಾರರು ಅನಾರೋಗ್ಯಕ್ಕೀಡಾದರೆ ಚಿಕಿತ್ಸೆ ನೀಡಲು ಆರೋಗ್ಯ ಸಹಾಯಕರನ್ನು ನಿಯೋಜಿಸಲಾಗಿತ್ತು. ಬೇಸಿಗೆ ಬಿಸಿಲು ಇದ್ದ ಕಾರಣ ಪ್ರತಿ ಮತಗಟ್ಟೆ ಕೇಂದ್ರಗಳಲ್ಲಿ ಕುಡಿಯುವ ನೀರಿನ ಸೌಲಭ್ಯ ಕಲ್ಪಿಸಲಾಗಿತ್ತು. ಈ ಹಿಂದಿನ ಚುನಾವಣೆಗಳಲ್ಲಿ ಮತದಾರರ ಪಟ್ಟಿಯಲ್ಲಿ ಹೆಸರು ಕೈ ಬಿಟ್ಟಿರುವುದು, ಕಳ್ಳ ಮತದಾನ ಮಾಡಿರುವುದು ಸೇರಿದಂತೆ ಹಲವು ಸಮಸ್ಯೆಗಳು ಎದುರಾಗುತ್ತಿತ್ತು. ಆದರೆ ಈ ಬಾರಿಯ ಲೋಕಸಭಾ ಚುನಾವಣೆಯಲ್ಲಿ ಹಲವು ಕಟ್ಟುನಿಟ್ಟಿನ ಕ್ರಮಗಳಿಂದ ಇಂತಹ ಯಾವುದೇ ಸಮಸ್ಯೆಗಳು ಕಂಡ ಬರಲಿಲ್ಲ.

ಮುಖ್ಯಮಂತ್ರಿ ಸಿದ್ದರಾಮಯ್ಯ ತಮ್ಮ ಹುಟ್ಟೂರು ಸಿದ್ದರಾಮನಹುಂಡಿಯ ಸರ್ಕಾರಿ ಶಾಲೆಯ ಬೂತ್ ನಂಬರ್ 86 ರಲ್ಲಿ ತಮ್ಮ ಪುತ್ರ ಡಾ.ಯತೀಂದ್ರ ಜೊತೆ ಮತದಾನ ಮಾಡಿದರು.

ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಯದುವೀರ್, ಪತ್ನಿ ತ್ರಿಷಿಕಾ ಕುಮಾರಿ ಹಾಗೂ ತಾಯಿ ಪ್ರಮೋದಾ ದೇವಿ ಜೊತೆ ಮೈಸೂರಿನ ಅಗ್ರಹಾರದ ಶ್ರೀಕಾಂತ ಶಾಲೆಯ ಬೂತ್ ನಂಬರ್ 176 ರಲ್ಲಿ ಮತದಾನದ ಹಕ್ಕು ಚಲಾಯಿಸಿದರು. ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಎಂ.ಲಕ್ಷ್ಮಣ, ಪತ್ನಿ ರೂಪಶ್ರೀ, ಪುತ್ರ ಆದಿತ್ಯ ಹಾಗೂ ಪುತ್ರಿಯೊಂದಿಗೆ ಮೈಸೂರಿನ ಸುನಂದಾ ಪ್ರೈಮರಿ ಶಾಲೆಯ ಮತಗಟ್ಟೆಯಲ್ಲಿ ಮತ ಚಲಾಯಿಸಿದರು.

ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡರು, ಪತ್ನಿ ಲಲಿತಾ ಜೊತೆ ಗುಂಗ್ರಾಲ್ ಛತ್ರದ ಸರ್ಕಾರಿ ಶಾಲೆಯಲ್ಲಿ ಮತದಾನ ಮಾಡಿದರೆ, ಇವರು ಪುತ್ರ ಜಿ.ಡಿ.ಹರೀಶ್‌ಗೌಡ ಹುಣಸೂರು ಪಟ್ಟಣದ ಕರಿಗೌಡರ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಮತ ಚಲಾಯಿಸಿದರು. ಜಿಲ್ಲಾಧಿಕಾರಿಗಳೂ ಆದ ಜಿಲ್ಲಾ ಚುನಾವಣಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಮೈಸೂರಿನ ಸಿಎಫ್‌ಟಿಆರ್‌ಐ ಶಾಲೆಯಲ್ಲಿ ಮತದಾನ ಮಾಡಿದರು. ನಗರ ಪೊಲೀಸ್ ಆಯುಕ್ತ ಬಿ.ರಮೇಶ್, ಪತ್ನಿ ಜ್ಯೋತಿ ಜೊತೆ ನಗರದ ಜಲಪುರಿಯ ಪೊಲೀಸ್ ಕ್ವಾಟ್ರರ್ಸ್‌ನ ಸರ್ಕಾರಿ ಶಾಲೆಯಲ್ಲಿ ಮತದಾನದ ಹಕ್ಕು ಚಲಾವಣೆ ಮಾಡಿದರು.

ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸುತ್ತೂರಿನ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಮತಗಟ್ಟೆ ಸಂಖ್ಯೆ 191ರಲ್ಲಿ ಮತದಾನ ಮಾಡಿದರು. ಸುತ್ತೂರು ಮಠದ ಶ್ರೀ ಜಯರಾಜೇಂದ್ರ ಸ್ವಾಮೀಜಿ ಮೈಸೂರಿನ ನಂಜಗೂಡು ಊಟಿ ರಸ್ತೆಯ ಜೆಎಸ್‌ಎಸ್ ಕಾಲೇಜಿನಲ್ಲಿ ಮತ ಚಲಾಯಿಸಿದರು.

ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮದ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ನಗರದ ಸೈಂಟ್ ಮೇರಿಸ್ ಶಾಲೆಯಲ್ಲಿ ಮತದಾನ ಮಾಡಿದರು. ಇದೇ ಶಾಲೆಯಲ್ಲಿ ಮಾಜಿ ಶಾಸಕ ಎಸ್.ಎ.ರಾಮದಾಸ್ ಕೂಡ ಮತ ಚಲಾಯಿಸಿದರು.

ಹಾಲಿ ಸಂಸದ ಪ್ರತಾಪ್ ಸಿಂಹ ವಿಜಯನಗರದ ಕಾಂಕಾರ್ಡ್ ಶಾಲೆಯಲ್ಲಿ ತಮ್ಮ ಮತ ಹಕ್ಕು ಚಲಾಯಿಸಿದರೆ, ಶಾಸಕ ಟಿ.ಎಸ್.ಶ್ರೀವತ್ಸ ಸಂಸ್ಕೃತ ಪಾಠ ಶಾಲೆಯಲ್ಲಿ ಮತದಾನ ಮಾಡಿದರು. ನರಸಿಂಹರಾಜ ಕ್ಷೇತ್ರದ ಶಾಸಕ ತನ್ವೀರ್ ಸೇಠ್ ಉದಯಗಿರಿಯ ಬನುಮಯ್ಯ ಕಾಲೇಜಿನಲ್ಲಿ ಕುಟುಂಬ ಸಮೇತ ಮತ ಚಲಾಯಿಸಿದರು. ಸಮಾಜ ಕಲ್ಯಾಣ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಹಾಗೂ ಚಾಮರಾಜನಗರ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಸುನೀಲ್ ಬೋಸ್ ನಂಜನಗೂಡು ತಾಲೂಕು ಹದಿನಾರು ಗ್ರಾಮದ ಸರ್ಕಾರಿ ಶಾಲೆಯಲ್ಲಿ ಮತದಾನ ಮಾಡಿದರು. ಒಟ್ಟಾರೆ ಮೈಸೂರು ಕೊಡಗು ಲೋಕಸಭಾ ಕ್ಷೇತ್ರದಲ್ಲಿ ಯಾವುದೇ ಅಹಿತಕರ ಘಟನೆಗಳು ಜರಗದೆ ಶಾಂತಿಯುತ ಮತದಾನ ನಡೆಯಿತು.

ದೇಹದ ಅಂಗಾಂಗ ಸ್ವಾಧೀನದಲ್ಲಿಲ್ಲದಿದ್ದರೂ ಮತೋತ್ಸವದ ಮಹತ್ವ ಎತ್ತಿಹಿಡಿದ ಮಹನೀಯರು!

ಮೈಸೂರು, ಏ.26(ಎಂಕೆ)– ಆರೋಗ್ಯವಾಗಿದ್ದವರೇ ಮತದಾನ ಮಾಡಲು ಹಿಂದೇಟು ಹಾಕುವ ಹೊತ್ತಲ್ಲಿ ಕೈ–ಕಾಲು ಮತ್ತು ಬಾಯಿಯ ಸ್ವಾಧೀನ ಕಳೆದುಕೊಂಡಿರುವ ಮಹಿಳೆಯೊಬ್ಬರು ಮತದಾನ ಮಾಡುವ ಮೂಲಕ ತಮ್ಮ ಹಕ್ಕು ಚಲಾಯಿಸಿ ಪ್ರಜಾಪ್ರಭುತ್ವದ ಮೌಲ್ಯವನ್ನು ಎತ್ತಿ ಹಿಡಿದಿದ್ದಾರೆ.

ಮೈಸೂರಿನ ರಾಜೀವ್‌ನಗರ ನಿವಾಸಿ 48 ವರ್ಷ ವಯೋಮಾನದ ಜುಬೇದ ಬೇಗಂ, ಅನಾರೋಗ್ಯದಿಂದಾಗಿ ಕಳೆದ ಹತ್ತು ವರ್ಷಗಳಿಂದ ಹಾಸಿಗೆ ಹಿಡಿದಿದ್ದಾರೆ. ಬಲಗೈ, ಬಲಗಾಲು ಮತ್ತು ಬಾಯಿಯ ಸ್ವಾಧೀನ ಕಳೆದುಕೊಂಡಿರುವ ಅವರು, ಎನ್.ಆರ್.ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಮೈರಾ ಇಂಗ್ಲಿಷ್ ಶಾಲೆ(ಮತಗಟ್ಟೆ ಸಂಖ್ಯೆಗಳು–174, 175, 213, 214)ಗೆ ತಮ್ಮ ಸಹೋದರ ಫಯಾಜ್ ಪಾಷಾ ಜೊತೆ ಆಟೋದಲ್ಲಿ ಆಗಮಿಸಿದ ಅವರು, ತಮ್ಮ ಹಕ್ಕನ್ನು ಚಲಾಯಿಸುವ ಮೂಲಕ ಇತರರಿಗೆ ಮಾದರಿಯಾದರು.



ಜುಬೇದ ಬೇಗಂ



ಪುಟ್ಟಚನ್ನಮ್ಮ

ನಾವು 8 ಜನ ಮಕ್ಕಳು. ಒಬ್ಬಳೇ ತಂಗಿ. ತುಂಬಾ ಚೆನ್ನಾಗಿದ್ದರು. ಮದುವೆಯನ್ನು ಮಾಡಿದ್ದು, ಮಗಳು ಇದ್ದಾರೆ. ಹತ್ತು ವರ್ಷದ ಹಿಂದೆ ಬೆಳಗ್ಗೆ ತಿಂಡಿ ಮಾಡಿ ಕತ್ತನ್ನು ತಿರುಗಿಸಿದಷ್ಟೇ. ಇದ್ದಕ್ಕಿದ್ದಂತೆ ಬಲಗೈ, ಬಲಗಾಲು ಮತ್ತು ಬಾಯಿಯ ಸ್ವಾಧೀನ ಕಳದುಕೊಂಡರು. ನಿಮ್ಹಾನ್ಸ್‌ನಲ್ಲಿ ಚಿಕಿತ್ಸೆ ಕೊಡಿಸಿದರೂ ಯಾವುದೇ ಪ್ರಯೋಜನವಾಗಲಿಲ್ಲ ಕಡೆಗೆ ಪೋಲಿಯೋ ಇಂಜೆಕ್ಷನ್ ಹಾಕಿಸದೇ ಇದ್ದಿದ್ದರಿಂದ ಈ ರೀತಿಯಾಗಿದೆ ಎಂದು ವೈದ್ಯರು ಹೇಳಿದರು. ಹತ್ತು ವರ್ಷದಿಂದ ಒಂದೇ ಮಗ್ಗಲಲ್ಲಿ ಮಲಗಬೇಕು. ಇವತ್ತು ಎಷ್ಟೋ ದಿನಗಳ ಬಳಿಕ ಹೊರಗಡೆ ಕರೆದುಕೊಂಡು ಬಂದಿದ್ದೇನೆ ಎಂದು ಭಾವುಕರಾದರು.

23 ವರ್ಷದಿಂದ ಹಾಸಿಗೆ ಹಿಡಿದ ಪುಟ್ಟಚನ್ನಮ್ಮ ಮತದಾನ: ಮೈಸೂರಿನ ಬೆಲವತ್ತ ಗ್ರಾಮ ನಿವಾಸಿ 86 ವರ್ಷ ವಯಸ್ಸಿನ ಪುಟ್ಟಚನ್ನಮ್ಮ ತಮ್ಮ ಹಕ್ಕು ಚಲಾಯಿಸುವ ಮೂಲಕ ಮತದಾನದ ಮೌಲ್ಯ ಎತ್ತಿ ಹಿಡಿದರು. ಕಳೆದ 23 ವರ್ಷಗಳಿಂದ ಬಲಗೈ ಮತ್ತು ಬಲಗಾಲಿನ ಬೆರಳುಗಳ ಸ್ವಾಧೀನ ಕಳೆದುಕೊಂಡಿರುವ ಅವರು, ತಮ್ಮ ಪುತ್ರ ಬೆಲವತ್ತ ಶಿವಕುಮಾರ್ ಜೊತೆ ಮತಗಟ್ಟೆಗೆ ಆಗಮಿಸಿ ಮತದಾನ ಮಾಡಿದರು. ಹಾಗೆಯೇ ವಿವಿಧೆಡೆ ಅನಾರೋಗ್ಯದ ನಡುವೆಯೂ ಮತಚಲಾಯಿಸಲು ಮತದಾರರು ಆಗಮಿಸುತ್ತಿದ್ದ ದೃಶ್ಯಗಳು ಸಾಮಾನ್ಯವಾಗಿದ್ದವು.




ಮೈಸೂರಿನ ಗೌಸಿಯಾನಗರದಲ್ಲಿ ತಮ್ಮ ಪುತ್ರನೊಂದಿಗೆ ವಾಸವಿರುವ 112 ವರ್ಷದ ಬಹಜಾನ್ ಷರೀಫ್, ತಮ್ಮ ಸ್ವಗ್ರಾಮವಾದ ಮಂಡ್ಯ ಜಿಲ್ಲೆಯ ಬೇಬಿ ಗ್ರಾಮದಲ್ಲಿ ಮತ ಚಲಾಯಿಸಿದರು.



ವಿಶೇಷಚೇತನ ಸ್ವೀಪ್ ರಾಯಭಾರಿ ಮಧುಸೂದನ್ ಮತ ಚಲಾಯಿಸಿದರು

ವಿಶೇಷಚೇತನ ಸ್ವೀಪ್ ರಾಯಭಾರಿಗಳಿಂದ ಉತ್ಸಾಹದ ಮತದಾನ...



ಆನಂದರಾಜ್



ಅನಘ



ಶ್ರೀನಿವಾಸ್

ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಚುನಾವಣೆಯಲ್ಲಿ ವಿಶೇಷಚೇತನ ರಾಯಭಾರಿಗಳು ಮತ ಚಲಾಯಿಸುವ ಮೂಲಕ ಪ್ರಜಾಪ್ರಭುತ್ವಕ್ಕೆ ಶಕ್ತಿ ತುಂಬಿದರು.

ವಿಶೇಷಚೇತನ ಸ್ವೀಪ್ ರಾಯಭಾರಿಗಳಾದ ಮಹೇಂದ್ರ, ಕ್ರೀಡಾಪಟು ಆನಂದ್‌ರಾಜ್, ಎಂಎಸ್‌ಸಿ ಗೋಲ್ಡ್ ಮೆಡಲಿಸ್ಟ್ ಅನಘಾ, ಶ್ರೀನಿವಾಸ್, ಅಂತರಾಷ್ಟ್ರೀಯ ಈಜುಪಟು ಮಧುಸೂದನ್ ಮತಚಲಾಯಿಸುವ ಮೂಲಕ ತಮ್ಮ ಜವಾಬ್ದಾರಿ ನಿರ್ವಹಿಸಿದರು. ಹಾಗೆಯೇ ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಶೆಟ್ಟಿನಾಯಕನಹಳ್ಳಿ, ಕೆ.ಆರ್.ಕ್ಷೇತ್ರದ ನಾಚನಹಳ್ಳಿ ಪಾಳ್ಯದ ಜೆಎಸ್‌ಎಸ್ ಪ್ರೌಢಶಾಲೆ, ನರಸಿಂಹರಾಜ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಕೆಸರೆಯ ಬಿಟಿಎಲ್ ಸಂಯುಕ್ತ ಪದವಿ ಪೂರ್ವ ಕಾಲೇಜು ಹಾಗೂ ಚಾಮರಾಜ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಮೇಟಗಳ್ಳಿಯ ಜೆಎಸ್‌ಎಸ್ ಹೈಸ್ಕೂಲ್‌ನಲ್ಲಿ ಸ್ಥಾಪಿಸಿದ್ದ ವಿಶೇಷಚೇತನ ಮತಗಟ್ಟೆಗಳಲ್ಲಿ ಸಾವಿರಾರು ಮಂದಿ ವಿಶೇಷಚೇತನರು ಸರತಿ ಸಾಲಿನಲ್ಲಿ ನಿಂತು ಮತ ನೀಡುವ ಮೂಲಕ ಪ್ರಜಾಪ್ರಭುತ್ವದ ಹಬ್ಬದಲ್ಲಿ ಭಾಗಿಯಾದರು.



ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಶೆಟ್ಟಿನಾಯಕನಹಳ್ಳಿ ವಿಶೇಷಚೇತನ ಮತಗಟ್ಟೆಯಲ್ಲಿ ಮತ ಚಲಾಯಿಸಿದ ವಿಶೇಷಚೇತನರು

ಮೊಬೈಲ್ ನಿರ್ಬಂಧವಿದ್ದರೂ ಕೆಲವೆಡೆ ಡೋಂಟ್ ಕೇರ್...

ಮೈಸೂರು, ಏ.26(ಎಂಕೆ)– ಮತಗಟ್ಟೆಯೊಳಗೆ ಮೊಬೈಲ್ ತೆಗೆದುಕೊಂಡು ಹೋಗುವುದಕ್ಕೆ ನಿರ್ಬಂಧವಿದ್ದೂ ಮತದಾರರು ಯಾವುದೇ ಅಡೆ–ತಡೆ ಇಲ್ಲದೆ ಮತಗಟ್ಟೆಯೊಳಗೆ ಮೊಬೈಲ್ ತೆಗೆದುಕೊಂಡು ಹೋಗುತ್ತಿದ್ದ ದೃಶ್ಯಗಳು ಸಾಮಾನ್ಯವಾಗಿದ್ದವು.

ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದಲ್ಲಿ ಮತದಾನ ಯಶಸ್ವಿಯಾಗಿ ಪೂರ್ಣಗೊಂಡಿದ್ದು, ಮೈಸೂರು ನಗರ ವ್ಯಾಪ್ತಿಯ ನರಸಿಂಹರಾಜ, ಚಾಮರಾಜ ಮತ್ತು ಕೆ.ಆರ್.ಕ್ಷೇತ್ರದ ವ್ಯಾಪ್ತಿಯ ಮತಗಟ್ಟೆಗಳಲ್ಲಿ ಮತದಾರರು ಮತಗಟ್ಟೆಯೊಳಗೆ ಮೊಬೈಲ್‌ಗಳನ್ನು ರಾಜಾರೋಷವಾಗಿ ತೆಗೆದುಕೊಂಡು ಹೋಗುತ್ತಿದ್ದ ದೃಶ್ಯಗಳು ಕಂಡುಬಂದವು.



ಬಂದೋಬಸ್ತಿನಲ್ಲಿದ್ದ ಪೊಲೀಸರು ಕೆಲವು ಮತಗಟ್ಟೆಗಳಲ್ಲಿ ಮೊಬೈಲ್‌ಗಳನ್ನು ವಶಕ್ಕೆ ಪಡೆದರೆ, ಬಹುತೇಕ ಮತಗಟ್ಟೆಗಳಲ್ಲಿ ಮೊಬೈಲ್ ತೆಗೆದುಕೊಂಡು ಹೋಗಲು ಯಾವುದೇ ನಿರ್ಬಂಧವಿರಲಿಲ್ಲ. ತಪಾಸಣೆ ನಡೆಸಿ, ಮತಗಟ್ಟೆಯೊಳಗೆ ಕಳುಹಿಸಬೇಕಾದ ಪೊಲೀಸರು, ತಮಗೆ ಅರಿವಿಲ್ಲದಂತೆ ವರ್ತಿಸುತ್ತಿದ್ದ ದೃಶ್ಯಗಳು ಕಂಡುಬಂದವು. ಮತ್ತೆ ಕೆಲವೆಡೆ ಸ್ವಿಚ್ ಆಫ್ ಮಾಡಿಕೊಳ್ಳಿ ಎಂದು ಹೇಳುತ್ತಿದ್ದರೇ ಹೊರತು ಮೊಬೈಲ್ ಅನ್ನು ನಿಜವಾಗಿಯೂ ಸ್ವಿಚ್ ಆಫ್ ಮಾಡಿಕೊಂಡಿದ್ದಾರೆಯೇ ಎಂಬುದನ್ನು ಪರಿಶೀಲನೆ ಮಾಡುತ್ತಿರಲಿಲ್ಲ.



ಮೈಸೂರು ನಗರಪಾಲಿಕೆ ಮಾಜಿ ಉಪಮೇಯರ್ ಷಫಿ ಅಹಮದ್ ತಮ್ಮ ಬೆಂಬಲಿಗರೊಂದಿಗೆ ಮತ ಚಲಾಯಿಸಿದರು.

ಪಿರಿಯಾಪಟ್ಟಣದಲ್ಲಿ ಅಧಿಕ ಶೇ.80.12; ಚಾಮರಾಜದಲ್ಲಿ ಕಡಿಮೆ ಶೇ.60.64 ಮತದಾನ!

ಮೈಸೂರು, ಏ.26–ಮೈಸೂರು ಮತ್ತು ಕೊಡಗು ಲೋಕಸಭಾ ಕ್ಷೇತ್ರದ ಚುನಾವಣೆಯಲ್ಲಿ 7,29,714 ಪುರುಷರು, 7,41,603 ಮಹಿಳೆಯರು, 39 ಮಂದಿ ಇತರರು ಸೇರಿ ಒಟ್ಟು 14,71,356 ಮಂದಿ ಮತ ಚಲಾಯಿಸಿದ್ದು, ಶೇ.70.33ರಷ್ಟು ಮತದಾನವಾಗಿದೆ.

ಪಿರಿಯಾಪಟ್ಟಣ ವಿಧಾನಸಭಾ ಕ್ಷೇತ್ರದಲ್ಲಿ ಅತೀ ಹೆಚ್ಚು ಎಂದರೆ 80,380 ಪುರುಷರು, 78,752 ಮಹಿಳೆಯರು ಸೇರಿ ಒಟ್ಟು 1,59,134 ಮಂದಿ ಮತ ಚಲಾಯಿಸಿದ್ದು, ಶೇ.80.12ರಷ್ಟು ಮತದಾನವಾಗಿದೆ. ಅತೀ ಕಡಿಮೆ ಎಂದರೆ ಚಾಮರಾಜ ಕ್ಷೇತ್ರದಲ್ಲಿ 77,044 ಪುರುಷರು, 78,958 ಮಹಿಳೆಯರು, 500 ಇತರರು ಸೇರಿ 1,56,007 ಮಂದಿ ಮತ ಚಲಾಯಿಸಿದ್ದು, ಶೇ.60.64ರಷ್ಟು ಮತದಾನವಾಗಿದೆ.

ಮಡಿಕೇರಿ ಕ್ಷೇತ್ರದಲ್ಲಿ 87,683 ಪುರುಷರು, 91,249 ಮಹಿಳೆಯರು, ಇಬ್ಬರು ಇತರರು ಸೇರಿ 1,78,934 ಮಂದಿ ಮತ ಚಲಾಯಿಸಿದ್ದು, ಶೇ.74.95ರಷ್ಟು ಮತದಾನವಾಗಿದೆ. ವಿರಾಜಪೇಟೆ ಕ್ಷೇತ್ರದಲ್ಲಿ 84,274 ಪುರುಷರು, 86,503 ಮಹಿಳೆಯರು ಸೇರಿ 1,70,777 ಮಂದಿ ಮತ ಚಲಾಯಿಸಿದ್ದು, ಶೇ.73.60ರಷ್ಟು ಮತದಾನವಾಗಿದೆ. ಹುಣಸೂರು ಕ್ಷೇತ್ರದಲ್ಲಿ 96,796 ಪುರುಷರು, 95,565 ಮಹಿಳೆಯರು, ಐವರು ಇತರರು ಸೇರಿ 1,92,366 ಮಂದಿ ಮತ ಚಲಾಯಿಸಿದ್ದು, ಶೇ.77.69ರಷ್ಟು ಮತದಾನವಾಗಿದೆ. ಚಾಮುಂಡೇಶ್ವರಿ ಕ್ಷೇತ್ರದಲ್ಲಿ 1,27,113 ಪುರುಷರು, 1,27,768 ಮಹಿಳೆಯರು, 6 ಮಂದಿ ಇತರರು ಸೇರಿ 2,54,893 ಮಂದಿ ಮತ ಚಲಾಯಿಸಿದ್ದು, ಶೇ.73.08ರಷ್ಟು ಮತದಾನವಾಗಿದೆ.

ಕೃಷ್ಣರಾಜ ಕ್ಷೇತ್ರದಲ್ಲಿ 78,085 ಪುರುಷರು, 79,406 ಮಹಿಳೆಯರು, 7 ಮಂದಿ ಇತರರು ಸೇರಿ 1,57,498 ಮಂದಿ ಮತ ಚಲಾಯಿಸಿದ್ದು, ಶೇ.61ರಷ್ಟು ಮತದಾನವಾಗಿದೆ. ನರಸಿಂಹರಾಜ ಕ್ಷೇತ್ರದಲ್ಲಿ 98,333 ಪುರುಷರು, 1,03,402 ಮಹಿಳೆಯರು, 12 ಮಂದಿ ಇತರರು ಸೇರಿ 2,01,747 ಮಂದಿ ಮತದಾನ ಮಾಡಿದ್ದು, ಶೇ.68.87ರಷ್ಟು ಮತದಾನವಾಗಿದೆ.

ಕೊಡಗು–ಮೈಸೂರು ಲೋಕಸಭಾ ಕ್ಷೇತ್ರದಲ್ಲಿ ಮೈಸೂರು ನಗರ ವ್ಯಾಪ್ತಿಗೆ ಒಳಪಟ್ಟಿರುವ ಕೃಷ್ಣರಾಜ, ಚಾಮರಾಜ ಮತ್ತು ನರಸಿಂಹರಾಜ ವಿಧಾನಸಭಾ ಕ್ಷೇತ್ರಗಳು ಗ್ರಾಮಾಂತರ ಪ್ರದೇಶದ ಕ್ಷೇತ್ರಗಳಿಗಿಂತ ಮತದಾನದಲ್ಲಿ ಹಿಂದೆ ಬಿದ್ದಿವೆ.

ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಗ್ರಾಮೀಣ ಪ್ರದೇಶದಲ್ಲಿ ಬಿರುಸಿನ ಮತದಾನ

ಮೈಸೂರು, ಏ.26(ಎಂಟಿವೈ)– ತೀವ್ರ ಕುತೂಹಲ ಕೆರಳಿಸಿರುವ ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಚುನಾವಣೆಯಲ್ಲಿ ಚಾಮುಂಡೇಶ್ವರಿ, ಹುಣಸೂರು, ಪಿರಿಯಾ ಪಟ್ಟಣ ವಿಧಾನಸಭಾ ಕ್ಷೇತ್ರಗಳ ಗ್ರಾಮೀಣ ಪ್ರದೇಶದಲ್ಲಿ ಬಿರುಸಿನ ಮತದಾನವಾಯಿತು.

ಲೋಕಸಭಾ ಚುನಾವಣೆಯಲ್ಲಿ ಮತದಾರರು ನಿರಾಸಕ್ತಿ ಪ್ರದರ್ಶಿಸಬಹುದು ಎಂಬ ಅನುಮಾನ ಕಾಡುತ್ತಿತ್ತು. ಹೆಚ್ಚಿನ ಪ್ರಮಾಣದಲ್ಲಿ ಮತದಾನವಾಗುವಂತೆ ಸ್ವೀಪ್ ಸಮಿತಿ ವಿವಿಧ ಕಾರ್ಯಕ್ರಮಗಳ ಮೂಲಕ ಜಾಗೃತಿ ಮೂಡಿಸಿತ್ತು. ಇದರ ಅಂಗವಾಗಿ ನಗರ ಪ್ರದೇಶದ ಮತದಾರರಿಗಿಂತ ಗ್ರಾಮೀಣ ಪ್ರದೇಶದ ಮತದಾರರೇ ಮತದಾನಕ್ಕೆ ಉತ್ಸಾಹಭರಿತರಾಗಿದ್ದರು.

ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದಲ್ಲಿ 18 ಅಭ್ಯರ್ಥಿಗಳಿದ್ದರೂ ಕಾಂಗ್ರೆಸ್ ಹಾಗೂ ಬಿಜೆಪಿ ಅಭ್ಯರ್ಥಿಯ ನಡುವೆ ನೇರ ಹಣಾಹಣಿ ಏರ್ಪಟ್ಟಿತ್ತು. ಮೈಸೂರಿನ ಚಾಮುಂಡೇಶ್ವರಿ ಕ್ಷೇತ್ರದ ಬೋಗಾದಿ, ಮರಟಿಕ್ಯಾತನಹಳ್ಳಿ, ಹಿನಕಲ್, ಇಲವಾಲ, ಗುಂಗ್ರಾಲ್ ಛತ್ರ, ರಮ್ಮನಹಳ್ಳಿ, ಹಂಚ್ಯಾ, ಸಿದ್ದಲಿಂಗಪುರ, ಆಲನಹಳ್ಳಿ, ಜಯಪುರ, ದೂರ, ಉದ್ಬೂರು ಸೇರಿದಂತೆ ವಿವಿಧ ಗ್ರಾಮಗಳಲ್ಲಿ ಬೆಳಗ್ಗಿನಿಂದಲೇ ಮತದಾರರು ಮತಗಟ್ಟೆಗಳಿಗೆ ಬಂದು ಮತ ಚಲಾಯಿಸಲು ಉತ್ಸಾಹ ಪ್ರದರ್ಶಿಸಿದರು. ಮತದಾನಕ್ಕೆ ಬರುವ ಮತದಾರರಿಗೆ ಯಾವುದೇ ಸಮಸ್ಯೆಯಾಗದಂತೆ ಕೆಲವೆಡೆ ಪೆಂಡಾಲ್ ಹಾಕಿ, ಸರದಿ ಸಾಲಿನಲ್ಲಿ ನಿಲ್ಲುವ ವ್ಯವಸ್ಥೆ ಮಾಡಲಾಗಿತ್ತು.


ಹುಣಸೂರು ತಾಲೂಕಿನ ಬಿಳಿಕೆರೆ, ಬನ್ನಿಕುಪ್ಪೆ, ಕಾಡನಕೊಪ್ಪಲು, ಸೋಮನಹಳ್ಳಿ, ಎಮ್ಮೆಕೊಪ್ಪಲು, ತಂಬಡಹಳ್ಳಿ, ಮೋದೂರು, ಯಶೋಧರಪುರ, ಪಕ್ಷಿರಾಜಪುರ, ಬಿಬಿಸಿ ಕಾಲೋನಿ, ನಾಗಾಪುರ ಹಾಡಿ, ಪಂಚವಳ್ಳಿ, ಹನಗೋಡು ಸೇರಿದಂತೆ ವಿವಿಧ ಗ್ರಾಮಗಳಲ್ಲಿ ಬಿರುಸಿನ ಮತದಾನವಾಯಿತು.

ಪಿರಿಯಾಪಟ್ಟಣ ಕ್ಷೇತ್ರದ ಬೆಟ್ಟದಪುರ, ಕಿತ್ತೂರು, ಅತ್ತಿಗೋಡು, ರಾವಂದೂರು, ಕಂಪ್ಲಾಪುರ, ಕೊಪ್ಪ, ಬೈಲುಕುಪ್ಪೆ, ಹಾರನಹಳ್ಳಿ, ಕಣಗಾಲು, ಕೀರನಹಳ್ಳಿ, ಸುಂಡವಾಳು, ಜವನಿಕುಪ್ಪೆ ಸೇರಿದಂತೆ ಹಲವು ಗ್ರಾಮಗಳಲ್ಲೂ ಮತದಾನ ಚುರುಕಿನಿಂದ ನಡೆಯಿತು.

ಮತಗಟ್ಟೆಗಳ ಮುಂದೆ ಕಸರತ್ತು: ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಬಹುತೇಕ ಮತಗಟ್ಟೆಗಳ ಮುಂದೆ ಕಾಂಗ್ರೆಸ್, ಬಿಜೆಪಿ–ಜೆಡಿಎಸ್ ಕಾರ್ಯಕರ್ತರು ಅಂತಿಮ ಕ್ಷಣದಲ್ಲೂ ಮತದಾರರ ಓಲೈಕೆಗೆ ತೀವ್ರ ಕಸರತ್ತು ನಡೆಸುತ್ತಿದ್ದರು.

ಪವಿತ್ರ ಮತ ಚಲಾಯಿಸಲು ಲಂಡನ್ ಟು ಮಂಡ್ಯ; ಆಸ್ಟ್ರೇಲಿಯಾ ಟು ಮೈಸೂರು!

ತಾಯ್ನಾಡಿನ ರಾಜಕೀಯ ಪ್ರಜ್ಞೆ ಮೆರೆದ ಅನಿವಾಸಿ ಭಾರತೀಯರು



ಸೋನಿಕಾ



ಪಲ್ಲವಿ ಎಂ. ಕೌಶಿಕ್



ಎಸ್.ಭಾರದ್ವಾಜ್



ಚೇತನಾ ಮಾಲಂಗಿ

ಮೈಸೂರು,ಏ.26– ಲಕ್ಷಾಂತರ ಪ್ರಯಾಣ ವೆಚ್ಚ ಭರಿಸಿ ಹಲವರು ವಿದೇಶದಿಂದ ಮರಳಿ ತಮ್ಮ ಅಮೂಲ್ಯ ಮತದಾನದ ಹಕ್ಕು ಚಲಾಯಿಸಿದ್ದಾರೆ. ಆ ಮೂಲಕ ತಮ್ಮ ಊರಿನಲ್ಲೇ ಇರುವ ಮತಗಟ್ಟೆಗೆ ಹೋಗಿ ಮತದಾನ ಮಾಡದ ಸೋಮಾರಿಗಳಿಗೆ ಮತದಾನ ಮಹತ್ವ ಬಗ್ಗೆ ಸಂದೇಶ ರವಾನಿಸಿದ್ದಾರೆ.

ದೂರದ ಲಂಡನ್‌ನಿಂದ ಮಂಡ್ಯಗೆ ಬಂದು ತಮ್ಮಿಷ್ಟದ ಅಭ್ಯರ್ಥಿಗೆ ಯುವತಿಯೊಬ್ಬರು ಮತದಾನ ಮಾಡುವ ಮೂಲಕ ಇತರರಿಗೆ ಮಾದರಿಯಾಗಿದ್ದಾರೆ. ಮಂಡ್ಯದ ಕಾಳೇನಹಳ್ಳಿಯ ಗ್ರಾಮದ ನಿವಾಸಿ ಸೋನಿಕಾ, ಲಂಡನ್‌ನಿಂದ ಬಂದು ಮತ ಚಲಾಯಿಸಿದವರು. ಇವರು ಎರಡು ವರ್ಷದ ಹಿಂದೆ ಉದ್ಯೋಗಕ್ಕಾಗಿ ಲಂಡನ್‌ಗೆ ತೆರಳಿದ್ದು, ಇದೀಗ ಅಲ್ಲಿ ಐಟಿ ಕನ್ಸಲ್ಟೆಂಟ್ ಆಗಿ ಕಾರ್ಯ ನಿರ್ವಹಿಸುತ್ತಿದ್ದಾರೆ.


ಈಗ ಬರುವ ಯಾವುದೇ ಪ್ಲಾನ್ ಇರಲಿಲ್ಲ, ಆದರೆ ಮತ ಚಲಾಯಿಸಲು ಅಷ್ಟು ದೂರದಿಂದ ಬಂದಿದ್ದೇನೆ. ಇದಕ್ಕಾಗಿ ಒಂದೂವರೆ ಲಕ್ಷ ವೆಚ್ಚವಾಗಿದೆ ಎಂದು ಸೋನಿಕಾ ತಿಳಿಸಿದ್ದಾರೆ.

ವಿದೇಶದಿಂದ ಮರಳಿದ ಮೈಸೂರಿಗರು: ಪ್ರಸ್ತುತ ಆಸ್ಟ್ರೇಲಿಯಾದಲ್ಲಿ ನೆಲೆಸಿರುವ ಮೂಲತಃ ಮೈಸೂರು ಜೆ.ಪಿ.ನಗರ ನಿವಾಸಿ ಕೆ.ಆರ್.ಮಂಜುನಾಥ್ ಅವರ ಪುತ್ರಿ ಪಲ್ಲವಿ ಎಂ.ಕೌಶಿಕ್ ಸಹ ಮೈಸೂರಿಗೆ ಬಂದು ಮತದಾನ ಮಾಡಿದ್ದಾರೆ. ಆ ಮೂಲಕ ಪ್ರಜಾಪ್ರಭುತ್ವ ಹಬ್ಬದಲ್ಲಿ ಭಾಗಿಯಾಗಿ ಎಲ್ಲರಿಗೂ ಮಾದರಿಯಾಗಿದ್ದಾರೆ.


ಅಂತೆಯೇ ಕುವೆಂಪುನಗರ ಕಾಮಾಕ್ಷಿ ಆಸ್ಪತ್ರೆ ರಸ್ತೆ ಕುವೆಂಪು ಪ್ರೌಢಶಾಲೆ ಬಳಿಯ ನಿವಾಸಿ ಎಸ್.ಭಾರದ್ವಜ್ ಅವರು, ಪ್ರಸ್ತುತ ಆಸ್ಟ್ರೇಲಿಯಾದ ಸಿಡ್ನಿಯಲ್ಲಿ ಐಟಿ ಕನ್ಸಲ್ಟೆಂಟ್ ಆಗಿದ್ದಾರೆ. ಇವರು ಸಹ ಶುಕ್ರವಾರ ಮತದಾನದಲ್ಲಿ ಭಾಗಿಯಾಗಿ ತಮ್ಮ ಪ್ರಜ್ಞಾವಂತಿಕೆ ಮೆರೆದಿದ್ದಾರೆ. ಮೈಸೂರಿನ ನಿವಾಸಿ ಮಂಜುಳಾ ಎಂಬುವರ ಪುತ್ರಿ ಚೇತನಾ ಮಾಲಂಗಿಯವರು ಲಂಡನ್‌ನ ವಿವಿಯೊಂದರಲ್ಲಿ ಉನ್ನತ ಶಿಕ್ಷಣ ಪಡೆಯುತ್ತಿದ್ದು, ಮೈಸೂರಿಗೆ ಮರಳಿ ಮತದಾನ ಮಾಡಿ ಪ್ರಜಾಪ್ರಭುತ್ವದ ಹಬ್ಬದಲ್ಲಿ ಪಾಲ್ಗೊಂಡಿದ್ದರು. ಅದೇ ರೀತಿ ವಿದೇಶದಲ್ಲಿ ನೆಲೆಸಿರುವ ರಾಜ್ಯದ ವಿವಿಧ ಭಾಗಗಳ ನಿವಾಸಿಗಳು ತಮ್ಮ ಊರುಗಳಿಗೆ ಮರಳಿ ಮತ ಚಲಾಯಿಸಿ ರಾಜಕೀಯ ಪ್ರಜ್ಞಾವಂತಿಕೆ ಮೆರೆದಿದ್ದಾರೆ.




ಪೊನ್ನಂಪೇಟೆ ತಾಲೂಕಿನ ಹುದಿಕೇರಿಯ ಬೆಳ್ಳೂರು ಬೂತ್ ನಂ.246ರಲ್ಲಿ ಶಾಸಕ ಎ.ಎಸ್.ಪೊನ್ನಣ್ಣ ತಮ್ಮ ಪತ್ನಿ ಕಾಂಚನ ಪೊನ್ನಣ್ಣ ಹಾಗೂ ಸಹೋದರ ನರೇನ್ ಕಾರ್ಯಪ್ಪ ಅವರೊಂದಿಗೆ ಮತ ಚಲಾಯಿಸಿದರು.



ಶಾಸಕ ಡಾ.ಮಂತರ್‌ಗೌಡ ತಮ್ಮ ಪತ್ನಿ ದಿವ್ಯಾ ಅವರೊಂದಿಗೆ ಸೋ.ಪೇಟೆ ತಾಲೂಕಿನ ಬೇಳೂರು ಗ್ರಾಪಂ ವ್ಯಾಪ್ತಿ ಬಜೆಗುಂಡಿಯ ಬಳಗುಂದ ಶಾಲೆಯ ಬೂತ್ ನಂ.74ರಲ್ಲಿ ಮತದಾನ ಮಾಡಿದರು.



ಮಾಜಿ ಶಾಸಕ ಕೆ.ಜಿ.ಬೋಪಯ್ಯ ತಮ್ಮ ಪತ್ನಿ ಕುಂತಿ ಬೋಪಯ್ಯ ಹಾಗೂ ಪುತ್ರಿ ಯಶಿಕಾ ಅವರೊಂದಿಗೆ ಮಡಿಕೇರಿಯ ಜೂನಿಯರ್ ಕಾಲೇಜು ಆವರಣದ ಮತಗಟ್ಟೆಯಲ್ಲಿ ಮತದಾನ ಮಾಡಿದರು.



ಮಾಜಿ ಸಚಿವ ಎಂ.ಪಿ.ಅಪ್ಪಚ್ಚು ರಂಜನ್ ತಮ್ಮ ಪತ್ನಿ ಶೈಲಾ ಅವರೊಂದಿಗೆ ಸೋಮವಾರಪೇಟೆ ಬಳಿಯ ಕುಂಬೂರು ಮತಗಟ್ಟೆಯಲ್ಲಿ ಮತ ಚಲಾಯಿಸಿದರು.



ಮಡಿಕೇರಿಯ ಸಿಎಂಸಿ ಆವರಣದ ಮತಗಟ್ಟೆಯಲ್ಲಿ ವಿಧಾನ ಪರಿಷತ್ ಮಾಜಿ ಸದಸ್ಯೆ ಶಾಂತೆಯಂಡ ವೀಣಾ ಅಚ್ಚಯ್ಯ ತಮ್ಮ ಪುತ್ರ ವಿಶಾಲ್‌ನೊಂದಿಗೆ ಮತ ಚಲಾಯಿಸಿದರು.

ನಾನೂ ನನ್ನ ಮತ ಚಲಾಯಿಸಿದ್ದೇನೆ



ಮಡಿಕೇರಿ:ಜಿಲ್ಲಾ ಚುನಾವಣಾಧಿಕಾರಿ ವೆಂಕಟ್ ರಾಜಾ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್, ಜಿಪಂ ಮುಖ್ಯ ಕಾರ್ಯನಿರ್ವಹಣಾಧಿಕಾರಿ ವರ್ಣಿತ್ ನೇಗಿ ಮತ್ತು ಉಪ ವಿಭಾಗಾಧಿಕಾರಿ ವಿನಾಯಕ್ ನಾರ್ವಡೆ ಅವರು ಮಡಿಕೇರಿಯ ವಿವಿಧ ಮತಗಟ್ಟೆಗಳಲ್ಲಿ ತಮ್ಮ ಹಕ್ಕು ಮತಚಲಾಯಿಸಿದರು.

ಬಳಿಕ ಮಡಿಕೇರಿಯ ರಾಜಾಸೀಟ್ ಬಳಿ ಜಿಲ್ಲೆಯ ಹಿರಿಯ ಅಧಿಕಾರಿಗಳು 'ನಾನು ಮತ ಚಲಾಯಿಸಿದ್ದೇನೆ' ಎಂಬ ಸಂದೇಶ ಸಾರಿ ಮತದಾನ ಜಾಗೃತಿ ಮೂಡಿಸಿದರು. ಪ್ರಜಾಪ್ರಭುತ್ವದ ಹಬ್ಬದಲ್ಲಿ ಎಲ್ಲಾ ಮತದಾರರು ಪಾಲ್ಗೊಳ್ಳಬೇಕು ಎಂದು ಮನವಿ ಮಾಡಿದರು.



82 ವರ್ಷದ ಹಿರಿಯ ರಾಜಕಾರಣಿ ಮಿಟ್ಟು ಚಂಗಪ್ಪ ತಮ್ಮ ಪತ್ನಿ ಯಶಿ ಚಂಗಪ್ಪ ಅವರೊಂದಿಗೆ ಮಡಿಕೇರಿಯ ಸಂತ ಮೈಕಲರ ಶಾಲೆಯ ಮತಗಟ್ಟೆಯಲ್ಲಿ ಮತ ಚಲಾಯಿಸಿದರು.

ಕೊಡಗು ಜಿಲ್ಲೆಯಲ್ಲಿ ಶೇ.74.29ರಷ್ಟು ಮತದಾನ

• ಜಿಲ್ಲಾದ್ಯಂತ ಶಾಂತಿಯುತ • ಬಿಸಿಲಿನ ನಡುವೇ ಹುಮ್ಮಸ್ಸಿನಿಂದ ಭಾಗಿ

ಮಡಿಕೇರಿ, ಏ.26–ಕೊಡಗು ಜಿಲ್ಲಾದ್ಯಂತ ಲೋಕಸಭಾ ಚುನಾವಣೆಯ ಮತದಾನ ಶಾಂತಿಯುತವಾಗಿ ನಡೆದಿದ್ದು, ಶೇ.74.29 ರಷ್ಟು ಮತದಾನವಾಗಿದೆ. ಬಿಸಿಲಿನ ತಾಪದ ನಡುವೆಯೇ ಮತಗಟ್ಟೆಗಳಿಗೆ ಹುಮ್ಮಸ್ಸಿನಿಂದ ಆಗಮಿಸಿದ ಮತದಾರರು ಹುರುಪಿನಿಂದಲೇ ಪ್ರಜಾಪ್ರಭುತ್ವ ಹಬ್ಬದಲ್ಲಿ ಭಾಗಿಯಾದರು.

ಮೊದಲ ಬಾರಿಗೆ ಮತ ಚಲಾಯಿಸಿದ ಯುವ ಮತದಾರರು ಮತ ಕೇಂದ್ರಗಳಿಂದ ಸಾರ್ಥಕ ಭಾವನೆಯೊಂದಿಗೆ ನಗು ಮುಖದಲ್ಲಿ ಹೊರ ಬರುತ್ತಿದ್ದುದು ಕಂಡು ಬಂತು. ಮತದಾನ ಕುರಿತು ಜನಸಾಮಾನ್ಯರಲ್ಲಿ ಅರಿವು ಮೂಡಿಸುವ ನಿಟ್ಟಿನಲ್ಲಿ ಚುನಾವಣಾ ಆಯೋಗದ ನಿರ್ದೇಶನದಂತೆ ಜಿಲ್ಲಾ ಕೇಂದ್ರ ಮಡಿಕೇರಿ ಸೇರಿದಂತೆ ಜಿಲ್ಲೆಯ ವಿವಿಧೆಡೆಗಳಲ್ಲಿ ಸ್ಥಾಪಿಸಿದ್ದ ಮಾದರಿ ಮತಗಟ್ಟೆ, ಸಖಿ(ಪಿಂಕ್) ಮತಗಟ್ಟೆ, ವಿಶೇಷ ಚೇತನರ ಮತಗಟ್ಟೆಗಳು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಿ ಗಮನ ಸೆಳೆದವು.

ಮತದಾನಕ್ಕಾಗಿ ಜಿಲ್ಲೆಯಲ್ಲಿ ಒಟ್ಟು 546 ಮತಗಟ್ಟೆಗಳನ್ನು ತೆರೆಯಲಾಗಿದ್ದು, ಮಡಿಕೇರಿಯ ಸಂತ ಮೈಕೆಲರ ಶಾಲೆಯ ವಿಶೇಷ ಚೇತನರ ಮತಗಟ್ಟೆ ಬಣ್ಣ ಬಣ್ಣದ ಬಲೂನು, ರಂಗೋಲಿ, ಬಾಳೆ ಗಿಡಗಳ ಸಹಿತ ಆಕರ್ಷಕ ತಳಿರು ತೋರಣದೊಂದಿಗೆ ಸಿಂಗರಿಸಲ್ಪಟ್ಟು, ಮತದಾರರ ಕುತೂಹಲಕ್ಕೆ ಕಾರಣವಾಯಿತು. ಈ ಮತಗಟ್ಟೆಯಲ್ಲಿ ಬೆಳಗ್ಗಿನಿಂದಲೇ ಮತದಾರರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ, ಸರದಿ ಸಾಲಿನಲ್ಲಿ ನಿಂತು ಮತದಾನ ಮಾಡಿದ್ದು ವಿಶೇಷವಾಗಿತ್ತು.

ಕೊಡಗು ಜಿಲ್ಲೆಯಲ್ಲಿ ವಿಶೇಷ ಮತಗಟ್ಟೆಗಳನ್ನು ಸ್ಥಾಪಿಸಲಾಗಿದ್ದು, ಒಟ್ಟು 10 ಸಖಿ ಬೂತ್, 6 ಸಾಂಪ್ರದಾಯಿಕ, 2 ವಿಶೇಷ ಚೇತನ, 2 ಯುವ ಮತದಾರರ ಮತಗಟ್ಟೆ ಮತ್ತು 3 ಕಾಫಿ ಬೆಳೆಯ ಥೀಮ್ ಆಧಾರಿತ ಮತಗಟ್ಟೆಗಳ ಸಹಿತ ನಗರದ ಹಿಂದೂಸ್ಥಾನಿ ಶಾಲೆ ಆಕರ್ಷಕ ಅಲಂಕಾರದೊಂದಿಗೆ 'ಮಾದರಿ ಮತಗಟ್ಟೆ'ಯಾಗಿ ಗಮನ ಸೆಳೆಯಿತು. ಈ ಬಾರಿ ಸಖಿ ಮತಗಟ್ಟೆಗಳನ್ನಾಗಿ ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪ ಕಾಲೇಜಿನ ಒಂದು ಮತಗಟ್ಟೆ ಮತ್ತು ಎವಿ ಶಾಲಾ ಮತಗಟ್ಟೆಯನ್ನು ಪರಿವರ್ತಿಸಲಾಗಿತ್ತು. ಸರ್ವಾಲಂಕೃತಗೊಂಡಿದ್ದ ಸಖಿ ಮತಗಟ್ಟೆಯಲ್ಲಿ ಮಹಿಳಾ ಸಿಬ್ಬಂದಿಗಳಷ್ಟೇ ಕಾರ್ಯನಿರ್ವಹಿಸಿದ್ದಲ್ಲದೆ, ಅತ್ಯಂತ ಅಚ್ಚುಕಟ್ಟಾಗಿ ನಿರ್ವಹಿಸಿ ಗಮನ ಸೆಳೆಯಿತು. ಜಿಲ್ಲಾ ಚುನಾವಣಾ ಅಧಿಕಾರಿಗಳು ಮತ್ತು ಪೊಲೀಸ್ ಇಲಾಖೆ ಮೊದಲೇ ಗುರುತಿಸಿದ ಸೂಕ್ಷ್ಮ, ಅತೀ ಸೂಕ್ಷ್ಮ ಮತ್ತು ನಕ್ಸಲ್ ಮತಗಟ್ಟೆಗಳಿಗೆ ಶಸ್ತ್ರಸಜ್ಜಿತ ಗುಜರಾತ್ ಪೊಲೀಸ್ ಫೋರ್ಸ್, ಕೆಎಸ್‌ಆರ್‌ಪಿ ಜಿಲ್ಲಾ ಸಶಸ್ತ್ರ ಪೊಲೀಸ್ ಸಿಬ್ಬಂದಿ ನಿಯೋಜಿಸಲಾಗಿತ್ತು. ಮತ ಕೇಂದ್ರದ ಸುತ್ತಲಿನ 200 ಮೀಟರ್ ನಿರ್ದಿಷ್ಟ ಪ್ರದೇಶದಲ್ಲಿ ಯಾವುದೇ ಚುನಾವಣಾ ಪ್ರಚಾರಕ್ಕೆ ಅವಕಾಶ ನಿರ್ಬಂಧಿಸಲಾಗಿತ್ತು.



ವಿರಾಜಪೇಟೆ ಮೀನುಪೇಟೆಯ ಮುನಿಸಿಪಲ್ ಶಾಲಾ ಮತಗಟ್ಟೆಯಲ್ಲಿ ವಿಧಾನಪರಿಷತ್ ಸದಸ್ಯ ಸುಜಾ ಕುಶಾಲಪ್ಪ ಮತದಾನ ಮಾಡಿದರು.

ಪ್ರಜಾತಂತ್ರ ವ್ಯವಸ್ಥೆಯಲ್ಲಿ ಚುನಾವಣೆ ಒಂದು ಹಬ್ಬ

ವಿರಾಜಪೇಟೆ, ಏ.26–ಇಲ್ಲಿನ ಸಂತ ಅನ್ನಮ್ಮ ಶಾಲೆಯ 149 ಮತಗಟ್ಟೆಯಲ್ಲಿ ಸಮಾಜ ಸೇವಕ ಮೇರಿಯಂಡ ಸಂಕೇತ್ ಪೂವಯ್ಯ ಮತ ಚಲಾಯಿಸಿದರು.



ನಂತರ ಮಾತನಾಡಿದ ಅವರು, ಮತದಾನ ನಮ್ಮ ಹಕ್ಕು ಮಾತ್ರವಲ್ಲದೆ, ಇದು ನಮ್ಮ ಆದ್ಯ ಕರ್ತವ್ಯ. ಮುಂದಿನ ಐದು ವರ್ಷ, ಈ ದೇಶದ ಯುವ ಜನತೆ, ರೈತರ ಭವಿಷ್ಯ, ಆರ್ಥಿಕ ಪ್ರಗತಿ, ಮಹಿಳಾ ಸಬಲೀಕರಣ ಮತ್ತು ದೇಶದ ಸರ್ವಾಂಗೀಣ ಅಭಿವೃದ್ಧಿಗೆ ಉತ್ತಮ ಅಭ್ಯರ್ಥಿಗಳು ಆಯ್ಕೆ ಆಗಬೇಕು. ಪ್ರಜಾತಂತ್ರ ವ್ಯವಸ್ಥೆಯಲ್ಲಿ ಚುನಾವಣೆ ಅಂದರೆ ಒಂದು ದೊಡ್ಡ ಹಬ್ಬ. ಈ ಹಬ್ಬದಲ್ಲಿ ಪ್ರತಿಯೊಬ್ಬರು ಪಾಲ್ಗೊಂಡು ಮತ ಚಲಾಯಿಸಬೇಕು ಎಂದರು.

ಮತ ಚಲಾಯಿಸಿದ ಬಳಿಕ ವ್ಯಕ್ತಿ ಸಾವು



ಮನೋಹರ್

ವಿರಾಜಪೇಟೆ: ಮತ ಚಲಾಯಿಸಿ ಮತಗಟ್ಟೆಯಿಂದ ತೆರಳುತ್ತಿದ್ದ ವ್ಯಕ್ತಿ ಹೃದಯಾಘಾತದಿಂದ ಮೃತಪಟ್ಟಿರುವ ಘಟನೆ ಪೊನ್ನಂಪೇಟೆ ತಾಲೂಕಿನ ಬಿ.ಶೆಟ್ಟಿಗೇರಿ ಗ್ರಾಮದಲ್ಲಿ ಶುಕ್ರವಾರ ನಡೆದಿದೆ.

ಬಿ.ಶೆಟ್ಟಿಗೇರಿ ಕೊಂಗಣ ಗ್ರಾಮದ ನಿವಾಸಿ ಮನೋಹರ್(55) ಮೃತ ವ್ಯಕ್ತಿ. ಈತ ಬಿ.ಶೆಟಟಿಗೇರಿ ಗ್ರಾಮದ ಮತಗಟ್ಟೆ ಸಂಖ್ಯೆ 179ರಲ್ಲಿ ಬೆಳಗ್ಗೆ 11.45ರಲ್ಲಿ ಮತ ಚಲಾಯಿಸಿ ಹೊರ ಬಂದಿದ್ದಾರೆ. ಈ ವೇಳೆ ಎದೆ ನೋವು ಕಾಣಿಸಿಕೊಂಡು ಅಲ್ಲೇ ಕುಸಿದು ಬಿದ್ದಿದ್ದಾರೆ. ತಕ್ಷಣ ಖಾಸಗಿ ವಾಹನದಲ್ಲಿ ಗೋಣಿಕೊಪ್ಪ ಆಸ್ಪತ್ರೆಗೆ ಸಾಗಿಸುವ ಮಾರ್ಗಮಧ್ಯೆ ಮೃತಪಟ್ಟಿದ್ದಾರೆ.

ವಿರಾಜಪೇಟೆಯಲ್ಲಿ ಶೇ.73.77ರಷ್ಟು ಮತದಾನ



ವಿರಾಜಪೇಟೆ: ವಿ.ಪೇಟೆ ವಿಧಾನಸಭಾ ಕ್ಷೇತ್ರದಲ್ಲಿ ಶೇ.73.77ರಷ್ಟು ಮತದಾನವಾಗಿದ್ದು, ಎಲ್ಲಾ 273 ಮತಗಟ್ಟೆಗಳಲ್ಲಿ ಶಾಂತಿಯುತವಾಗಿ ಮತದಾನ ನಡೆಯಿತು.

ಮತದಾರರು ಬೆಳಗ್ಗೆಯಿಂದಲೇ ಸರತಿ ಸಾಲಿನಲ್ಲಿ ನಿಂತು ಉತ್ಸಾಹದಿಂದ ತಮ್ಮ ಹಕ್ಕು ಚಲಾಯಿಸಿದರು. ಮಧ್ಯಾಹ್ನದ ವೇಳೆಗೆ ನಿಧಾನಗತಿಯಲ್ಲಿ ಸಾಗಿದ ಮತದಾನ ಸಂಜೆ 4 ಗಂಟೆ ನಂತರ ಮತ್ತೆ ಹುರುಪಿನಿಂದ ನಡೆಯಿತು. ಪಟ್ಟಣದ ಜಯಪ್ರಕಾಶ್ ನಾರಾಯಣ ಪ್ರೌಢಶಾಲೆ ಮತ್ತು ಜಿಎಂಪಿ ಶಾಲೆಯಲ್ಲಿ ಸಖಿ ಮತಗಟ್ಟೆ ಹಾಗೂ ಸಂತ ಅನ್ನಮ್ಮ ಶಾಲೆಯಲ್ಲಿ ವಿಕಲಚೇತನ ಸ್ನೇಹಿ ಮತಗಟ್ಟೆ ಸ್ಥಾಪಿಸಲಾಗಿತ್ತು.

ಆರ್ಜಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಮತಗಟ್ಟೆ 163ರಲ್ಲಿ ಸುಮಾರು 1465 ಮತದಾರರಿದ್ದು, ಇದರಿಂದ ಬೆಳಗ್ಗೆಯಿಂದ ಸಂಜೆವರೆಗೂ ಮತದಾರರು ಸರತಿ ಸಾಲಿನಲ್ಲೇ ನಿಲ್ಲಬೇಕಾಯಿತು. ಕಳೆದ ವಿಧಾನ ಸಭಾ ಚುನಾವಣೆಯಲ್ಲೇ ಎರಡು ಮತಗಟ್ಟೆ ತೆರೆಯುವಂತೆ ತಹಶೀಲ್ದಾರ್‌ಗೆ ಮನವಿ ಸಲ್ಲಿಸಿದ್ದರೂ ಇನ್ನೊಂದು ಮತಗಟ್ಟೆ ತೆರೆದಿಲ್ಲ ಎಂದು ಮತದಾರರು ಅಸಮಾಧಾನ ವ್ಯಕ್ತಪಡಿಸಿದರು.

ಕ್ಷೇತ್ರ ವ್ಯಾಪ್ತಿ ಶಾಂತಿಯುತ ಮತದಾನಕ್ಕಾಗಿ ಪೊಲೀಸ್ ಬಿಗಿಬಂದೊಬಸ್ತ್ ಏರ್ಪಡಿಸಲಾಗಿತ್ತು. ಗಡಿಭಾಗಗಳ ಸೂಕ್ಷ್ಮ ಮತ್ತು ಅತೀ ಸೂಕ್ಷ್ಮ ಮತಗಟ್ಟೆಗಳಲ್ಲಿ ಹೆಚ್ಚಿನ ಭದ್ರತೆ ಏರ್ಪಡಿಸಲಾಗಿತ್ತು ಎಂದು ಡಿವೈಎಸ್‌ಪಿ ಆರ್.ಮೋಹನ್ ಕುಮಾರ್ ತಿಳಿಸಿದರು.

ನವದಂಪತಿಗಳಿಂದ ಮತದಾನ







ಕುಶಾಲನಗರ, ಏ.26–ಮದುವೆ ಸಮಾರಂಭದಲ್ಲೂ ನವ ದಂಪತಿಗಳು ಕುಶಾಲನಗರ ವ್ಯಾಪ್ತಿಯ ಕೆಲ ಮತಗಟ್ಟೆಗಳಲ್ಲಿ ಮತದಾನ ಮಾಡಿದರು. ಕೂಡಿಗೆ ಗ್ರಾಮದ ವರ ಕೆ.ಎಸ್.ಶ್ರೀನಿವಾಸ್ ವಿವಾಹ ಕಾರ್ಯಕ್ರಮ ಮುಗಿಸಿ ಕೂಡಿಗೆ ಮತಗಟ್ಟೆಗೆ ಆಗಮಿಸಿ ತಮ್ಮ ಹಕ್ಕು ಚಲಾಯಿಸಿದರು. ಕುಶಾಲನಗರದ ಕಲ್ಯಾಣ ಮಂಟಪವೊಂದರಿಂದ ನೇರವಾಗಿ ಮತಗಟ್ಟೆ ತೆರಳಿದ ವಧು ಬಿ.ಎನ್.ಅಪೂರ್ವ ವರ ಧನಂಜಯ ಗುಪ್ತ ಅವರೊಂದಿಗೆ ತಮ್ಮ ಹಕ್ಕು ಚಲಾಯಿಸಿದರು. ಸೀಗೆಹೊಸೂರು ಮತಗಟ್ಟೆ ಸಂಖ್ಯೆ 149 ನವದಂಪತಿ ಪಿ.ಆರ್.ಹರ್ಷನ್ ಮತ್ತು ಚಂದ್ರಕಲಾ ಮತ ಚಲಾಯಿದರು.

ಚಾಮರಾಜನಗರದಲ್ಲಿ ಶೇ.76.72ರಷ್ಟು ಮತದಾನ

• ಉತ್ಸಾಹದಿಂದ ತಮ್ಮ ಹಕ್ಕು ಚಲಾಯಿಸಿದ ಮತದಾರರು • ವೃದ್ಧರಿಗೆ ಸೂಕ್ತ ವ್ಯವಸ್ಥೆ

ಚಾಮರಾಜನಗರ, ಏ.26–ಚಾಮರಾಜನಗರ ಮೀಸಲು ಲೋಕಸಭಾ ಕ್ಷೇತ್ರದಲ್ಲಿ ಶೇ.76.72ರಷ್ಟು ಮತದಾನವಾಗಿದೆ.

ಚಾಮರಾಜನಗರ ಜಿಲ್ಲೆಯ ಹನೂರು ವಿಧಾನ ಸಭಾ ಕ್ಷೇತ್ರದಲ್ಲಿ ಶೇ.71.99, ಕೊಳ್ಳೇಗಾಲ 74.43, ಚಾಮರಾಜನಗರ 78.64, ಗುಂಡ್ಲುಪೇಟೆ 82.30 ಹಾಗೂ ಮೈಸೂರು ಜಿಲ್ಲೆಯ ಹೆಚ್.ಡಿ.ಕೋಟೆ 76.93, ನಂಜನಗೂಡು 76.89, ವರುಣಾ 78.35, ತಿ.ನರಸೀಪುರದಲ್ಲಿ 74.18ರಷ್ಟು ಮತದಾನವಾಗಿದೆ.

ಸಂಜೆ ನಂತರ ಬಿರುಸು: ಕ್ಷೇತ್ರಗಳಲ್ಲಿ ಮತದಾರರು ಬಿಸಿಲಿನ ನಡುವೆ ಬೆಳಗ್ಗೆಯಿಂದ ಸಂಜೆವರೆಗೂ ಉತ್ಸಾಹದಿಂದ ಮತ ಚಲಾಯಿಸಿದರು. ಸಂಜೆ ಬಿಸಿಲಿ ತಾಪ ಕಡಿಮೆಯಾಗಿದ್ದರಿಂದ ಮತದಾರರು ಹೆಚ್ಚಿನ ಸಂಖ್ಯೆಯಲ್ಲಿ ಮತಗಟ್ಟೆಗಳಿಗೆ ಬಂದು ಸರದಿ ಸಾಲಿನಲ್ಲಿ ನಿಂತು ಮತ ಚಲಾಯಿಸಿದರು.



ಆಕರ್ಷಿಸಿದ ಸಖಿ ಮತಗಟ್ಟೆ: ಚಾಮರಾಜನಗರ ಲೋಕಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಸ್ಥಾಪಿಸಿದ್ದ 16 ಸಖಿ ಸೌರಭ ಮತಗಟ್ಟೆಗಳು ಮತದಾರರನ್ನು ಆಕರ್ಷಿಸಿದವು. ಉಳಿದಂತೆ ಸಾಂಪ್ರದಾಯಿಕ, ಯುವ ಸೌರಭ, ಅನ್ನದಾತ, ಹಸಿರು ಮತಗಟ್ಟೆಗಳು ಸೇರಿದಂತೆ ವಿಶೇಷ ಮತಗಟ್ಟೆಗಳನ್ನು ಕಂಡು ಮತದಾರರು ಹರ್ಷ ವ್ಯಕ್ತಪಡಿಸಿದರು. ಜಿಲ್ಲೆಯ 983 ಮತಗಟ್ಟೆಗಳಲ್ಲಿ ವೃದ್ಧರು, ಹಿರಿಯ ನಾಗರಿಕರು, ಅನಾರೋಗ್ಯಕ್ಕೆ ಒಳಗಾದ ಮತದಾರರಿಗೆ ವೈದ್ಯಕೀಯ ತಪಾಸಣೆ ಹಾಗೂ ಚಿಕಿತ್ಸೆ ನೀಡುವ ಜೊತೆಗೆ ಮತ ಚಲಾಯಿಸಲು ಸೂಕ್ತ ವ್ಯವಸ್ಥೆ ಕಲ್ಪಿಸಲಾಗಿತ್ತು.

ಅಧಿಕಾರಿಗಳ ಭೇಟಿ: ಪ್ರಮುಖ ಮತಗಟ್ಟೆಗಳಿಗೆ ಜಿಲ್ಲಾ ಚುನಾವಣಾಧಿ ಸಿ.ಟಿ.ಶಿಲ್ಪನಾಗ್ ಹಾಗೂ ಚುನಾವಣಾಧಿಕಾರಿಗಳು ಭೇಟಿ ನೀಡಿ, ಪರಿಶೀಲಿಸಿದರು.



ಚಾ.ನಗರದ ಪಿಡಬ್ಲ್ಯೂಡಿ ಶಾಲೆಯ ಮತಗಟ್ಟೆ ಸಂಖ್ಯೆ 80ರಲ್ಲಿ ಜಿಲ್ಲಾಧಿಕಾರಿ ಶಿಲ್ಪನಾಗ್ ಮತ ಚಲಾಯಿಸಿದ ನಂತರ ಸಹಾಯಕ ಚುನಾವಣಾಧಿಕಾರಿ ಸವಿತಾ ಹಾಗೂ ಜಿಪಂ ಉಪ ಕಾರ್ಯದರ್ಶಿ ಲಕ್ಷ್ಮೀ ಅವರೊಂದಿಗೆ ರೇಷ್ಮೆ ಸೀರೆ ಧರಿಸಿ, ಚುನಾವಣೆಯ ಪರ್ವ ದೇಶದ ಗರ್ವ ಎಂಬ ಸಂದೇಶದೊಂದಿಗೆ ಮತದಾನ ಜಾಗೃತಿ ಮೂಡಿಸಿದರು.

ಕಾಂಗ್ರೆಸ್ ಗೆಲುವಿಗೆ ಪೂರಕ ವಾತಾವರಣ

ಚಾಮರಾಜನಗರ, ಏ.26–ಚಾಮರಾಜನಗರ ಲೋಕಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್ ಗೆಲುವಿಗೆ ಪೂರಕ ವಾತಾವರಣವಿದ್ದು, ಪಕ್ಷದ ಅಭ್ಯರ್ಥಿ ಸುನೀಲ್ ಬೋಸ್‌ಗೆ ನಂಜನಗೂಡು ವಿಧಾನಸಭಾ ಕ್ಷೇತ್ರದಿಂದ ಹೆಚ್ಚು ಮತ ಲಭಿಸಲಿವೆ ಎಂದು ಶಾಸಕ ದರ್ಶನ್‌ಧ್ರುವನಾರಾಯಣ್ ಹೇಳಿದರು.


ತಾಲೂಕಿನ ಸ್ವಗ್ರಾಮವಾದ ಹೆಗ್ಗವಾಡಿಯ ಸರ್ಕಾರಿ ಶಾಲೆಯ ಮತಗಟ್ಟೆ ಸಂಖ್ಯೆ 65ರಲ್ಲಿ ತಮ್ಮ ಸಹೋದರ ಧೀರನ್ ಧ್ರುವನಾರಾಯಣ್ ಹಾಗೂ ಕಾಂಗ್ರೆಸ್ ಮುಖಂಡರೊಂದಿಗೆ ತಮ್ಮ ಹಕ್ಕು ಚಲಾಯಿಸಿ ನಂತರ ಮಾತನಾಡಿದ ಅವರು, ಚಾಮರಾಜನಗರ ಕ್ಷೇತ್ರದಲ್ಲಿ ನಮ್ಮ ತಂದೆ ಧ್ರುವನಾರಾಯಣ್ 2 ಬಾರಿ ಸಂಸದರಾಗಿದ್ದರು. ಕಳೆದ ಚುನಾವಣೆಯಲ್ಲಿ ಅಲ್ಪಮತಗಳ ಅಂತರದಲ್ಲಿ ಸೋತರು. ಆದರೆ, ಈ ಬಾರಿ ಜನರು ಬದಲಾವಣೆ ಬಯಸಿದ್ದಾರೆ ಎಂದರು.

ಈ ಸಂದರ್ಭದಲ್ಲಿ ಜಿಪಂ ಮಾಜಿ ಸದಸ್ಯ ನವೀನ್ ಕೆರೆಹಳ್ಳಿ, ತಾಪಂ ಮಾಜಿ ಸದಸ್ಯ ರೇವಣ್ಣ, ಜಿಲ್ಲಾ ಕಾಂಗ್ರೆಸ್ ಮಾಧ್ಯಮ ಕಾರ್ಯದರ್ಶಿ ರಾಜೇಶ ಗೌಡಹಳ್ಳಿ ಇತರರಿದ್ದರು.



ಹೆಗ್ಗವಾಡಿಯ ಸರ್ಕಾರಿ ಶಾಲೆಯ ಮತಗಟ್ಟೆಯಲ್ಲಿ ಶಾಸಕ ದರ್ಶನ್ ಧ್ರುವನಾರಾಯಣ್ ಮತ ಚಲಾಯಿಸಿದರು.

ಬಿರುಬಿಸಿಲಿನ ನಡುವೆಯೂ ಶಾಂತಿಯುತ ಮತದಾನ



ಶಾಸಕ ಸಿ.ಪುಟ್ಟರಂಗಶೆಟ್ಟಿ ತಮ್ಮ ಸ್ವಗ್ರಾಮ ಯಳಂದೂರು ತಾಲೂಕಿನ ಉಪ್ಪಿನಮೋಳೆ ಗ್ರಾಮದಲ್ಲಿ ಮತದಾನ ಮಾಡಿದರು.

ಯಳಂದೂರು, ಏ.26–ತಾಲೂಕಿನಾದ್ಯಂತ ಶುಕ್ರವಾರ ಲೋಕಸಭಾ ಚುನಾವಣೆಯ ಮತದಾನ ಶಾಂತಿಯುತವಾಗಿ ನಡೆಯಿತು.

ಬೆಳಗ್ಗೆಯಿಂದಲೇ ಕೆಲ ಮತಗಟ್ಟೆಗಳಲ್ಲಿ ಜನಜಂಗುಳಿ ಕಂಡುಬಂದಿತ್ತು. ಬಿಸಿಲಿನ ಬೇಗೆಯಿಂದ ಮಧ್ಯಾಹ್ನದ ವೇಳೆ ಮತದಾನ ಕೊಂಚ ಮಂದಗತಿಯಲ್ಲಿ ನಡೆದು ಸಂಜೆ ಮತ್ತೆ ಬಿರುಸುಕೊಂಡಿತು. ಬಿಆರ್‌ಟಿ ಹುಲಿ ರಕ್ಷಿತ ಅರಣ್ಯ ಮಧ್ಯಭಾಗದ ಪುರಾಣಿ ಪೋಡು ಸೇರಿದಂತೆ ತಾಲೂಕಿನ ಗುಡ್ಡಗಾಡು ಪ್ರದೇಶಗಳು, ಗ್ರಾಮಗಳು ಹಾಗೂ ಪಟ್ಟಣದಲ್ಲಿ ಶಾಂತಿಯುತವಾಗಿ ಮತದಾನ ನಡೆಯಿತು.

ಕೈ ಕೊಟ್ಟ ಇವಿಎಂ: ತಾಲೂಕಿನ ಚಾಮಲಾಪುರ, ಹೊನ್ನೂರು, ಯರಗಂಬಳ್ಳಿ ಗ್ರಾಮಗಳ ಮತಗಟ್ಟೆಗಳಲ್ಲಿ ಮತ ಯಂತ್ರಗಳು ಕೆಲಕಾಲ ಕೆಟ್ಟು ಆತಂಕ ಸೃಷ್ಟಿಸಿದವು. ನಂತರ ಸಂಬಂಧಪಟ್ಟ ತಾಂತ್ರಿಕ ಸಿಬ್ಬಂದಿ ಇವುಗಳನ್ನು ಸರಿಪಡಿಸಿದರು.

ಗಣ್ಯರ ಮತದಾನ: ಚಾಮರಾಜನಗರ ಲೋಕಸಭಾ ಕ್ಷೇತ್ರ ಬಿಜೆಪಿ ಅಭ್ಯರ್ಥಿ ಎಸ್.ಬಾಲರಾಜು ತಮ್ಮ ಕುಟುಂಬ ಸಮೇತ ಸ್ವಗ್ರಾಮ ಯಳಂದೂರು ತಾಲೂಕಿನ ಮದ್ದೂರು ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಮತಗಟ್ಟೆ 187ರಲ್ಲಿ ಮತ ಚಲಾಯಿಸಿದರು.

ತಾಲೂಕಿನ ಮಾಂಬಳ್ಳಿ ಗ್ರಾಮದ ಕಮಲಮ್ಮ ಕರಿಗೇಗೌಡರ ಪ್ರೌಢಶಾಲೆಯ ಮತಗಟ್ಟೆಯಲ್ಲಿ ಮಾಜಿ ಶಾಸಕ ಎಸ್.ಜಯಣ್ಣ ತಮ್ಮ ಬೆಂಬಲಿಗರೊಂದಿಗೆ ಮತ ಚಲಾಯಿಸಿದರು.



ಯಳಂದೂರು ತಾಲೂಕಿನ ಮದ್ದೂರು ಗ್ರಾಮದಲ್ಲಿ ಬಿಜೆಪಿ ಅಭ್ಯರ್ಥಿ ಎಸ್.ಬಾಲರಾಜು ತಮ್ಮ ಕುಟುಂಬ ಸಮೇತ ಮತದಾನ ಮಾಡಿದರು.



ಗುಂಡ್ಲುಪೇಟೆ ತಾಲೂಕಿನ ಹಾಲಹಳ್ಳಿ ಗ್ರಾಮದಲ್ಲಿ ಶಾಸಕ ಹೆಚ್.ಎಂ.ಗಣೇಶ್ ಪ್ರಸಾದ್ ತಮ್ಮ ತಾಯಿ ಡಾ.ಗೀತಾ ಮಹದೇವಪ್ರಸಾದ್, ಪತ್ನಿ ವಿದ್ಯಾ, ಚಿಕ್ಕಪ್ಪ ಹೆಚ್.ಎಸ್.ನಂಜುಂಡಪ್ರಸಾದ್, ಚಿಕ್ಕಮ್ಮ ರೂಪಾ, ಸಹೋದರ ಚನ್ನಪ್ಪ ಅವರೊಂದಿಗೆ ಮತ ಚಲಾಯಿಸಿದರು.



ಮಾಜಿ ಶಾಸಕ ಸಿ.ಎಸ್.ನಿರಂಜನ್‌ಕುಮಾರ್ ತಮ್ಮ ಪತ್ನಿ ಸವಿತಾ, ಪುತ್ರಿ ನಿಹಾರಿಕಾ ಅವರೊಂದಿಗೆ ಗುಂಡ್ಲುಪೇಟೆ ತಾಲೂಕಿನ ಚೌಡಹಳ್ಳಿಯ ಮತಗಟ್ಟೆಯಲ್ಲಿ ಮತದಾನ ಮಾಡಿದರು. ಹುಂಡೀಪುರ ಗ್ರಾಮ ಪಂಚಾಯಿತಿ ಸದಸ್ಯ ನಂಜಪ್ಪ ಇದ್ದರು.

ಆಲೂರಲ್ಲಿ ಶಾಸಕ ಕೃಷ್ಣಮೂರ್ತಿ ಮತದಾನ



ಚಾಮರಾಜನಗರ: ತಾಲೂಕಿನ ಆಲೂರಿನ ಅನ್ನದಾತ ಮತಗಟ್ಟೆಯಲ್ಲಿ ಶಾಸಕ ಎ.ಆರ್.ಕೃಷ್ಣಮೂರ್ತಿ ತಮ್ಮ ಕುಟುಂಬ ಸಮೇತ ಮತದಾನ ಮಾಡಿದರು.

ನಂತರ ಮಾತನಾಡಿ ಅವರು, ಚಾ.ನಗರ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಸುನೀಲ್ ಬೋಸ್ ಹೆಚ್ಚಿನ ಬಹುಮತದಿಂದ ಗೆಲುವು ಸಾಧಿಸಲಿದ್ದಾರೆ. ಈ ಬಾರಿ ಇಂಡಿಯಾ ಮೈತ್ರಿಕೂಟಕ್ಕೆ ಬಹುಮತ ಬರಲಿದ್ದು, ರಾಜ್ಯದಲ್ಲಿ ಚಾ.ನಗರ ಸೇರಿದಂತೆ ಒಟ್ಟು 20ಕ್ಕೂ ಹೆಚ್ಚು ಕ್ಷೇತ್ರಗಳಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳು ಗೆಲುವು ಸಾಧಿಸಲಿದ್ದಾರೆ ಎಂದರು.

ಜಿಪಂ ಮಾಜಿ ಸದಸ್ಯ ಆರ್.ಬಾಲರಾಜು, ಎಪಿಎಂಸಿ ನಿರ್ದೇಶಕ ಆಲೂರು ಪ್ರದೀಪ್, ಮಂಜುಳಾ ಕೃಷ್ಣಮೂರ್ತಿ, ಆರ್.ಕೆ.ಶ್ರೀವರ್ಧನ್, ವಿಜಯಲಕ್ಷ್ಮಿ ಬಾಲರಾಜು, ಆರ್.ಕೆ.ರೋಷಿಣಿ, ಮುಖಂಡರಾದ ಸಚಿನ್, ಆಲೂರು ಎ.ಎಸ್.ಮಲ್ಲಣ್ಣ, ಮಹದೇವಯ್ಯ, ಬಾಲರಾಜು, ರವಿಕುಮಾರ್, ಹೊಂಗನೂರು ಚೇತನ್, ಗೌಡಹಳ್ಳಿ ರಾಜೇಶ್ ಇತರರು ಇದ್ದರು.

ಇದೇ ವೇಳೆ ಅನ್ನದಾತ ಮತಗಟ್ಟೆಯಲ್ಲಿ ವಿಶೇಷವಾಗಿ ಚಪ್ಪರಿ ಹಾಕಿ, ಹಸಿರು ತೋರಣ, ಬಾಳೆ ಕಂದು ಕಟ್ಟಿ ಮತದಾರರನ್ನು ಸ್ವಾಗತಿಸಲಾಯಿತು.

ಮೋದಿ ಅಲೆಯಿಂದ ಬಿಜೆಪಿಗೆ ಬಹುಮತ



ಚಾಮರಾಜನಗರದ ರಾಮಸಮುದ್ರ ಬಡಾವಣೆಯ ಮತಗಟ್ಟೆ 82ರಲ್ಲಿ ಕೇಂದ್ರ ಪರಿಹಾರ ಸಮಿತಿ ಮಾಜಿ ಅಧ್ಯಕ್ಷ ಎಂ.ರಾಮಚಂದ್ರ ಮತದಾನ ಮಾಡಿದರು.

ಚಾಮರಾಜನಗರ: ಪ್ರಧಾನಿ ನರೇಂದ್ರ ಮೋದಿ ಅಲೆಯಿಂದ ಚಾಮರಾಜನಗರ ಲೋಕಸಭಾ ಮೀಸಲು ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿ ಎಸ್.ಬಾಲರಾಜು ಬಹುಮತದಿಂದ ಗೆಲುವು ಸಾಧಿಸಲಿದ್ದಾರೆ ಎಂದು ಕೇಂದ್ರ ಪರಿಹಾರ ಸಮಿತಿ ಮಾಜಿ ಅಧ್ಯಕ್ಷ ಎಂ.ರಾಮಚಂದ್ರ ವಿಶ್ವಾಸ ವ್ಯಕ್ತಪಡಿಸಿದರು.

ನಗರದ ರಾಮಸಮುದ್ರ ಬಡಾವಣೆಯ ಸರ್ಕಾರಿ ಬಾಲಕರ ಹಿರಿಯ ಪ್ರಾಥಮಿಕ ಶಾಲೆಯ ಮತಗಟ್ಟೆ ಸಂಖ್ಯೆ 82ರಲ್ಲಿ ಮತದಾನ ಮಾಡಿದ ನಂತರ ಮಾತನಾಡಿದ ಅವರು, ಕಾಂಗ್ರೆಸ್‌ನ ಗ್ಯಾರಂಟಿ ಯೋಜನೆಗಳು ಯಾವುದೇ ಪರಿಣಾಮಬೀರಲ್ಲ. ಮೋದಿ ಅಲೆಯಿಂದ ಜನತೆ ಉತ್ಸುಕರಾಗಿ ಬಿಜೆಪಿಗೆ ಮತ ಹಾಕಿದ್ದಾರೆ. ಕ್ಷೇತ್ರದಲ್ಲಿ ಬಿಜೆಪಿ ಹೆಚ್ಚಿನ ಮತಗಳ ಅಂತದಲ್ಲಿ ಗೆಲುವು ಸಾಧಿಸಲಿದೆ ಎಂದರು. ಈ ಸಂದರ್ಭದಲ್ಲಿ ಬಿಜೆಪಿ ಮುಖಂಡರಾದ ಆರ್.ವಿ.ಮಹದೇವಸ್ವಾಮಿ, ಪುಟ್ಟಮಲ್ಲಪ್ಪ, ಲಿಂಗರಾಜು, ಬಂಗಾರಸ್ವಾಮಿ, ಕುಮಾರ್ ಇತರರು ಹಾಜರಿದ್ದರು.



ಯಳಂದೂರು ತಾಲೂಕಿನ ಮಾಂಬಳ್ಳಿ ಗ್ರಾಮದ ಮತಗಟ್ಟೆಯಲ್ಲಿ ಮಾಜಿ ಶಾಸಕ ಎಸ್.ಜಯಣ್ಣ ತಮ್ಮ ಬೆಂಬಲಿಗರೊಂದಿಗೆ ಮತದಾನ ಮಾಡಿದರು.

ಒಂದನೇ ಪುಟದಿಂದ

ಶೇ.69.23 ಮತದಾನ

ಮತದಾನವಾಗಿತ್ತು. ಬೆಂಗಳೂರು ಕ್ಷೇತ್ರದಲ್ಲಿ ಶೇ.52.81ರಷ್ಟು ಮತದಾನವಾಗಿದ್ದು, 2019ರಲ್ಲಿ ಶೇ.54.32 ಮತ ಚಲಾವಣೆಯಾಗಿತ್ತು.

ಚಿಕ್ಕಬಳ್ಳಾಪುರ ಕ್ಷೇತ್ರದಲ್ಲಿ ಶೇ.76.82ರಷ್ಟು ಮತ ಚಲಾವಣೆಯಾಗಿದ್ದು, 2019ರಲ್ಲಿ ಶೇ.76.74ರಷ್ಟು ಮತದಾನವಾಗಿತ್ತು. ಕೋಲಾರ ಕ್ಷೇತ್ರದಲ್ಲಿ ಶೇ.78.07ರಷ್ಟು ಮತ ಚಲಾವಣೆಯಾಗಿದ್ದು, 2019ರಲ್ಲಿ ಶೇ.77.25ರಷ್ಟು ಮತದಾನವಾಗಿತ್ತು.

ನಗರ ಪ್ರದೇಶಗಳಿಗಿಂತ ಗ್ರಾಮೀಣ ಭಾಗದಲ್ಲಿ ಮತದಾನ ಬಿರುಸಿನಿಂದ ನಡೆದಿದ್ದು, ಕರಾವಳಿ ತೀರದ ದಕ್ಷಿಣ ಕನ್ನಡ, ಉಡುಪಿ-ಚಿಕ್ಕಮಗಳೂರಿನಲ್ಲಿ ಮತದಾನ ಪ್ರಮಾಣ ಹೆಚ್ಚಾಗಿದೆ. ಕರಾವಳಿ ಹೊರತುಪಡಿಸಿದರೆ ಮೈಸೂರು-ಕೊಡಗು, ಮಂಡ್ಯ ಹಾಗೂ ತುಮಕೂರು ಕ್ಷೇತ್ರಗಳಲ್ಲಿ ಬಿರುಸಿನ ಮತದಾನ ನಡೆದಿದೆ.

ಬೆಂಗಳೂರು ಗ್ರಾಮಾಂತರ ಹೊರತುಪಡಿಸಿ ಉಳಿದ ಮೂರು ಕ್ಷೇತ್ರಗಳಲ್ಲಿ ಮತದಾನದ ಪ್ರಮಾಣ ಆರಂಭದಲ್ಲಿ ಭಾರೀ ಕಡಿಮೆ ಇತ್ತು. ಚುನಾವಣಾ ಆಯೋಗ ಅತ್ಯಂತ ಬಿಗಿಬಂದೋಬಸ್ತ್ ಕೈಗೊಂಡಿದ್ದರಿಂದ ಸಣ್ಣ-ಪುಟ್ಟ ಘಟನೆಗಳನ್ನು ಹೊರತುಪಡಿಸಿ ಚುನಾವಣೆ ನಡೆದ ಎಲ್ಲ ಕಡೆಗಳಲ್ಲೂ ಮತದಾನ ಶಾಂತಿಯುತವಾಗಿತ್ತು. ಬೆಂಗಳೂರು ಗ್ರಾಮಾಂತರ ಹಾಗೂ ಹಾಸನ ಕ್ಷೇತ್ರಗಳಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಗಿಫ್ಟ್ ಕೂಪನ್ ಹಾಗೂ ಹಣದ ಆಮಿಷ ಒಡ್ಡುತ್ತಿದ್ದಾರೆಂಬ ಆರೋಪ ಕೇಳಿಬಂದಿದ್ದಲ್ಲದೆ, ಕೆಲವೆಡೆ ಬಿಜೆಪಿ-ಜೆಡಿಎಸ್ ಕಾರ್ಯಕರ್ತರು ಕಾಂಗ್ರೆಸ್ ಕಾರ್ಯಕರ್ತರನ್ನು ಹಿಡಿದು ತನಿಖಾಧಿಕಾರಿಗಳಿಗೆ ಒಪ್ಪಿಸಿದ್ದಾರೆ. ಮತ್ತೆ ಕೆಲವೆಡೆ ಈ ಪಕ್ಷಗಳ ಕಾರ್ಯಕರ್ತರ ನಡುವೆ ಕೈ-ಕೈ ಮಿಲಾಯಿಸುವ ಹಂತ ತಲುಪಿತ್ತು.

ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡರು ಹರದನಹಳ್ಳಿಯಲ್ಲೂ, ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಬೆಂಗಳೂರು ಉತ್ತರ ಕ್ಷೇತ್ರದಲ್ಲೂ, ಮುಖ್ಯಮಂತ್ರಿ ಸಿದ್ದರಾಮಯ್ಯ ತಮ್ಮ ಪುತ್ರ ಯತೀಂದ್ರ ಜೊತೆಯಲ್ಲಿ ಸಿದ್ದರಾಮನಹುಂಡಿಯಲ್ಲೂ, ಮಾಜಿ ಮುಖ್ಯಮಂತ್ರಿ ಎಚ್.ಡಿ. ಕುಮಾರಸ್ವಾಮಿ ಬಿಡದಿ ಸಮೀಪದ ಕೇತಗಾನಹಳ್ಳಿಯಲ್ಲೂ, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ದೊಡ್ಡ ಆಲಹಳ್ಳಿಯಲ್ಲೂ ಮತ ಚಲಾಯಿಸಿದರು.

ಚಿತ್ರನಟ ಸುದೀಪ್, ರವಿಚಂದ್ರನ್, ಯಶ್, ದರ್ಶನ್ ಸೇರಿದಂತೆ ಸಮಾಜದ ವಿವಿಧ ಕ್ಷೇತ್ರಗಳ ಗಣ್ಯರು ತಮ್ಮ ಪ್ರದೇಶದ ಮತಗಟ್ಟೆಗಳಲ್ಲಿ ಮತದಾನ ಮಾಡಿದರು.

ಆಸ್ಪತ್ರೆಗೆ ದಾಖಲಾಗಿದ್ದ ಇನ್ಫೋಸಿಸ್‌ನ ನಾರಾಯಣ ಮೂರ್ತಿ ಡಿಸ್ಚಾರ್ಜ್ ಆಗಿ ನೇರವಾಗಿ ಮತಗಟ್ಟೆಗೆ ತೆರಳಿ ಮತದಾನ ಮಾಡಿದರು. ಚಿತ್ರದುರ್ಗ, ದಕ್ಷಿಣ ಕನ್ನಡ ಮತ್ತು ಚಿಕ್ಕಮಗಳೂರಿನ ಮೂರು ಕಡೆಗಳಲ್ಲಿ ವಧು-ವರರು ಮದುವೆ ಮುಗಿಸಿಕೊಂಡು ಬಂದು ಮತದಾನದ ಹಕ್ಕು ಚಲಾಯಿಸಿದರು. ನೇತ್ರಾವತಿ ನದಿಗೆ ಸೇತುವೆ ಸಂಪರ್ಕ ಇಲ್ಲದಿದ್ದರೂ ದಕ್ಷಿಣ ಕನ್ನಡ ಲೋಕಸಭಾ ಕ್ಷೇತ್ರದ ಮಂಗಳೂರು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಪಾವೂರು ಉಳಿಯ ದ್ವೀಪದ 150ಕ್ಕೂ ಹೆಚ್ಚು ಮತದಾರರು ದೋಣಿಗಳಲ್ಲಿ ಬಂದು ಮತ ಚಲಾಯಿಸಿದರು.

ಮಂಗಳೂರಿನ ಉಳಾಯಿಬೆಟ್ಟುವಿನ ಜೀವಿತಾ ಎಂಬುವವರು ಚುನಾವಣೆಯಲ್ಲಿ ಮತ ಚಲಾಯಿಸಲು ದುಬೈನಿಂದ ಆಗಮಿಸಿದರೆ, ಫಿಲಿಫೈನ್ಸ್‌ನಲ್ಲಿ ಎಂಬಿಬಿಎಸ್ ವ್ಯಾಸಂಗ ಮಾಡುತ್ತಿರುವ ಚಿತ್ರದುರ್ಗದ ಶಿಕ್ಷಕರ ಕಾಲೋನಿ ನಿವಾಸಿ ಲಿಖಿತ ಜೋಗಿ ಮಟ್ಟಿ ರಸ್ತೆಯಲ್ಲಿರುವ ಮತಗಟ್ಟೆ ಸಂಖ್ಯೆ 230ರಲ್ಲಿ ಮತದಾನ ಮಾಡಿದ್ದು ವಿಶೇಷವಾಗಿತ್ತು.

ನ್ಯಾಯಾಧೀಶ ಆರ್.ಎಸ್.ಜೀತು ಅವರು ಉಡುಪಿಯಿಂದ ಆಗಮಿಸಿ ತುಮಕೂರು ಗ್ರಾಮಾಂತರದ ಕೆ.ಪಾಲಸಂದ್ರದಲ್ಲಿನ ಮತಗಟ್ಟೆ ಸಂಖ್ಯೆ 114ರಲ್ಲಿ ತಮ್ಮ ಹಕ್ಕು ಚಲಾಯಿಸಿದರು. ಮೈಸೂರು-ಕೊಡಗು ಲೋಕಸಭಾ ಕ್ಷೇತ್ರ ವ್ಯಾಪ್ತಿಯ ಹುಣಸೂರು ತಾಲೂಕಿನ ತಿಪ್ಪೂರು ಗ್ರಾಮದ ಮತಗಟ್ಟೆಯಲ್ಲಿ 90 ವರ್ಷದ ಪುಟ್ಟಮ್ಮ ಮತದಾನದ ಹಕ್ಕನ್ನು ಚಲಾಯಿಸಿ ವಾಪಸಾಗುತ್ತಿದ್ದಾಗ ದಿಢೀರ್ ಕುಸಿದು ಬಿದ್ದು, ಮೃತಪಟ್ಟ ಘಟನೆ ವರದಿಯಾಗಿದೆ.

ಮತಯಂತ್ರ ಧ್ವಂಸ: ಚಾಮರಾಜನಗರ ಲೋಕಸಭಾ ಕ್ಷೇತ್ರದ ಮಹದೇಶ್ವರಬೆಟ್ಟ ವ್ಯಾಪ್ತಿಯ ಐದು ಗ್ರಾಮಗಳಲ್ಲಿ ಮತದಾನವನ್ನು ಬಹಿಷ್ಕರಿಸಲಾಗಿದೆ. ಇದೇ ವೇಳೆ ಇಂಡಿಗನತ್ತ ಗ್ರಾಮದಲ್ಲಿ ಮತಯಂತ್ರಗಳ ಧ್ವಂಸ ಮಾಡಲಾಗಿದೆ.

ಎಷ್ಟೇ ಬಾರಿ ಮನವಿ ಮಾಡಿದರೂ ಈ ಗ್ರಾಮಗಳಲ್ಲಿ ಮೂಲ ಸೌಕರ್ಯವನ್ನು ಕಲ್ಪಿಸಲಾಗಿಲ್ಲ. ಚುನಾವಣೆ ಬಂದಾಗ ಮಾತ್ರ ಈ ರಾಜಕಾರಣಿಗಳಿಗೆ ನಮ್ಮ ನೆನಪಾಗುತ್ತದೆ. ಅದಾದ ಬಳಿಕ ನಮ್ಮನ್ನು ಕೇಳುವವರೇ ಇಲ್ಲ ಎಂದು ಆರೋಪಿಸಿ ಮಹದೇಶ್ವರಬೆಟ್ಟ ವ್ಯಾಪ್ತಿಯ ಐದು ಗ್ರಾಮಗಳ ಗ್ರಾಮಸ್ಥರು ಮತದಾನವನ್ನು ಬಹಿಷ್ಕಾರ ಮಾಡಿದ್ದಾರೆ.

ಕನಿಷ್ಠ ಮೂಲಭೂತ ಸೌಕರ್ಯವನ್ನೂ ನೀಡಲಾಗಿಲ್ಲ. ಕುಡಿಯುವ ನೀರು, ರಸ್ತೆ, ವಿದ್ಯುತ್, ಆರೋಗ್ಯ, ಶಿಕ್ಷಣ ಎಲ್ಲವೂ ಇಲ್ಲಿ ಮರೀಚಿಕೆಯಾಗಿದೆ. ಕೆಲವು ದಿನಗಳ ಹಿಂದೆಯೇ ಮತದಾನ ಬಹಿಷ್ಕರಿಸುವುದಾಗಿ ಎಚ್ಚರಿಕೆ ನೀಡಲಾಗಿತ್ತು. ಆದರೂ, ಯಾವೊಂದು ಭರವಸೆ ಸಿಗದೇ ಇರುವ ಹಿನ್ನೆಲೆಯಲ್ಲಿ ಮತದಾನವನ್ನು ಬಹಿಷ್ಕಾರ ಮಾಡುತ್ತಿರುವುದಾಗಿ ಗ್ರಾಮಸ್ಥರು ಹೇಳಿದ್ದಾರೆ.

ಇಂಡಿಗನತ್ತ ಗ್ರಾಮದಲ್ಲಿ ರೊಚ್ಚಿಗೆದ್ದ ಗ್ರಾಮಸ್ಥರು ಮತಗಟ್ಟೆಯನ್ನು ಧ್ವಂಸ ಮಾಡಿದ್ದಾರೆ. ಮತದಾನದಿಂದ ದೂರ ಉಳಿದ ಗ್ರಾಮಸ್ಥರಿಂದ ಈ ಕೃತ್ಯ ನಡೆದಿದೆ. ಈ ವೇಳೆ ಗ್ರಾಮಸ್ಥರ ಮನವೊಲಿಕೆಗೆ ತೆರಳಿದ್ದ ಅಧಿಕಾರಿಗಳ ಮೇಲೆಯೂ ಹಲ್ಲೆ ನಡೆಸಲಾಗಿದೆ. ಆಕ್ರೋಶಗೊಂಡ ಹಲವರು ಇವಿಎಂ, ಮೇಜು ಕುರ್ಚಿ ಮತಗಟ್ಟೆ ಸಾಮಗ್ರಿಗಳನ್ನು ಧ್ವಂಸ ಮಾಡಿದ್ದಾರೆ.

ಸ್ಥಳದಲ್ಲಿ ಜನರನ್ನು ಚದುರಿಸಲು ಪೊಲೀಸರಿಂದ ಲಾಠಿ ಚಾರ್ಜ್ ನಡೆಸಲಾಗಿದೆ. ಇದೇ ವೇಳೆ ತಿರುಗಿಬಿದ್ದ ಜನರು ಸಹ ಪೊಲೀಸರ ಮೇಲೆ ಕಲ್ಲು ತೂರಿದ್ದಾರೆ. ಸ್ಥಳದಲ್ಲಿ ಬಿಗುವಿನ ವಾತಾವರಣ ನಿರ್ಮಾಣವಾಗಿದೆ. ಸಾರ್ವಜನಿಕರು ಸೇರಿ ಅಧಿಕಾರಿಗಳಿಗೂ ಗಾಯಗಳಾಗಿವೆ. ಪುರುಷರು, ಮಹಿಳೆಯರು ಎನ್ನದೆ ಪೊಲೀಸರು ಲಾಠಿ ಚಾರ್ಜ್ ಮಾಡಿದ್ದಾರೆ. ಬೆಂಗಳೂರಿನಲ್ಲಿ ವೃದ್ಧೆಯೊಬ್ಬರು ಆಸ್ಪತ್ರೆಗೆ ದಾಖಲಾಗಿದ್ದರೂ, ಆಕ್ಸಿಜನ್ ಸಮೇತ ಮತಗಟ್ಟೆಗೆ ಬಂದು ಹಕ್ಕು ಚಲಾಯಿಸಿದ್ದಾರೆ. ಜಂಬೂ ಸವಾರಿ ದಿನ್ನೆಯಲ್ಲಿ ಮತ ಚಲಾಯಿಸಲು ಬಂದ ಮಹಿಳೆಯೊಬ್ಬರಿಗೆ ಹೃದಯ ಸ್ತಂಭನ ಆಗಿದೆ. ಬಳಿಕ ಅಲ್ಲಿಯೇ ಮತ ಚಲಾಯಿಸಲು ಬಂದಿದ್ದರಿಂದ ಅವರ ಜೀವ ಉಳಿದಿದೆ

ಮಹಿಳೆ ಕುಸಿದ ಸಮಯದಲ್ಲಿ ಅಲ್ಲಿಗೆ ಬಂದಿದ್ದ ಬೊಮ್ಮಸಂದ್ರದ ನಾರಾಯಣ ಆರೋಗ್ಯ ಕೇಂದ್ರದ ಮೂತ್ರಪಿಂಡ ತಜ್ಞ ಡಾ. ಗಣೇಶ್ ಶ್ರೀನಿವಾಸ ಪ್ರಸಾದ್ ಅವರು ರಕ್ಷಣೆಗೆ ದಾವಿಸಿದ್ದಾರೆ.

ಪರೀಕೆ ಮಾಡಿದ ವೈದ್ಯರು, ಪಲ್ಸ್ ರೇಟ್ ಕಡಿಮೆಯಾಗುತ್ತಿರುವುದನ್ನು ಗಮನಿಸಿದ್ದಾರೆ. ಆ ಸಮಯದಲ್ಲಿ ದೇಹ ಕೂಡ ಯಾವುದೇ ಸ್ಪಂದನೆಯನ್ನು ಮಾಡುತ್ತಿರಲಿಲ್ಲ. ಹೀಗಾಗಿ ಕೂಡಲೇ ಸಿಪಿಆರ್ ಮಾಡಿದ್ದು, ಪರಿಸ್ಥಿತಿಯು ಕೊಂಚ ಮಟ್ಟಿಗೆ ಸುಧಾರಿಸುವಂತೆ ಮಾಡಿದ್ದಾರೆ. ಚುನಾವಣಾ ಕರ್ತವ್ಯದಲ್ಲಿದ್ದವರು ಧಾವಿಸಿ ಜ್ಯೂಸ್ ನೀಡಿದ್ದಾರೆ. ಕೂಡಲೇ ಆಂಬುಲೆನ್ಸ್‌ಗೆ ಕರೆ ಮಾಡಲಾಗಿದೆ. ಐದು ನಿಮಿಷದೊಳಗೆ ಮತಗಟ್ಟೆ ಬಳಿ ಆಂಬ್ಯುಲೆನ್ಸ್ ಬಂದಿದ್ದು, ಮಹಿಳೆಯನ್ನು ಆಸ್ಪತ್ರೆಗೆ ದಾಖಲು ಮಾಡಲಾಗಿದೆ.

ಮತಯಂತ್ರ ಧ್ವಂಸ; ಲಾಠಿ ಪ್ರಹಾರ

ಒಪ್ಪಲಿಲ್ಲವಾದರೂ ಮೇಂದಾರೆ ಗ್ರಾಮದ ಕೆಲವರು ಮತದಾನ ಮಾಡಲು ಮತಗಟ್ಟೆಗೆ ಅಧಿಕಾರಿಗಳೊಂದಿಗೆ ಆಗಮಿಸಿದ್ದಾರೆ.

ಈ ವೇಳೆ ಮತಗಟ್ಟೆ ಬಳಿ ಜಮಾಯಿಸಿದ ಗ್ರಾಮಸ್ಥರು ಮೂಲ ಸೌಕರ್ಯಕ್ಕಾಗಿ ನಾವು ಮತದಾನ ಬಹಿಷ್ಕಾರ ಮಾಡಿರುವಾಗ ನೀವು ಹೇಗೆ ಮತದಾನ ಮಾಡುತ್ತೀರಿ ಎಂದು ಪ್ರಶ್ನಿಸಿದ್ದಲ್ಲದೇ, ಅವರನ್ನು ಮತದಾನ ಮಾಡದಂತೆ ತಡೆದಿದ್ದಾರೆ. ಈ ವೇಳೆ ಮಧ್ಯ ಪ್ರವೇಶಿಸಿದ ಪೊಲೀಸರು ಮತದಾನ ಮಾಡುವವರಿಗೆ ಅಡ್ಡಿಪಡಿಸಬಾರದೆಂದು ತಿಳಿಸಿದಾಗ, ಪೊಲೀಸರು ಮತ್ತು ಅಧಿಕಾರಿಗಳೊಂದಿಗೆ ಗ್ರಾಮಸ್ಥರು ಮಾತಿನ ಚಕಮಕಿ ನಡೆಸಿ, ಇದು ವಿಕೋಪಕ್ಕೆ ತಿರುಗಿದ ಪರಿಣಾಮ ಗ್ರಾಮಸ್ಥರು ಮತಗಟ್ಟೆಗೆ ನುಗ್ಗಿ ಇವಿಎಂ ಯಂತ್ರ, ಮತಗಟ್ಟೆಯ ಬಾಗಿಲು, ಮೇಜು-ಕುರ್ಚಿ, ಇತರೆ ಪರಿಕರಗಳನ್ನು ಧ್ವಂಸ ಮಾಡಿದ್ದಲ್ಲದೇ ಕಲ್ಲು ತೂರಾಟ ನಡೆಸಿದ್ದಾರೆ. ಇದರ ಪರಿಣಾಮವಾಗಿ ಪೊಲೀಸರು ಲಾಠಿ ಚಾರ್ಜ್ ನಡೆಸಿ ಗ್ರಾಮಸ್ಥರನ್ನು ಚದುರಿಸಿದ್ದಾರೆ. ಈ ಐದೂ ಗ್ರಾಮಗಳಲ್ಲಿ ಬಿಗುವಿನ ವಾತಾವರಣ ನಿರ್ಮಾಣವಾಗಿದೆ. ಈ ಘಟನೆಯಲ್ಲಿ ತಹಸೀಲ್ದಾರ್ ಗುರುಪ್ರಸಾದ್ ಸೇರಿದಂತೆ ಪೊಲೀಸರು ಹಾಗೂ ಗ್ರಾಮಸ್ಥರಿಗೆ ಗಾಯಗಳಾಗಿದೆ. ತಹಸೀಲ್ದಾರ್ ಗುರುಪ್ರಸಾದ್ ಅವರ ತಲೆಗೆ ಗಾಯವಾಗಿದ್ದು, ಮಲೆ ಮಹದೇಶ್ವರಸ್ವಾಮಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡಿದ್ದಾರೆ. ಅಲ್ಲದೇ ಮಲೆ ಮಹದೇಶ್ವರಸ್ವಾಮಿ ಬೆಟ್ಟದ ಪೊಲೀಸ್ ಠಾಣೆಯ ಇನ್‌ಸ್ಪೆಕ್ಟರ್ ಜಗದೀಶ್ ಹಾಗೂ ಡಿಆರ್ ಪೊಲೀಸರಿಗೂ ಸಣ್ಣಪುಟ್ಟ ಗಾಯಗಳಾಗಿವೆ. ಉಳಿದಂತೆ ಗ್ರಾಮದ ಶಿವಕುಮಾರ್, ಮಹದೇವಯ್ಯ, ಸಣ್ಣಯ್ಯ ಸೇರಿದಂತೆ ಹಲವರಿಗೆ ಗಾಯಗಳಾಗಿವೆ.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821-2496522/23

ಬೇಕಾಗಿದ್ದಾರೆ
ಗುಂಡ್ಲುಪೇಟೆ ಟೌನ್‌ನಲ್ಲಿರುವ ಮನೆಯಲ್ಲಿ ಬೆಳಿಗ್ಗೆಯಿಂದ ಸಂಜೆವರೆಗೆ ಮನೆ ಕೆಲಸ ಮಾಡಲು ಮಹಿಳೆ ಬೇಕಾಗಿದ್ದಾರೆ.
Mob: 8861106220



Solar Water Heater SALES & SERVICE
BAJAJ FINSERV
SUNZONE SOLAR SYSTEM
VM Double Road, Kuvempunagar, Mysuru
9845175443

Aquaguard & Kent Sales and Service
Service Charge: 300/-
9901200444

2 BHK HOME INTERIORS
Starting @ ₹2.5 Lacs*
Home Space Mart™
TALK TO OUR DESIGN TEAM
9108923123

ಮನೆ ಬಾಡಿಗೆಗೆ ಇದೆ
ಟಿ.ಕೆ.ಲೇಔಟ್, 1ನೇ ಫ್ಲೋರ್ 6ನೇ ಮೇನ್, 6ನೇ ಕ್ರಾಸ್ 1BHK ಮನೆ ಬಾಡಿಗೆಗೆ ಇದೆ
9738444665

ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್
ಜರ್ಮನ್ ಟೆಕ್ನಾಲಜಿ ಬಳಸಿ ಸಂಪು, ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್ ಮಾಡಲಾಗುತ್ತದೆ.
Mob: 9008711654

ನಿರುದ್ಯೋಗಿಗಳಿಗೊಂದು ಸುವರ್ಣಾವಕಾಶ
ಮನೆಯಲ್ಲೇ ಕುಳಿತು ಟಾರ್ಗೆಟ್ ಇಲ್ಲದೆ ಬರವಣಿಗೆ ಮೂಲಕ 9 ರಿಂದ 30 ಸಾವಿರದವರೆಗೆ ಹಣಗಳಿಸುವ ಸುವರ್ಣಾವಕಾಶ. ಆಸಕ್ತರು ಸಂಪರ್ಕಿಸಿ:
6361056646, 7676844160

ನಿವೇಶನಗಳು ಮಾರಟಕ್ಕಿದೆ
B.S.N.L ಲೇಔಟ್ ಸಾತಗಳ್ಳಿ ಲೇಔಟ್ ವಾಣಿವಿಳಾಸ ನಗರ
30x40, 20x30, 40x60
9448447035

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್
Mob: 7204494854

ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ
ಕಡಕೊಳ ಏರಿಯಾದಲ್ಲಿ TVS ಫ್ಯಾಕ್ಟರಿಯಲ್ಲಿ & ನಂಜನಗೂಡು ಏರಿಯಾದಲ್ಲಿ ತಾಂಡವಪುರ ಮತ್ತು ಮೈಸೂರಿನ ಬಲ್ಲಾಳು RTO ಏರಿಯಾದ ಸುತ್ತಮುತ್ತ ಏರಿಯಾದಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ.
ಸಂಬಳ: 16500/-
ವಯೋಮಿತಿ 50 ವರ್ಷದ ಒಳಗೆ
ವಿದ್ಯಾರ್ಹತೆ: SSLC ಮೇಲ್ಪಟ್ಟು
ESI, PF & ಊಟ,
ತಿಂಡಿ ವಸತಿ ಸೌಲಭ್ಯವಿರುತ್ತದೆ.
9620777819, 9620667819

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್
Mob: 9108566022

100% TEAK WOOD
FACTORY FINISH DOORS & FRAMES
@ FACTORY DEPOT RATES



10 YEARS WARRANTY*
9845426862
9901291267

ತಕ್ಷಣ ಬೇಕಾಗಿದ್ದಾರೆ
ಮೈಸೂರಿನ ಮೇಟಗಳ್ಳಿ ಕೈಗಾರಿಕಾ ಪ್ರದೇಶದಲ್ಲಿರುವ ಕಾರ್ಖಾನೆ ಯೊಂದಕ್ಕೆ ತಕ್ಷಣ ಪುರುಷ & ಮಹಿಳಾ ಕಾರ್ಮಿಕರು ಬೇಕಾಗಿದ್ದಾರೆ. ವಯೋಮಿತಿ 18 ರಿಂದ 40 ರವರೆಗೆ. ವಿದ್ಯಾರ್ಹತೆ: ಕನಿಷ್ಠ ಓದು / ಬರಹ ಗೊತ್ತಿರಬೇಕು. ವೇತನ: 13,448 + 1000 attendance bonus, ESI & PF ಮತ್ತು ಊಟ ಮತ್ತು ವಸತಿ ಸೌಲಭ್ಯವಿರುತ್ತದೆ. ಅಗತ್ಯ ದಾಖಲಾತಿಗಳು: ಆಧಾರ್ ಕಾರ್ಡ್, ಬ್ಯಾಂಕ್ ಪಾಸ್‌ಬುಕ್, ಫೋಟೋ-06, ಟಿಸಿ. ಅಥವಾ ಮಾರ್ಕ್ಸ್‌ಕಾರ್ಡ್ ಕಡ್ಡಾಯ.
8453408502, 9108100117

ಬೇಕಾಗಿದ್ದಾರೆ
ದಿನಸಿ ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗರು/ ಮಹಿಳೆಯರು ಬೇಕಾಗಿದ್ದಾರೆ ಇಚ್ಛೆಯುಳ್ಳವರು ಸಂಪರ್ಕಿಸಿ: ಬಾಲಕೃಷ್ಣ ಪ್ರಾವಿಷನ್ ಸ್ಟೋರ್ ಕರ್ನಾಟಕ ಬ್ಯಾಂಕ್ ಹತ್ತಿರ, ನಜರ್‌ಬಾದ್, ಮೈಸೂರು
9739816440

SITES FOR SALE
Near to INFOSYS, L&T and BEML
Available: 30x30, 30x40, 30x50 & 40x60. 60 Feet Road Approach
MUDA APPROVED, MUDA KHATHA
Srirangapattana Registration.
90% Work Completed. Now Bookings Open. More details call me
9916766389, 6363400519

ರೋಗ ಯಾವುದೇ ಇರಲಿ
ಯಾವುದೇ ನಿಶ್ಶಕ್ತಿ, ಸೋರಿಯಾಸಿಸ್, ಬಿಳಿಮಚ್ಚೆ, ನವೆ, ವೀರ್ಯದಲ್ಲಿ ಅಣು ಕಡಿಮೆ ಇದ್ದು ಮಕ್ಕಳಿಲ್ಲದಿರುವಿಕೆ, ಮೂತ್ರ ಉರಿ, ಯಾವುದೇ ಸಮಸ್ಯೆಗೆ ಸಂಪರ್ಕಿಸಿ: ಪರಸ್ಥಳದವರು ಕರೆ ಮಾಡಿ ಔಷಧಿ ತರಿಸಿಕೊಳ್ಳಬಹುದು
ಡಾ. ಆರ್.ತ್ಯಾಗರಾಜು
Govt.Reg. No. 7358
9902505474

SITE FOR SALE
30x40 Corner Site at Rajajinagara, Near Sri M. Vishweshwaraya Layout
8951820020

ಬೋಳು ತಲೆಯ ಸಮಸ್ಯೆಯೇ?



ಕಿಮೋತೆರಪಿ ಚಿಕಿತ್ಸೆಗೆ ಒಳಪಡುತ್ತಿರುವ ರೋಗಿಗಳಿಗೆ ಸ್ಥಿರಾತ್ಮಕ ಬೆಲೆಯಲ್ಲಿ ಹೇರ್ ವಿಗ್‌ಗಳು ದೊರೆಯುತ್ತವೆ.
SMART HAIR FIXING
574, 9th Cross, Anikethana Road, kuvempunagar, Mysuru
MYSURU 9611028523 MANGALORE 9343142258

DTCP SITES FOR SALE
DTCP Sites Rs. 699 per sq.ft., Near Jayapura, H.D. Kote Road, Mysore.
9590491194, 9606783264

ಕಳೆದಿದೆ
ರಾಮೇಗೌಡ, ಕುಲುಮೆಹೊಸೂರು ಗ್ರಾಮ, ಸಾಲಿಗ್ರಾಮ ತಾಲ್ಲೂಕು, ಮೈಸೂರು, ದಿನಾಂಕ 14-11-2023ರಂದು ಸಾಲಿಗ್ರಾಮದ ಹಳ್ಳಿ ಮೈಸೂರು ರಸ್ತೆಯಲ್ಲಿ, ಬೈಕಿನಲ್ಲಿ ಹೋಗುತ್ತಿರುವಾಗ KA-45 ED-9227 ನಂಬರ್‌ನ ಪ್ರಾದೇಶಿಕ ಸಾರಿಗೆ ನೋಂದಣಿ ಪುಸ್ತಕ ಆಕಸ್ಮಿಕವಾಗಿ ಕಳೆದು ಹೋಗಿದೆ. ಸಿಕ್ಕಿದವರು ಸಂಪರ್ಕಿಸಿ:
Mob: 9535727730

Change of Name
I, Smt. Suvarna. J, residing at D.No. 21, 2nd Cross, C.V. Road, Bannimantap 'A' Layout, Mysuru-570 015, declare that my correct name is Suvarna J., but in my passport No. G4349209 my name is mentioned as Suvarna. But in my Aadhaar Card & other doucments my name is mentioned as Suvarna J. So, in my passport my name is to be corrected as Suvarna J. I declare this in front of Notary C.R. Seetharam on 25.4.2024.
Sd/- Suvarna J.

USED TOWELS FOR SALE.
Call: 9448674411

WANTED
1. Electrician
2. Helpers to work in Nanjanagud Industrial Area
Salary + ESI+PF
7259016509
7259016514

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್
Mob: 8880558064

Site for Sale GOKULAM
50x75, Commercial Site, MUDA East South Corner
Price - 4.95 Cr
40 Feet Road
8660105902

30x65 Vidyaranyapuram
Commercial Site, North East Corner Old Demolish House for Sale, Price - 2.28 Cr
Sewage Farm Road, 60 Feet Road
8660105902

HOUSE SALE Dattagalli
3 Floors Rent Earning New House, 27x30 Corner, MUDA
Price - 1.39 Cr,
Near Kadamba Bakery
8660105902

SITES for SALE JP Nagar Ring Road
20 x 30 - 17 Lakhs,
30 x 40 - 33 Lakhs,
Near Gurur Bus Stop, Ramabainagar, Mysore.
DTCP approved (Corporation limits)
L5 Kms from JP Nagar Ring Road
8660105902

ಮುಡಾ ಖಾತಾ ಸೈಟ್ ಸೇಲ್
ಈಸ್ಟ್ ಫೇಸಿಂಗ್ ಕಾರ್ನರ್ ಸೈಟ್
28.1x40, ಬೆಲೆ 34 ಲಕ್ಷ
9342123373

TEACHER REQUIRED
Sri Jnana Bharathi School, P. Hosahalli, K.R.S Road, (3 kms from J K Tyres) Mysore
MSc/ BSc or Any Degree
Interview : 1st of May 2024
9620124567
8867819099

ಸೈಟು ಮಾರಾಟಕ್ಕಿದೆ
30x40 ದಟ್ಟಗಳ್ಳಿ 3ನೇ ಹಂತ
9901676619
9741076619

ಅರ್ಚಕರು ಬೇಕಾಗಿದ್ದಾರೆ
ಮೈಸೂರಿನ ಗೋಕುಲಂ 1ನೇ ಹಂತದಲ್ಲಿರುವ ಶ್ರೀ ಶನೇಶ್ವರಸ್ವಾಮಿ ದೇವಸ್ಥಾನದಲ್ಲಿ ಪೂಜಾ ವಿಧಿಗಳನ್ನು ಸಲ್ಲಿಸಲು 5 ರಿಂದ 6 ವರ್ಷಗಳ ಅನುಭವವಿರುವ ಅರ್ಚಕರು ಅಥವಾ ಬ್ರಾಹ್ಮಣರು 50 ವರ್ಷ ಮೇಲ್ಪಟ್ಟ ಅವಿವಾಹಿತರು ತಿಂಗಳಿಗೆ ಸಂಬಳ 6500/- ರೂ. ಸಂಪರ್ಕಿಸುವ ಸಮಯ ಬೆಳಿಗ್ಗೆ 8 ರಿಂದ 11 ಗಂಟೆ, ಸಂಜೆ 6 ರಿಂದ 8 ಗಂಟೆ

ಮನೆ ಭೋಗ್ಯಕ್ಕೆ ಪಡುವಾರಹಳ್ಳಿ
9663563587

ಬೇಕಾಗಿದ್ದಾರೆ
1) ಫೀಲ್ಡ್ ಸೂಪರ್ ವೈಸರ್‌ಗಳು 2 ಮಂದಿ (ಸೆಕ್ಯೂರಿಟಿ ಅನುಭವವಿರಬೇಕು)
2) ಸೆಕ್ಯೂರಿಟಿ ಗಾರ್ಡ್‌ಗಳು -10 ಮಂದಿ
3) ಮಹಿಳಾ ಹೌಸ್ ಕೀಪರ್‌ಗಳು 10 ಮಂದಿ
9686422400
9242406261

WANTED
Mechanical Engineer (Male) Diploma / BE Completed 2 to 3 Years Experience for Construction Company
7337801422

ಮನೆ ಮಾರಾಟಕ್ಕಿದೆ
30x40 - MUDA Alloted 35 ಚದರವುಳ್ಳ 3 ಅಂತಸ್ತಿನ E/Face ಹೌಸ್ ಜೆ.ಪಿ.ನಗರ, 'ಬಿ' ಬ್ಲಾಕ್ ಮೈಸೂರು
9449175644

FOR LEASE
10 Rooms Suitable fo PG Bogadi Post Office Road
9844246875

ಹೊಸ ಮನೆ ಮಾರಾಟಕ್ಕಿದೆ
20x30 N/F, 2BHK ಸೋಮೇಶ್ವರ ಲೇಔಟ್ ಸಾಯಿ ಗಾರ್ಮೆಂಟ್ಸ್ ಹತ್ತಿರ ನಿಂಗದೇವರ ಕೊಪ್ಪಲು, ಮೈಸೂರು
9902634441

ಬೇಕಾಗಿದ್ದಾರೆ
ಕುವೆಂಪು ನಗರದ ಹೋಟೆಲ್‌ಗೆ ಈ ಕೆಳಕಂಡ ಕೆಲಸಗಾರರು ಬೇಕಾಗಿದ್ದಾರೆ. ಕ್ಯಾಪ್ಟನ್, ಸಪ್ಲೈಯರ್, ಆಲ್ ರೌಂಡರ್, ಚಾಟ್ ಮಾಸ್ಟರ್, ಕಾಫಿ ಮಾಸ್ಟರ್, ತಂದೂರಿ ಕುಕ್, ಹೌಸ್ ಕೀಪಿಂಗ್
7676111390

ನಿವೃತ್ತ ನೌಕರರಿಗೆ ಉದ್ಯೋಗವಕಾಶ
ಕೇಂದ್ರ / ರಾಜ್ಯ ನಿವೃತ್ತ ನೌಕರರಿಗೆ ಮತ್ತು ಉದ್ಯಮದವರಿಗೆ, ಗೃಹಿಣಿಯರಿಗೆ ಪ್ರಯೋಜನಗಳು ಶೂನ್ಯ ಬಂಡವಾಳ + ನಿಗದಿತ ವೇತನ ಪಿಎಫ್ ಹಾಗೂ ವೈದ್ಯಕೀಯ ಲಾಭ ಹಾಗೂ ವಿದೇಶ ಪ್ರಯಾಣ ವಯೋಮಿತಿ 30 ವರ್ಷ ಮೇಲ್ಪಟ್ಟಿರಬೇಕು.
9449152797, 8660764095

ಬೇಕಾಗಿದ್ದಾರೆ
1) ಸೌತ್ ಇಂಡಿಯನ್ ಸಸ್ಯಾಹಾರಿ ಅಡುಗೆ ಭಟ್ಟರು (ಗಂಡಸರು) ಸಂಬಳ : 25,000/-
2) ಅಡುಗೆ ಸಹಾಯಕರು (ಗಂಡಸರು) ಸಂಬಳ: 20,000/-
ಊಟ ಮತ್ತು ವಸತಿ ಉಚಿತ
(ಇಲ್ಲೇ ಉಳಿದು ಕೊಳ್ಳಬೇಕಾಗುತ್ತದೆ.)
ಸ್ಥಳ: ಮೈಸೂರು
7829244942

Life Partner ಆಗಲು Govt. Job ಇರುವ ವರನಿಗೆ 2ನೇ ಸಂಬಂಧಕ್ಕೆ ವಧು ಬೇಕಾಗಿದ್ದಾರೆ
ಒಕ್ಕಲಿಗ ಗೌಡಾ Age 41 (5.5 / B.E.Govt Engineer Salary 80,000/- ಇರುವಂತಹ ವರನಿಗೆ ಯಾವುದೇ ಜಾತಿಯ ಅಭ್ಯಂತರವಿಲ್ಲದೆ 2ನೇ ಸಂಬಂದಕ್ಕೆ ವಿಧವೆ/ವಿಚ್ಛೇದಿತೆ/ನೌಕರಸ್ಥ ಬಡವೆ / ವಧು ಬೇಕಾಗಿದ್ದಾರೆ.
(ಮಕ್ಕಳಿದ್ದರೂ ಪರವಾಗಿಲ್ಲ)
9480385742

HOUSE FOR SALE
20X40 North West Corner G.F 2 BHK FF & SF 3BHK 3 Floor Kaveri Layout Roopa Nagar, Mysore
9620302755
9886245930

SITE FOR SALE
30X40, 30X50, Fully Developed, MUDA approved Layout, Near H.D. Kote Ring Road junction
9483358399
6381779015

NEW HOUSE FOR SALE
In Vijayanagar 1st Stage Ist Main 40x60 East Facing 60 ft Road 4 Bed Room (All attched) Teak doors & windows Price : 3.60 Cr. (Slightly Negotiable)
9880718980

ಮನೆ ಬಾಡಿಗೆಗೆ ಇದೆ
40x40 ಪೂರ್ವ ದಿಕ್ಕು, ಇಂಡಿಪೆಂಡೆಂಟ್ ಕಾರ್ನರ್ ಮನೆ, ಕಾರ್ ಪಾರ್ಕಿಂಗ್ ಸೌಲಭ್ಯ ಇರುವ ಮನೆ, ಹಿನಕಲ್ ರಿಂಗ್ ರಸ್ತೆ ಸರ್ಕಲ್ ಹತ್ತಿರ, ಎಸ್.ವಿ. ರೆಸಿಡೆನ್ಸಿ ಅಪಾರ್ಟ್‌ಮೆಂಟ್ ರಸ್ತೆ, ಮೈಸೂರು
(ಮಧ್ಯವರ್ತಿಗಳಿಗೆ ಅವಕಾಶವಿಲ್ಲ)
9741534036

E/F 30x40 DTCP A11 ಖಾತೆ ಸೊಸೈಟಿ ಸೈಟು ಮಾರಾಟಕ್ಕಿದೆ
14 ಲಕ್ಷದ 50 ಸಾವಿರಗಳು
TVS ಫ್ಯಾಕ್ಟರಿ ಹತ್ತಿರ ಮೈಸೂರು
9742198093

ಬೇಕಾಗಿದ್ದಾರೆ
ಮನೆಯಲ್ಲಿ ಅಡುಗೆ ಮಾಡಲು ಅನುಭವ ಉಳ್ಳವರು ಮಹಿಳೆ ಮಾತ್ರ ಬೇಕಾಗಿದ್ದಾರೆ
ಕುವೆಂಪುನಗರ 'M' Block
9972805819

S.K CONSTRUCTION
ಹೊಸ ಮನೆ ಕಟ್ಟಬೇಕೆ ಚಿಂತೆ ಬೇಡ ನಿಮ್ಮ ಕೈಗೆಟುಕುವ ಬೆಲೆಯಲ್ಲಿ ಅತಿ ಉತ್ತಮ ಗುಣಮಟ್ಟದಲ್ಲಿ Engineer Plan, 3D Eleivation ಸಹಿತ ನಾವೇ ಲೋನ್ ಮಾಡಿ ನಿಮ್ಮ ಕನಸಿನ ಮನೆ ಕಟ್ಟಿ ಕೊಡುತ್ತೇವೆ.
9620528490

ಸಿಪಾಯಿ ಪ್ರಾಪರ್ಟೀಸ್, ಇಲವಾಲ
1) ಬ್ರಹ್ಮಾನಂದ ಸಾಗರ MUDA Approved ಲೇಔಟ್ 30x50 N/W ಕಾರ್ನರ್
30x40 East Phases ಸೈಟ್
2) ಆಚಾರ್ಯ ವಿದ್ಯಾಕುಲ ಹಿಂಭಾಗ NJ Hospital ಹತ್ತಿರ ಭೂಮಿಕಾ ಗಾರ್ಡನ್ ಸಿಟಿಯಲ್ಲಿ
40x60 East Phases ಸೈಟ್
30x40 East Phases ಸೈಟ್
ಸಂಪರ್ಕಿಸಿ: ನಂಜುಂಡಸ್ವಾಮಿ ಹೆಚ್.ಎಸ್.
Ex-Army 9483862050

ಹೊಸ ಮನೆ ಹಾಗೂ ನಿವೇಶನ ಮಾರಾಟಕ್ಕಿದೆ
30x40 Ground & First North Face ಐಶ್ವರ್ಯ ಬಡಾವಣೆ (SS Layout J P Nagar)
40x60 Site West Face ಹೆರಿಟೇಜ್ ನಗರ, ಮೈಸೂರು
9448271349

ಬೇಕಾಗಿದ್ದಾರೆ
ಮೈಸೂರಿನ ಸುತ್ತ ಮುತ್ತ ಪ್ರತಿಷ್ಠಿತ ಕಂಪನಿಗಳಲ್ಲಿ ಕೆಲಸ ಮಾಡಲು ಅನುಭವವುಳ್ಳ ನುರಿತ ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ.
ವಿದ್ಯಾರ್ಹತೆ: SSLC
9035050656
9900212487

ಹೋಟೆಲ್ ಕೆಲಸಕ್ಕೆ ಬೇಕಾಗಿದ್ದಾರೆ
* ನುರಿತ ಸೌತ್ ಇಂಡಿಯನ್ ಕುಕ್ ಮತ್ತು ಹೆಲ್ಪರ್ ಬೇಕಾಗಿದ್ದಾರೆ.
* 30x45 ಕಾರ್ನರ್ ಸೈಟ್ ಗೆಜ್ಜಗಳ್ಳಿಯ ನಿವೇಶನ ಮಾರಾಟಕ್ಕಿದೆ.
ಸಂಪರ್ಕಿಸಿ: ಪ್ರಭುದೇವ್
9880774703

ಕೆಲಸಕ್ಕೆ ಬೇಕಾಗಿದ್ದಾರೆ
ಮೈಸೂರು, ಇಲವಾಲ, ಕೂರ್ಗಳ್ಳಿ, ಮೇಟಗಳ್ಳಿ, ಕುವೆಂಪುನಗರ, ಬೆಳಗೊಳ ಇಲ್ಲಿ ಉನ್ನತ ಕಂಪನಿ ಕಾರ್ಖಾನೆಗಳಿಗೆ ಹೋಟೆಲ್‌ಗಳಿಗೆ ಹಾಸ್ಪಿಟಲ್‌ಗಳಿಗೆ ಉನ್ನತ ಬೇಕರಿಯಲ್ಲಿ ಕೆಲಸ ಮಾಡಲು, ಸೆಕ್ಯೂರಿಟಿಗಳು, ಹೌಸ್ ಕೀಪಿಂಗ್‌ಗಳು Helper ಗಳು ಬೇಕಾಗಿದ್ದಾರೆ.
9036461347
9611208553

ಆಫೀಸ್ ಕೆಲಸದ ಉದ್ಯೋಗಗಳಿಗೆ ತಕ್ಷಣ ಯುವಕ, ಯುವತಿಯರು ಬೇಕಾಗಿದ್ದಾರೆ.
ಯಾವುದೇ ಸಂದರ್ಶನ ಇರುವುದಿಲ್ಲ ಪ್ರಸಿದ್ಧ ಕಂಪನಿಗಳಲ್ಲಿ ಅಕೌಂಟೆಂಟ್ ಡೇಟಾ ಆಪರೇಟರ್, ಟೆಲಿಕಾಲರ್, ಕ್ಯಾಷಿಯರ್, ಆಫೀಸ್ ಬಾಯ್ ಮತ್ತು ಮ್ಯಾನುಫ್ಯಾಕ್ಚರಿಂಗ್ ಕೆಲಸಕ್ಕೆ
9632831680
8951533307

ಮೈಸೂರು ಮಿತ್ರ — ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಮೈಸೂರು ಮಿತ್ರ




ಮದ್ದೂರು ತಾಲೂಕು ದೊಡ್ಡರಸಿನ ಕೆರೆ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಮತಗಟ್ಟೆ ಸಂಖ್ಯೆ 164ರಲ್ಲಿ ಸಂಸದೆ ಸುಮಲತಾ ಅಂಬರೀಶ್ ಅವರು ಮತದಾನ ಮಾಡಿದರು.




ಮೈಸೂರಿನ ಸಂಸ್ಕೃತ ಪಾಠಶಾಲಾ ಮತಗಟ್ಟೆಯಲ್ಲಿ 94 ವರ್ಷದ ಶ್ರೀಮತಿ ಸರಸ್ವತಮ್ಮ ಮತದಾನ ಮಾಡಿ, ಸಂಭ್ರಮಿಸಿದರು.



ಲೋಕಸಭಾ ಚುನಾವಣೆಯ ಮೈಸೂರು ಜಿಲ್ಲಾ ಸ್ವೀಪ್ ರಾಯಭಾರಿ ತನಿಷ್ಕಾ ಮೂರ್ತಿ ಮತ ಚಲಾಯಿಸಿದರು.



ಮೈಸೂರು ಜಿಲ್ಲೆಯ ಸ್ವೀಪ್ ಐಕಾನ್‌ಗಳಾದ ಕೃಪಾಕರ – ಸೇನಾನಿ ಅವರು ಮತ ಚಲಾಯಿಸಿದರು.



ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಚುನಾವಣೆ ರಾಯಭಾರಿ, ಮಾಜಿ ಕ್ರಿಕೆಟಿಗ ಜಾವಗಲ್ ಶ್ರೀನಾಥ್ ಮೈಸೂರಿನ ಜ್ಞಾನ ಗಂಗಾ ಪಿಯು ಕಾಲೇಜಿನ ಮತಗಟ್ಟೆಯಲ್ಲಿ ಮತದಾನ ಮಾಡಿದರು.

ಮಾಜಿ ಸಿಎಂ ಕುಮಾರಸ್ವಾಮಿ–ಸಂಸದೆ ಸುಮಲತಾ ಮಾತಿನ ವರಸೆ!

ಕರೆಯದೇ ಪ್ರಚಾರಕ್ಕೆ ನಾನು ಹೇಗೆ ಬರಲಿ?

ಮದ್ದೂರು, ಏ.26– ಪ್ರಧಾನಿ ನರೇಂದ್ರ ಮೋದಿಯವರು ಪ್ರಧಾನಿಯಾಗಬೇಕೆಂಬ ಉದ್ದೇಶದಿಂದ ನಾನು ಗೆದ್ದಂತಹ ಕ್ಷೇತ್ರವನ್ನೇ ತ್ಯಾಗ ಮಾಡಿದ್ದೇನೆ. ಆದರೆ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು ಸುಮಲತಾ ನಮಗೆ ಮಂಡ್ಯದಲ್ಲಿ ಸಹಕಾರ ಕೊಟ್ಟಿಲ್ಲ ಎಂದು ಹೇಳಿದ್ದಾರೆ. ಅವರಿಂದ ಇಂತಹ ಹೇಳಿಕೆಯನ್ನು ನಾನು ನಿರೀಕ್ಷಿಸಿರಲಿಲ್ಲ ಎಂದು ಸಂಸದೆ ಸುಮಲತಾ ಅಂಬರೀಷ್ ಅಸಮಾಧಾನ ವ್ಯಕ್ತಪಡಿಸಿದರು.



ಮತದಾನ ಮಾಡಿದ ಬಳಿಕ ಮದ್ದೂರಿನ ದೊಡ್ಡರಸಿನಕೆರೆಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ದೇವೇಗೌಡರು ದೊಡ್ಡವರು, ಅವರಿಗೆ ಸರಿಯಾದ ಮಾಹಿತಿ ಇಲ್ಲದೆ ಆ ರೀತಿ ಹೇಳಿದ್ದಾರೆ. ಅವರಿಂದ ಅಂತಹ ಹೇಳಿಕೆ ನಿರೀಕ್ಷೆ ಮಾಡಿರಲಿಲ್ಲ. ಸ್ವತಂತ್ರ ಸಂಸದೆಯಾಗಿ ನನ್ನ ಜವಾಬ್ದಾರಿಯನ್ನು ನಿರ್ವಹಿಸಿದ್ದೀನಿ ಎಂದು ತಿರುಗೇಟು ನೀಡಿದರು.

ಈ ಹಂತದಲ್ಲಿ ಅಂಬರೀಶ್ ಅವರ ಪಡೆಯ ಶಕ್ತಿಯನ್ನು ಎನ್‌ಡಿಎಗೆ ಕೊಟ್ಟಿದ್ದೇವೆ. ಮೈತ್ರಿ ಪರ ನಮ್ಮ ಬೆಂಬಲಿಗರು ನಿಷ್ಠೆಯಿಂದ ಕೆಲಸ ಮಾಡಿದ್ದಾರೆ. ಆದರೆ ಜೆಡಿಎಸ್ ನಾಯಕರು ಯಾವುದೇ ಸಭೆ, ಪ್ರಚಾರಕ್ಕೆ ಆಹ್ವಾನಿಸಿಲ್ಲ. ಅವರು ಕರೆದು ನಾನು ಬರದೆ ಇದ್ದರೆ ತಪ್ಪಾಗುತ್ತೆ. ಆದರೆ ಅವರು ನನ್ನ ಕರೆದೇ ಇಲ್ಲ ಎಂದು ಸ್ಪಷ್ಟಪಡಿಸಿದರು.

ನಾನಿಲ್ಲದೆ ಅವರು ಚುನಾವಣೆ ಮಾಡಿಕೊಳ್ಳುತ್ತೀವಿ ಎಂಬ ಭಾವನೆ ಇರಬಹುದು. ಅವರು ಹೇಳಿಕೆ ನೀಡಿದ ನಂತರ ನಿನ್ನೆಯಿಂದ ನನಗೆ ಒಂದಷ್ಟು ಕರೆ ಬಂದವು. ನನ್ನ ಯಾವುದೇ ಪ್ರಚಾರಕ್ಕೆ ಕರೆದಿಲ್ಲ. ಕುಮಾರಸ್ವಾಮಿ ಅವರು ನಮ್ಮ ಮನೆಗೆ ಬಂದು ಹೋದ ನಂತರ ನನಗೆ ಒಂದು ಕರೆ ಮಾಡಿ ಪ್ರಚಾರಕ್ಕೆ ಬನ್ನಿ ಎಂದು ಕೇಳಿಲ್ಲ. ಇಷ್ಟು ತ್ಯಾಗ ಮಾಡಿಯೂ ನನ್ನ ಕರೆಯಲಿಲ್ಲ ಅನ್ನೋದು ನನಗೆ ಬೇಸರವಾಗಿದೆ. ಹಾಗಾದರೆ ನಾನು ಮಾಡಿದ್ದು ತಪ್ಪಾ? ನನ್ನ ಅಭಿಮಾನಿಗಳು ಒಂದಷ್ಟು ಜನ ವಿರೋಧ ವ್ಯಕ್ತಪಡಿಸಿದರು. ಸೋತ ಸೀಟನ್ನೇ ಬಿಡಲ್ಲ ಅಂತಹುದರಲ್ಲಿ ನಾನು ಗೆದ್ದ ಸೀಟು ಬಿಟ್ಟು ಕೊಟ್ಟಿದ್ದೀನಿ. ಅವರ ಮನಸ್ಸಿನಲ್ಲಿ ಏನಿದೆ ಎಂಬುದು ನನಗೆ ಗೊತ್ತಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಪಕ್ಷ ಸೂಚನೆ ನೀಡಿದ ಕಡೆ ಹೋಗಿ ನಾನು ಪ್ರಚಾರ ಮಾಡಿದ್ದೇನೆ. ಮಂಗಳೂರುವರೆಗೂ ಹೋಗಿದ್ದೀನಿ. ಮಂಡ್ಯಕ್ಕೆ ಬರ್ತಿರಲಿಲ್ವಾ? ಆ ದಿನ ನನ್ನ ಸೀಟನ್ನು ಬಿಟ್ಟಾಗಲೂ ಬೇಸರವಾಗಿರಲಿಲ್ಲ. ಆದರೆ ದೇವೇಗೌಡರ ಹೇಳಿಕೆ ನನಗೆ ಬೇಸರ ತರಿಸಿದೆ. ಎನ್‌ಡಿಎ, ಬಿಜೆಪಿ ಗೆಲ್ಲಬೇಕು ಎಂಬುದು ಇದೆ. ಮಂಡ್ಯದಲ್ಲೂ ಒಳ್ಳೆ ಟ್ರೆಂಡ್ ಇದೆ ಅಂತ ಮಾತನಾಡುತ್ತಿದ್ದಾರೆ. ರಾಜ್ಯದ 28 ಕ್ಷೇತ್ರಗಳಲ್ಲೂ ಎನ್‌ಡಿಎ ಅಭ್ಯರ್ಥಿಗಳು ಗೆಲ್ಲಬೇಕು ಎಂಬುದು ನನ್ನ ಆಶಯ ಎಂದು ಹೇಳಿದರು.

ಪ್ರಚಾರಕ್ಕೆ ಬರುವಂತೆ ಮನವಿ ಮಾಡಿದ್ದೇನೆ

ಮದ್ದೂರು: ನಾನೇ ಸುಮಲತಾ ಮನೆಗೆ ಹೋಗಿ ಅವರ ಸಹಕಾರ ಕೇಳಿದ್ದೇನೆ. ಅದಕ್ಕಿಂತ ನಾನು ಏನು ಮಾಡಲು ಸಾಧ್ಯ. ಅಂಬರೀಶ್ ಅಭಿಮಾನಿಗಳು ಒಳಗೊಂಡಂತೆ ನನಗೆ ಸಹಾಯ ಮಾಡಿದ್ದಾರೆ. ಮೋದಿ ಅವರ ಕಾರ್ಯಕ್ರಮದ ವೇದಿಕೆಯಲ್ಲಿ ಸಾಧ್ಯವಾದರೆ ಎರಡು ದಿನ ಪ್ರಚಾರಕ್ಕೆ ಬನ್ನಿ ಅಕ್ಕ ಎಂದಿದ್ದೆ ಎಂದು ಜೆಡಿಎಸ್ ಅಭ್ಯರ್ಥಿ ಹೆಚ್.ಡಿ.ಕುಮಾರಸ್ವಾಮಿ ಸ್ಪಷ್ಟಪಡಿಸಿದರು.



ಮದ್ದೂರಿನ ಕೆ.ಹೊನ್ನಲಗೆರೆ ಗ್ರಾಮದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮಾಜಿ ಸಚಿವ ಆರ್.ಅಶೋಕ್ ಅವರು ಸಹ ನಾನು ಕರೆದಾಗ ಇದ್ದರು. ಅಶೋಕ್ ಸಹ ಮಂಡ್ಯಗೆ ಬಂದು ಪ್ರಚಾರ ಮಾಡಿ ಎಂದಿದ್ದರು. ಎಲ್ಲಾ ಬಿಜೆಪಿ ನಾಯಕರು ನನ್ನ ಪರ ಕೆಲಸ ಮಾಡಿದ್ದಾರೆ. ಇಂದು ಸುಮಲತಾ ಅವರು ನನಗೆ ಮತ ಕೊಟ್ಟಿದ್ದಾರೆ. ಈ ಗೊಂದಲಗಳಿಗೆ ಯಾರು ಪ್ರಚಾರ ಕೊಡುವುದು ಬೇಡ. ಯಾರು ಯಾರ ಬಗ್ಗೆಯೂ ಸಣ್ಣತನದಲ್ಲಿ ಮಾತಾಡೋದು ಬೇಡ ಎಂದು ಸ್ಪಷ್ಟಪಡಿಸಿದರು.

ಎಲ್ಲರೂ ಒಟ್ಟಾಗಿ ಕೆಲಸ ಮಾಡಿರೋದ್ರಿಂದ ರಾಜ್ಯದಲ್ಲಿ ಅತ್ಯಂತ ಬಹುಮತಗಳಲ್ಲಿ ಗೆಲ್ಲಲು ಕಾರಣವಾಗುತ್ತದೆ. ಪಕ್ಷ, ಜಾತಿಯ ವ್ಯಾಮೋಹಕ್ಕೆ ಒಳಗಾಗದೆ ಜನರು ನನಗೆ ಮತ ನೀಡಿದ್ದಾರೆ. ಚುನಾವಣೆ ನಾನು ಮಾಡಿಲ್ಲ, ಮಂಡ್ಯ ಜನ ನನ್ನ ಪರ ಚುನಾವಣೆ ಮಾಡಿದ್ದಾರೆ. ನನ್ನ ಗೆಲುವು ಮಂಡ್ಯ ಜಿಲ್ಲೆಯ ಜನರಿಗೆ ಸೇರಬೇಕು. ಎರಡನೇ ಹಂತದ ಚುನಾವಣೆ ಪ್ರಚಾರಕ್ಕೂ ಹೋಗುತ್ತೇನೆ ಎಂದರು.

ಸುಮಲತಾ ಮಂಡ್ಯದಲ್ಲಿ ಸಹಕಾರ ನೀಡಿಲ್ಲ ಎಂದು ದೇವೇಗೌಡರು ಯಾಕೆ ಹೇಳಿದ್ದಾರೆಯೋ ಗೊತ್ತಿಲ್ಲ. ದೇವೇಗೌಡರಿಗೆ ಮಾಹಿತಿ ಕೊರತೆ ಇರಬಹುದು. ಪಕ್ಷಭೇದ ಮರೆತು ಮಂಡ್ಯದಲ್ಲಿ ಜನರು ಆಶೀರ್ವಾದ ಮಾಡಿದ್ದಾರೆ. ನನಗೆ ಯಾರೂ ವಿರೋಧ ಮಾಡಿಲ್ಲ. ಎಲ್ಲರೂ ನನಗೆ ಸಹಾಯ ಮಾಡಿದ್ದಾರೆ ಎಂದರು. ನನ್ನ ಮತ ಇರೋದು ಬೆಂ.ಗ್ರಾ ಕ್ಷೇತ್ರದಲ್ಲಿ. ಹೀಗಾಗಲೇ ಮತ ಹಾಕಿ ಬಂದಿದ್ದೇನೆ. ಈಗ ಮಂಡ್ಯ ಲೋಕಸಭಾ ಕ್ಷೇತ್ರದಲ್ಲಿ ತಾಲೂಕುವಾರು ಭೇಟಿ ನೀಡುತ್ತಾ ಇದ್ದೇನೆ. ಎಲ್ಲರಿಗೂ ಕೃತಜ್ಞತೆ ಸಲ್ಲಿಸುತ್ತೇನೆ. ಮಂಡ್ಯದಲ್ಲಿ ನಮಗೆ ತುಂಬಾ ಚೆನ್ನಾಗಿ ಇದೆ. ಯಾವುದೇ ರೀತಿಯ ಸಮಸ್ಯೆ ನಮಗೆ ಇಲ್ಲ. ಅತ್ಯಂತ ಉತ್ಸಾಹದಿಂದ ಮತದಾನ ನಡೆಯುತ್ತಿದೆ. ಚುನಾವಣೆ ಅಂದರೆ ಅಪಪ್ರಚಾರ, ನಮ್ಮ ವಿರೋಧ ಮಾಡುವುದು ಸಹಜ. ಮಂಡ್ಯ ಜಿಲ್ಲೆಯಲ್ಲಿ ಎಲ್ಲರೂ ನಮಗೆ ಸಹಕಾರ ನೀಡಿದ್ದಾರೆ. ಕಾಂಗ್ರೆಸ್‌ನ ಕೆಲ ನಾಯಕರು, ಕಾರ್ಯಕರ್ತರು ಬೆಂಬಲಿಸಿದ್ದಾರೆ. ಪಕ್ಷ, ಜಾತಿಭೇದ ಮರೆತು ಸಪೋರ್ಟ್ ಮಾಡಿದ್ದಾರೆ. ಸಂಪೂರ್ಣವಾಗಿ ಮಂಡ್ಯ ಜನರು ನನ್ನ ಬೆಂಬಲಿಸಿದ್ದಾರೆ ಎಂದು ಸ್ಪಷ್ಟಪಡಿಸಿದರು.



ಲೋಕಸಭಾ ಚುನಾವಣೆ ಮತದಾನದ ಹಿನ್ನೆಲೆಯಲ್ಲಿ ಹುಣಸೂರು ತಾಲೂಕಿನ ವಿನೋಬಾ ಕಾಲೊನಿ ಗ್ರಾಮಕ್ಕೆ ಭೇಟಿ ನೀಡಿದ ಶಾಸಕ ಜಿ.ಡಿ.ಹರೀಶ್ ಗೌಡರನ್ನು ಗ್ರಾಮಸ್ಥರು ಆತ್ಮೀಯವಾಗಿ ಬರಮಾಡಿಕೊಂಡರು.

ಕೈಕೊಟ್ಟ ಮತ ಯಂತ್ರ ; ಹತ್ತೇ ನಿಮಿಷದಲ್ಲಿ ದುರಸ್ತಿ



ಮೈಸೂರು,ಏ.26(ಪಿಎಂ)– ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಮತದಾನ ಶುಕ್ರವಾರ ಬಿರುಸಿನಿಂದ ನಡೆಯಿತು. ಈ ನಡುವೆ ಚಾಮುಂಡೇಶ್ವರಿ ಕ್ಷೇತ್ರದ ಮತಗಟ್ಟೆಯೊಂದರಲ್ಲಿ ವಿದ್ಯುನ್ಮಾನ ಮತಯಂತ್ರದಲ್ಲಿ ತಾಂತ್ರಿಕ ದೋಷ ಉಂಟಾಗಿತ್ತು.

ಚಾಮುಂಡೇಶ್ವರಿ ಕ್ಷೇತ್ರ ವ್ಯಾಪ್ತಿಯ ಹೂಟಗಳ್ಳಿ ಕೆಹೆಚ್‌ಬಿ ಕಾಲೋನಿಯ ರೋಟರಿ ಮಿಡ್‌ಟೌನ್ ಅಕಾಡೆಮಿಯಲ್ಲಿ 44, 45, 46 ಮತ್ತು 47ನೇ ಸಂಖ್ಯೆಯ ಮತಗಟ್ಟೆಗಳ ಪೈಕಿ 46ನೇ ಸಂಖ್ಯೆಯ ಮತಗಟ್ಟೆಯಲ್ಲಿನ ಮತಯಂತ್ರದಲ್ಲಿ ತಾಂತ್ರಿಕ ದೋಷ ಕಾಣಿಸಿಕೊಂಡಿತ್ತು. ಪರಿಣಾಮ ಕೆಲಕಾಲ ಮತದಾನ ಪ್ರಕ್ರಿಯೆಗೆ ತಡೆಯುಂಟಾಗಿತ್ತು. ಕೂಡಲೇ ಎಚ್ಚೆತ್ತ ಅಧಿಕಾರಿಗಳು, ಟೆಕ್ನಿಷಿಯನ್‌ಗಳನ್ನು ಕರೆಸಿ, ದುರಸ್ತಿ ಮಾಡಿಸಿದ ಹಿನ್ನೆಲೆಯಲ್ಲಿ ಬಳಿಕ ಸುಗಮವಾಗಿ ಮತದಾನ ಪ್ರಕ್ರಿಯೆ ನಡೆಯಿತು.

ಈ ಸಂಬಂಧ 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯಿಸಿದ ಚಾಮುಂಡೇಶ್ವರಿ ಕ್ಷೇತ್ರದ ಸಹಾಯಕ ಚುನಾವಣಾಧಿಕಾರಿ ಎಲ್.ಎಂ.ನಂದೀಶ್, ಇಡೀ ಚಾಮುಂಡೇಶ್ವರಿ ಕ್ಷೇತ್ರ ವ್ಯಾಪ್ತಿಯಲ್ಲಿ ಇದೊಂದೇ ತಾಂತ್ರಿಕ ದೋಷ ಉಂಟಾಗಿದ್ದ ಪ್ರಕರಣ. ಕೇವಲ 10 ನಿಮಿಷದಲ್ಲೇ ಅದನ್ನು ಸರಿಪಡಿಸಿ ಮತದಾನ ಪ್ರಕ್ರಿಯೆಗೆ ಅನುವು ಮಾಡಿಕೊಡಲಾಯಿತು. ಹೀಗಾಗಿ ಇದರಿಂದ ಯಾವುದೇ ಗಂಭೀರ ಸಮಸ್ಯೆಗಳು ಉಂಟಾಗಿಲ್ಲ ಎಂದರಲ್ಲದೆ, ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಶೇ.73ರಷ್ಟು ಮತದಾನ ಆಗಿದೆ ಎಂದು ಇದೇ ವೇಳೆ ಅವರು ತಿಳಿಸಿದರು.

ಪೊಲೀಸ್, ಬಿಜೆಪಿ ಕಾರ್ಯಕರ್ತರಿಂದ ಹಲ್ಲೆ ಆರೋಪ ; ಕಾಂಗ್ರೆಸ್ ಕಾರ್ಯಕರ್ತರಿಂದ ರಸ್ತೆ ತಡೆ

ಶಾಸಕ ಕೆ.ಹರೀಶ್ ಗೌಡ ಮಧ್ಯ ಪ್ರವೇಶ ; ವಿವಾದಕ್ಕೆ ತೆರೆ

ಮೈಸೂರು, ಏ.26(ಜಿಎ)–ಚುನಾವಣಾ ಪ್ರಚಾರ ವೇಳೆ ಟೇಬಲ್ ಸ್ಥಳಾಂತರಿಸುವ ವಿಚಾರಕ್ಕೆ ಸಂಬಂಧಿಸಿದಂತೆ ಕಾಂಗ್ರೆಸ್ ಕಾರ್ಯಕರ್ತರ ಮೇಲೆ ಬಿಜೆಪಿ ಕಾರ್ಯಕರ್ತರು ಹಲ್ಲೆ ಮಾಡಿದ್ದಾರೆಂದು ಆರೋಪಿಸಿ ರಸ್ತೆ ತಡೆದು ಪ್ರತಿಭಟನೆ ಮಾಡಿದ ಘಟನೆ ಮೈಸೂರು ಚಾಮರಾಜ ವಿಧಾನಸಭಾ ಕ್ಷೇತ್ರದ ಶಿವಾನಂದ ಶಾಲೆಯ ಮತಗಟ್ಟೆ ಬಳಿ ನಡೆದಿದೆ.



ಮೈಸೂರಿನ ಚಾಮರಾಜ ವಿಧಾನ ಸಭಾ ಕ್ಷೇತ್ರದ ಶಿವಾನಂದ ಶಾಲೆಯ ಮತಗಟ್ಟೆಯಿಂದ ನೂರು ಅಡಿ ದೂರದಲ್ಲಿ ಎರಡು ರಾಜಕೀಯ ಪಕ್ಷಗಳ ಕಾರ್ಯಕರ್ತರಿಗೆ ಸ್ಥಳಾವಕಾಶ ನೀಡಿ, ಕೆಂಪು ಬಾವುಟಗಳನ್ನು ಅಳವಡಿಸಲಾಗಿತ್ತು. ಆದರೆ, ಕಾಂಗ್ರೆಸ್ ಕಾರ್ಯಕರ್ತರು ಟೇಬಲ್‌ಗಳನ್ನು ಮುಂದೆ ಹಾಕಿಕೊಂಡಿದ್ದಾರೆ ಎಂದು ಪೊಲೀಸರಿಗೆ ಬಿಜೆಪಿ ಕಾರ್ಯಕರ್ತರು ದೂರಿದ ತಕ್ಷಣ ಪೊಲೀಸರು ಟೇಬಲ್ ಹಿಂದೆ ಸರಿಸುವಂತೆ ಸೂಚಿಸಿದ್ದಾರೆ.

ನಂತರ ಬಿಜೆಪಿ ಕಾರ್ಯಕರ್ತರ ಟೇಬಲ್‌ಗಳನ್ನು ಹಿಂದೆ ಸರಿಸುವಂತೆ ಕಾಂಗ್ರೆಸ್ ಕಾರ್ಯಕರ್ತರು ಒತ್ತಾಯಿಸಿದಾಗ ಬಿಜೆಪಿಯ ಗಿರಿಗೌಡ ಎಂಬುವರು ಕಾಂಗ್ರೆಸ್‌ನ ಬ್ಲಾಕ್ ಅಧ್ಯಕ್ಷ ಜಗದೀಶ್, ಮಹೇಶ್, ತನುಜಾ ಮಹೇಶ್ ವಿನೋದ್ ಎಂಬುವರ ಮೇಲೆ ಹಲ್ಲೆ ನಡೆಸಿದ್ದಾರೆ ಎಂದು ದೂರಲಾಗಿದೆ. ಈ ಬಗ್ಗೆ ಪೊಲೀಸರು ಕ್ರಮ ಕೈಗೊಳ್ಳದೆ ಸ್ಥಳದಲ್ಲಿದ್ದ ಎಎಸ್‌ಐರೊಬ್ಬರು ಕಾಂಗ್ರೆಸ್ ಕಾರ್ಯಕರ್ತರ ಮೇಲೆಯೇ ಹಲ್ಲೆ ನಡೆಸಿದ್ದಾರೆ ಎಂದು ಆರೋಪಿಸಿ ಪೊಲೀಸ್ ಮತ್ತು ಬಿಜೆಪಿ ಕಾರ್ಯಕರ್ತರ ವಿರುದ್ಧ ರಸ್ತೆ ತಡೆದು ಪ್ರತಿಭಟನೆ ಆರಂಭಿಸಿದರು.

ಈ ವೇಳೆ ಸ್ಥಳಕ್ಕೆ ಚಾಮರಾಜ ಕ್ಷೇತ್ರದ ಶಾಸಕ ಕೆ.ಹರೀಶ್ ಗೌಡ ಭೇಟಿ ನೀಡಿ ಕಾಂಗ್ರೆಸ್ ಕಾರ್ಯಕರ್ತರಿಂದ ಘಟನೆ ಮಾಹಿತಿ ಪಡೆದುಕೊಂಡು, ಹೆಬ್ಬಾಳ್ ಪೊಲೀಸ್ ಠಾಣೆಯ ಇನ್ಸ್‌ಪೆಕ್ಟರ್ ವಿನಯ್ ಅವರಿಗೆ ಹಲ್ಲೆ ಮಾಡಿದವರ ವಿರುದ್ಧ ಸೂಕ್ತ ಕ್ರಮ ವಹಿಸುವಂತೆ ಸೂಚಿಸಿ, ಬಿಜೆಪಿ ಮತ್ತು ಕಾಂಗ್ರೆಸ್ ಮುಖಂಡರಿಗೆ ಸಾಮರಸ್ಯ ಕಾಯ್ದುಕೊಳ್ಳುವಂತೆ ಕಿವಿಮಾತು ಹೇಳಿದರು.

ಮತದಾರರ ಓಲೈಸುವ ಕಸರತ್ತು ತೊರೆದ ಕಾರ್ಯಕರ್ತರು

ಮೈಸೂರು,ಏ.26(ಎಂಟಿವೈ)– ಮೈಸೂರು ಗ್ರಾಮಾಂತರದ ಹಲವೆಡೆ ರಾಜಕೀಯ ಪಕ್ಷಗಳ ಕಾರ್ಯಕರ್ತರಲ್ಲಿ ಅದೇಕೋ ನಿರುತ್ಸಾಹ ಇದ್ದಂತೆ ಭಾಸವಾಯಿತು. ಮತದಾರರನ್ನು ಓಲೈಸುವ ಕಸರತ್ತು ಅವರಲ್ಲಿ ಅಷ್ಟೇನು ಕಂಡು ಬರಲೇ ಇಲ್ಲ.

ಹೌದು, ಮತಗಟ್ಟೆಗಳ ಸಮೀಪ ಉತ್ಸಾಹ ಪ್ರದರ್ಶಿಸಬೇಕಾದ ವಿವಿಧ ರಾಜಕೀಯ ಪಕ್ಷಗಳ ಮುಖಂಡರು, ಕಾರ್ಯಕರ್ತರಲ್ಲಿ ಬಿಸಿಲಿನ ತಾಪಕ್ಕೇನೋ ಉತ್ಸಾಹ ಕಾಣಲಿಲ್ಲ. ಮತಗಟ್ಟೆಗಳ 200 ಮೀಟರ್ ಅಂತರದಲ್ಲಿ ರಾಜಕೀಯ ಪಕ್ಷಗಳ ಕಾರ್ಯಕರ್ತರು ಪ್ರತಿ ಚುನಾವಣೆಯಲ್ಲಿಯೂ ಪೆಂಡಾಲ್ ಹಾಕಿಕೊಂಡು ಕುಳಿತು ಮತದಾರರಿಗೆ ಮತದಾರರ ಪಟ್ಟಿಯಲ್ಲಿನ ಕ್ರಮ ಸಂಖ್ಯೆಯುಳ್ಳ ಚೀಟಿಯನ್ನು ಬರೆದುಕೊಡುವುದು ವಾಡಿಕೆ. ಈ ವೇಳೆ ತಮ್ಮ ಪಕ್ಷದ ಅಭ್ಯರ್ಥಿ ಪರ ಮತ ಯಾಚಿಸುವ ಭರಾಟೆ ಜೋರಾಗಿ ಇರುತ್ತದೆ. ಆದರೆ ಇಂದು ಮೈಸೂರು ಗ್ರಾಮಾಂತರದ ಹಲವೆಡೆ ಅಂತಹ ಭರಾಟೆ ಇರಲಿಲ್ಲ.

ಈ ನಡುವೆ ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಹಲವೆಡೆ ಜೆಡಿಎಸ್ ಕಾರ್ಯಕರ್ತರು ಬಿಜೆಪಿ ಶಲ್ಯದೊಂದಿಗೆ ಉತ್ಸಾಹದಿಂದ ಮತಯಾಚನೆಯಲ್ಲಿ ತೊಡಗಿದ್ದರು. ತಮ್ಮದೇ ಪಕ್ಷದ ಅಭ್ಯರ್ಥಿಯೆಂದು ಭಾವಿಸಿ ಜೆಡಿಎಸ್ ಕಾರ್ಯಕರ್ತರು ಬಿಜೆಪಿ ಅಭ್ಯರ್ಥಿಗೆ ಮತ ಚಲಾಯಿಸುವಂತೆ ಮನವಿ ಮಾಡುತ್ತಿದ್ದರು. ಅಂತೆಯೇ ಮತಗಟ್ಟೆಗಳ ಬಳಿ ಕಾಂಗ್ರೆಸ್ ಮುಖಂಡರು ಹಾಗೂ ಕಾರ್ಯಕರ್ತರು ರಾಜ್ಯ ಸರ್ಕಾರದ ಗ್ಯಾರಂಟಿ ಯೋಜನೆಗಳ ಬಗ್ಗೆ ಪ್ರಸ್ತಾಪಿಸಿ ಮತಯಾಚಿಸುತ್ತಿದ್ದರು. ಅದರಲ್ಲೂ ಮತಚಲಾಯಿಸಲು ಬರುತ್ತಿದ್ದ ಮಹಿಳಾ ಮತದಾರರನ್ನೇ ಗುರಿಯಾಗಿಟ್ಟುಕೊಂಡು ಗ್ಯಾರಂಟಿ ಯೋಜನೆಗಳನ್ನು ಪ್ರಸ್ತಾಪಿಸುತ್ತಿದ್ದರು.

ಬೃಹತ್ ಕುಟುಂಬದ ದಾಖಲೆ ಮತದಾನ



ಬೆಂಗಳೂರು, ಏ.26(ಎಂಕೆ)– ಚಿಕ್ಕಬಳ್ಳಾಪುರ ಲೋಕಸಭಾ ಕ್ಷೇತ್ರದ ಬಾದಾಮ್ ಎಂಬ ಕುಟುಂಬದ 85ಕ್ಕೂ ಹೆಚ್ಚು ಮಂದಿ ಏಕಕಾಲಕ್ಕೆ ಮತದಾನ ಮಾಡುವ ಮೂಲಕ ಎಲ್ಲರ ಗಮನ ಸೆಳೆದಿದ್ದಾರೆ. ಚಿಕ್ಕಬಳ್ಳಾಪುರ ನಗರದ ಜೂನಿಯರ್ ಕಾಲೇಜಿನ ಮತಗಟ್ಟೆಯಲ್ಲಿ ಬಾದಾಮ್ ಕುಟುಂಬದ 85ಕ್ಕೂ ಹೆಚ್ಚು ಸದಸ್ಯರು ಕುಟುಂಬ ಸಮೇತರಾಗಿ ಬಂದು ಒಂದೇ ಬಾರಿಗೆ ಮತ ಚಲಾಯಿಸುವ ಮೂಲಕ ಈವರೆಗೆ 18ಕ್ಕಿಂತ ಹೆಚ್ಚು ಬಾರಿ ಮತದಾನ ಮಾಡಿದ ದೊಡ್ಡ ಕುಟುಂಬವೆಂಬ ಹಿರಿಮೆಗೆ ಪಾತ್ರವಾಗಿದೆ. ತಮ್ಮ ತಮ್ಮ ಕೆಲಸ ಕಾರ್ಯಗಳಲ್ಲಿ ತೊಡಗಿಕೊಂಡಿರುವ ಕುಟುಂಬ ಸದಸ್ಯರು ಮತದಾನದ ದಿನ ಒಂದೆಡೆ ಸೇರುತ್ತಾರೆ. ಮತದಾನಕ್ಕೆ ಗೌರವ ಸೂಚಿಸಲು ಎಲ್ಲರೂ ಒಟ್ಟಿಗೆ ಬಂದು ಹಕ್ಕು ಚಲಾಯಿಸುತ್ತಿದ್ದೇವೆ ಎಂದು ಬಾದಾಮ್ ಕುಟುಂಬದ ಮುಖಂಡರು ಸಂತಸ ವ್ಯಕ್ತಪಡಿಸಿದ್ದಾರೆ.

ಮತಗಟ್ಟೆಯಲ್ಲೇ ಕರ್ತವ್ಯ ನಿರತ ಮಹಿಳಾ ಸಿಬ್ಬಂದಿ ಸಾವು

ಚಿತ್ರದುರ್ಗ: ರಾಜ್ಯದ 14 ಲೋಕಸಭಾ ಕ್ಷೇತ್ರಗಳಿಗೆ ಮೊದಲ ಹಂತದಲ್ಲಿ ಮತದಾನ ಮುಕ್ತಾಯವಾಗಿದೆ. ಅಲ್ಲಲ್ಲಿ ಕೆಲವು ಸಣ್ಣಪುಟ್ಟ ಘಟನೆಗಳನ್ನು ಹೊರತುಪಡಿಸಿದರೆ ಬಹುತೇಕ ಶಾಂತಿಯುತ ಮತದಾನವಾಗಿದೆ.



ಈ ನಡುವೆ ಚಳ್ಳಕೆರೆ ತಾಲೂಕಿನ ಹೊಟ್ಟೆಪ್ಪನಹಳ್ಳಿ ಮತಗಟ್ಟೆಯಲ್ಲಿ ಚುನಾವಣಾ ಕರ್ತವ್ಯದಲ್ಲಿದ್ದ ಮಹಿಳಾ ಸಿಬ್ಬಂದಿ ಲೋ ಬಿಪಿಯಿಂದ ಮೃತಪಟ್ಟಿದ್ದಾರೆ. ಚಳ್ಳಕೆರೆ ಪಟ್ಟಣದ ವಿಠಲ ನಗರದ ಯಶೋಧಮ್ಮ (55) ಮೃತ ಮಹಿಳಾ ಸಿಬ್ಬಂದಿ. ಯಶೋಧಮ್ಮ, ಲೋ ಬಿಪಿಯಿಂದಾಗಿ ಅಸ್ವಸ್ಥಗೊಂಡಿದ್ದರು. ಇವರನ್ನು ಕೂಡಲೇ ಚಳ್ಳಕೆರೆ ಆಸ್ಪತ್ರೆಗೆ ಕರೆದೊಯ್ಯಲಾಗುತ್ತಿತ್ತು, ಆದರೆ ದಾರಿ ಮಧ್ಯದಲ್ಲೇ ಮೃತಪಟ್ಟರು. ಚಳ್ಳಕೆರೆ ಆಸ್ಪತ್ರೆಗೆ ಅಪರ ಜಿಲ್ಲಾಧಿಕಾರಿ ಕುಮಾರಸ್ವಾಮಿ ಭೇಟಿ ನೀಡಿದ್ದಾರೆ. ಚಳ್ಳಕೆರೆ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಪ್ರಕರಣ ನಡೆದಿದೆ.



ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರಕ್ಕೊಳಪಟ್ಟ ಹಂಚ್ಯಾ ಗ್ರಾಮದಲ್ಲಿ ಮತದಾರರು ಉತ್ಸಾಹದಿಂದ ಮತದಾನದಲ್ಲಿ ಭಾಗವಹಿಸಿದ್ದರು.

ಚುನಾವಣಾ ಕರ್ತವ್ಯಕ್ಕೆ ಬಸ್‌ಗಳ ಬಳಕೆ ಹಿನ್ನೆಲೆ ; ಬಹುತೇಕ ಮಾರ್ಗಗಳಿಗೆ ಬಸ್‌ಗಳ ಕೊರತೆ

ಮೈಸೂರು,ಏ.26(ಪಿಎಂ)– ಬಸ್‌ಗಳನ್ನು ಚುನಾವಣಾ ಕರ್ತವ್ಯಕ್ಕೆ ಬಳಸಿಕೊಂಡ ಹಿನ್ನೆಲೆಯಲ್ಲಿ ಮೈಸೂರಿನ ಸಬ್‌ಅರ್ಬನ್ ಬಸ್ ನಿಲ್ದಾಣದಲ್ಲಿ ಶುಕ್ರವಾರ ಬಸ್‌ಗಳ ಕೊರತೆ ಉಂಟಾಯಿತು. ಆದಾಗ್ಯೂ ಮತದಾನ ಕಾರಣ ಪ್ರಯಾಣಿಕರ ಸಂಖ್ಯೆಯೂ ಕಡಿಮೆ ಇದ್ದ ಹಿನ್ನೆಲೆಯಲ್ಲಿ ಅಂತಹ ದಟ್ಟಣೆ ನಿಲ್ದಾಣದಲ್ಲಿ ಕಂಡು ಬರಲಿಲ್ಲ.



ಮೈಸೂರಿನ ಸಬ್‌ಅರ್ಬನ್ ಬಸ್ ನಿಲ್ದಾಣದಲ್ಲಿ ಬಸ್ ಹತ್ತಲು ಪ್ರಯಾಣಿಕರು ಮುಗಿಬಿದ್ದಿರುವುದು.

ಆದರೆ ಆಗಾಗ್ಗೆ ಕೆಲ ಮಾರ್ಗಗಳ ಬಸ್‌ಗಳಿಗೆ ಹತ್ತಲು ಪ್ರಯಾಣಿಕರು ದೌಡಾಯಿಸುತ್ತಿದ್ದ ದೃಶ್ಯ ಸಾಮಾನ್ಯವಾಗಿತ್ತು. ಬೆಳಗ್ಗೆಯಿಂದಲೇ ಪ್ರಯಾಣಿಕರು ಮಾತ್ರವಲ್ಲದೆ, ಬಸ್‌ಗಳೂ ಕಡಿಮೆಯೇ ಇದ್ದವು. ಹೀಗಾಗಿ ಎಂದಿನಂತೆ ನಿಲ್ದಾಣದಲ್ಲಿ ಇರುತ್ತಿದ್ದ ಜನದಟ್ಟಣೆಯಾಗಲೀ, ಬಸ್‌ಗಳ ಓಡಾಟವಾಗಲೀ ಕಂಡು ಬರಲಿಲ್ಲ. ಈ ನಡುವೆ ಬೆಂಗಳೂರಿನಿಂದ ಮೈಸೂರಿಗೆ ಬರುವ ಪ್ರಯಾಣಿಕರ ಸಂಖ್ಯೆ ಬೆಳಗ್ಗೆ ಹೆಚ್ಚಿದ್ದರೆ, ಸಂಜೆ ವೇಳೆಗೆ ಮೈಸೂರಿನಿಂದ ಬೆಂಗಳೂರಿಗೆ ಪ್ರಯಾಣಿಸುವವರ ಸಂಖ್ಯೆ ಸಂಜೆ ಹೆಚ್ಚಿತ್ತು.

ಈ ಪ್ರಯಾಣಿಕರಲ್ಲಿ ಬಹುತೇಕ ಮಂದಿ ಮತದಾನ ಮಾಡುವ ಸಲುವಾಗಿ ಮೈಸೂರಿಗೆ ಆಗಮಿಸಿ, ಬೆಂಗಳೂರಿಗೆ ಮರಳುವವರಾಗಿದ್ದರೆ, ಕೆಲವರು ಆಸ್ಪತ್ರೆಗೆ ಭೇಟಿ ಸೇರಿದಂತೆ ಇನ್ನಿತರ ತುರ್ತು ಕಾರ್ಯ ನಿಮಿತ್ತ ಬೆಂಗಳೂರು–ಮೈಸೂರು ನಡುವೆ ಪ್ರಯಾಣಿಸುವವರಾಗಿದ್ದರು.

ಕಡಿಮೆ ಸಂಖ್ಯೆಯಲ್ಲಿಯಾದರೂ ಬಹುತೇಕ ಎಲ್ಲಾ ಮಾರ್ಗಗಳಿಗೆ ಬಸ್‌ಗಳು ಸಂಚರಿಸಿದವು. ಹೀಗಾಗಿ ಹೆಚ್ಚು ಸಮಯ ಕಾಯಬೇಕಾದ ಅನಿವಾರ್ಯದೊಂದಿಗೆ ದಟ್ಟಣೆಯಲ್ಲಿ ಪ್ರಯಾಣಿಕರು ಪ್ರಯಾಣಿಸಬೇಕಾಯಿತು. ರಾತ್ರಿ 8ರ ವೇಳೆಯಲ್ಲಿ ಕೆಲ ಮಾರ್ಗಗಳಲ್ಲಿ ಸಂಚರಿಸಲು ಹೆಚ್ಚು ಸಂಖ್ಯೆಯಲ್ಲಿ ಪ್ರಯಾಣಿಕರು ನೆರೆದಿದ್ದರು. ಈ ಹಿನ್ನೆಲೆಯಲ್ಲಿ ಇಂತಹ ಮಾರ್ಗಗಳ ಬಸ್‌ಗಳಿಗೆ ಪ್ರಯಾಣಿಕರು ಮುಗಿಬಿದ್ದು ಹತ್ತಿರುವುದು ಕಂಡು ಬಂದಿತು.


ಕಿರಿಯರಿಗೆ ಮಾದರಿಯಾದ ಹಿರಿಯರು



ಮೈಸೂರು, ಏ.26(ಜಿಎ)–ಬಿರು ಬಿಸಿಲನ್ನು ಲೆಕ್ಕಿಸದೇ ವ್ಹೀಲ್ ಚೇರ್ ಸಹಾಯದಿಂದ ಮತದಾನ ಮಾಡಲು ಬಂದ ಹಿರಿಯ ನಾಗರಿಕರು ಅದೆಷ್ಟೋ ಕಿರಿಯರಿಗೆ ಮಾದರಿಯಾದರು.

ಚುನಾವಣಾ ಆಯೋಗವು ಈ ಬಾರಿ ಚುನಾವಣೆಯಲ್ಲಿ 85 ವರ್ಷ ಮೇಲ್ಪಟ್ಟ ಹಿರಿಯರಿಗೆ ಮನೆಯಲ್ಲಿಯೇ ಮತದಾನ ಮಾಡುವ ಅವಕಾಶ ಕಲ್ಪಿಸಿಕೊಟ್ಟಿತು. ಅದರಂತೆ ಈ ಸೌಲಭ್ಯವನ್ನು ಕೆಲವರು ಬಳಸಿಕೊಂಡು ಮನೆಯಲ್ಲಿಯೇ ಮತದಾನ ಮಾಡಿದ್ದಾರೆ. ಆದರೆ, ಕೆಲ ಹಿರಿಯ ನಾಗರಿಕರು ಮತಗಟ್ಟೆಯಲ್ಲಿಯೇ ಮತದಾನ ಮಾಡುವುದಾಗಿ ತಿಳಿಸಿ ಮತಗಟ್ಟೆಯಲ್ಲಿ ಮತದಾನ ಮಾಡಿದ್ದಾರೆ.

ಮೈಸೂರಿನ ಬಹುತೇಕ ಎಲ್ಲಾ ಮತಗಟ್ಟೆಯಲ್ಲಿ ವಿಶೇಷಚೇತನರಿಗೆ ಮತ್ತು ಹಿರಿಯ ನಾಗರಿಕರಿಗೆ ಅನುಕೂಲವಾಗುವಂತೆ ವ್ಹೀಲ್ ಚೇರ್ ವ್ಯವಸ್ಥೆ ಮಾಡಲಾಗಿತ್ತು. ಈ ಸೌಲಭ್ಯವನ್ನು ಬಳಸಿಕೊಂಡ ಅನೇಕ ಹಿರಿಯ ನಾಗರಿಕರು ಮತಗಟ್ಟೆಗೆ ಭೇಟಿ ನೀಡಿ ಮತದಾನ ಮಾಡುವ ಮೂಲಕ ದೇಶವನ್ನು ಸದೃಢವಾಗಿ ಕಟ್ಟಲು ಮತದಾನ ಮುಖ್ಯ ಎಂಬ ಸಂದೇಶ ಸಾರಿದರು.



ಮೈಸೂರಿನ ಜೆ.ಪಿ.ನಗರದ ಜೆಎಸ್‌ಎಸ್ ಶಾಲೆ ಮತಗಟ್ಟೆಯಲ್ಲಿ 104 ವರ್ಷದ ಎಸ್.ದಾಕ್ಷಾಯಣಮ್ಮ ಶಿವಕುಮಾರ್ ಅವರು, ಪುತ್ರ ಎಸ್.ಜ್ಞಾನಶಂಕರ್ ನೆರವಿನೊಂದಿಗೆ ಮತ ಚಲಾಯಿಸಿದರು. ಎಸ್.ಜ್ಞಾನಶಂಕರ್ ಅಗ್ರಹಾರದ ಮಹಾನಂದೀಶ್ವರ ಮುದ್ರಣಾಲಯ ಹಾಗೂ ಸಿಗ್ಮಾ ಆಸ್ಪತ್ರೆಯ ವ್ಯವಸ್ಥಾಪಕ ನಿರ್ದೇಶಕರಾಗಿದ್ದಾರೆ.

6 ಗಂಟೆಯ ನಂತರವೂ 2749 ಮಂದಿ ಮತದಾನ!

ಮೈಸೂರು, ಏ.26(ಎಂಕೆ)– ಮತದಾನ ಮಾಡುವ ಅವಧಿ ಮುಕ್ತಾಯದ ನಂತರವೂ ಮೈಸೂರು ಜಿಲ್ಲೆಯ ಸುಮಾರು 77 ಮತಗಟ್ಟೆಗಳಲ್ಲಿ 2749 ಮಂದಿ ಮತದಾನಕ್ಕೆ ಅವಕಾಶ ಮಾಡಿಕೊಡಲಾಗಿದೆ...!

ಬೆಳಗ್ಗೆ 7 ಗಂಟೆಯಿಂದ ಸಂಜೆ 6 ಗಂಟೆಯವರೆಗೆ ಮತದಾನ ನಡೆದಿದ್ದು, ಸಂಜೆ 6 ಗಂಟೆಯೊಳಗೆ ಮತಗಟ್ಟೆ ಆವರಣದೊಳಗೆ ಪ್ರವೇಶ ಮಾಡಿದ ಮತದಾರರಿಗೆ ಮತದಾನ ಮಾಡಲು ಅವಕಾಶ ಮಾಡಿಕೊಡಲಾಗಿದೆ. ಈ ವೇಳೆ ಶಾಲೆಯ ಗೇಟ್ ಬಂದ್ ಮಾಡಿ ಮತಗಟ್ಟೆ ಆವರಣದಲ್ಲಿದ್ದ ಮತದಾರರಿಗೆ ಟೋಕನ್‌ಗಳನ್ನು ನೀಡಿ ಸರತಿ ಸಾಲಿನಲ್ಲಿ ನಿಲ್ಲಿಸಿ ಮತದಾನ ಮಾಡಿಸಲಾಗಿದೆ ಎಂದು ಜಿಲ್ಲಾ ಚುನಾವಣಾಧಿಕಾರಿಗಳು ಆದ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಮಡಿಕೇರಿ 6(245 ಟೋಕನ್), ವಿರಾಜಪೇಟೆ 9(236), ಚಾಮರಾಜ 4(97), ಚಾಮುಂಡೇಶ್ವರಿ 25(1102), ಹುಣಸೂರು 14(571), ಕೃಷ್ಣರಾಜ 2(3), ನರಸಿಂಹರಾಜ 13(409), ಪಿರಿಯಾಪಟ್ಟಣ 4(86) ಸೇರಿ ಒಟ್ಟು 77 ಮತಗಟ್ಟೆಗಳಲ್ಲಿ 2749 ಮಂದಿಗೆ ಟೋಕನ್‌ಗಳನ್ನು ನೀಡಿ ಮತದಾನ ಮಾಡಿಸಲಾಗಿದೆ ಎಂದು ತಿಳಿಸಿದರು.

ಹಲವೆಡೆ ವಾಪಸ್ ಆದ ಮತದಾರರು: 6 ಗಂಟೆಯ ನಂತರ ಮತಗಟ್ಟೆಗೆ ಬಂದ ಹಲವು ಮತದಾರರು ಮತದಾನ ಮಾಡಲು ಅವಕಾಶ ದೊರೆಯದೆ ಬೇಸರದೊಂದಿಗೆ ವಾಪಸ್ಸಾದ ಘಟನೆಗಳು ಅಲ್ಲಲ್ಲಿ ನಡೆದವು. ರೈಲ್ವೆ ಇಲಾಖೆಯಲ್ಲಿ ಕೆಲಸ ಮಾಡುವ ಮುಸ್ಕಾನ್ ಎಸ್.ಎ ಎಂಬುವರು 6.30ಕ್ಕೆ ಎನ್.ಆರ್.ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಮೈರಾ ಇಂಗ್ಲಿಷ್ ಶಾಲೆ ಮತಗಟ್ಟೆ ಬಂದರು. ಈ ವೇಳೆ ಅವರು ರಾಮಸ್ವಾಮಿ ವೃತ್ತದಿಂದ ಇಲ್ಲಿಗೆ ಬರಲು ಸರಿಯಾಗಿ ಬಸ್‌ಗಳು ಸಿಗಲಿಲ್ಲ ಆದ್ದರಿಂದ ತಡವಾಯಿತು. ಮತದಾನಕ್ಕೆ ಅವಕಾಶ ಮಾಡಿಕೊಡಿ ಎಂದು ಕೇಳಿಕೊಂಡರು. ಮತದಾನದ ಸಮಯ ಮುಕ್ತಾಯಗೊಂಡಿದ್ದರಿಂದ ಚುನಾವಣಾ ಅಧಿಕಾರಿಗಳು ಅವಕಾಶ ನೀಡಲಿಲ್ಲ. ಇದರಿಂದ ಬೇಸರಗೊಂಡ ಅವರು, ಇದೇ ಮೊದಲ ಬಾರಿ ಹೀಗಾಯಿತು ಎಂದು ಅಸಮಾಧಾನ ಹೊರಹಾಕಿದರು.

ಮೈಸೂರು ಮಿತ್ರ



ಸಾಲಿಗ್ರಾಮದಲ್ಲಿ ಮಾಜಿ ಸಚಿವ ಸಾರಾ ಮಹೇಶ್ ದಂಪತಿ ಬೆಂಬಲಿಗರೊಂದಿಗೆ ಮತದಾನ ಮಾಡಿದರು.



ಸಚಿವ ಕೆ. ವೆಂಕಟೇಶ್ ಕುಟುಂಬ ಸದಸ್ಯರೊಂದಿಗೆ ಪಿರಿಯಾಪಟ್ಟಣ ತಾಲೂಕು ಕಿತ್ತೂರಲ್ಲಿ ಮತದಾನ ಮಾಡಿದರು.



ಹುಣಸೂರಿನಲ್ಲಿ ಮಾಜಿ ಶಾಸಕ ಹೆಚ್.ಪಿ. ಮಂಜುನಾಥ್ ಕುಟುಂಬ ಸದಸ್ಯರೊಂದಿಗೆ ಮತದಾನ ಮಾಡಿದರು.

ತಿ.ನರಸೀಪುರದಲ್ಲಿ ಯಶಸ್ವಿ ಶೇ.74.10 ಮತದಾನ

ತಿ.ನರಸೀಪುರ, ಏ.26– ತಾಲೂಕಿನಾದ್ಯಂತ ಯಶಸ್ವಿಯಾಗಿ ಮತದಾನ ಪೂರ್ಣಗೊಂಡಿದ್ದು, ತಾಲೂಕಿನಲ್ಲಿ ಶೇ.74.10ರಷ್ಟು ಮತದಾನವಾಯಿತು.

ತಾಲೂಕಿನ ಎಲ್ಲಾ ಮತಗಟ್ಟೆಗಳಲ್ಲಿ ಬೆಳಗ್ಗೆಯಿಂದಲೇ ಬಿರುಸಿನ ಮತದಾನ ಆರಂಭವಾದರೆ, ಮತ್ತೆ ಕೆಲವು ಮತಗಟ್ಟೆಗಳಲ್ಲಿ ಮಧ್ಯಾಹ್ನದ ನಂತರ ಮತದಾನ ಚುರುಕುಗೊಂಡಿತು. ಮತದಾರರು ಉತ್ಸಾಹದಿಂದ ಮತಗಟ್ಟೆಗೆ ತೆರಳಿ ಸರತಿ ಸಾಲಿನಲ್ಲಿ ನಿಂತು ಮತ ಚಲಾಯಿಸಿದರು.



ಕುಂತನಹಳ್ಳಿಯಲ್ಲಿ ಮತ ಚಲಾಯಿಸಿದ ಚೆಲುವರಾಜು.

ಚುನಾವಣೆಗೆ ಮೊದಲೇ ಮತದಾನಕ್ಕೆ ದಿನಾಂಕ ನಿಗದಿಪಡಿಸಿದ್ದರಿಂದ ವೃದ್ಧರು ಈ ಬಾರಿ ಮತಗಟ್ಟೆಗಳ ಬಳಿ ಸುಳಿಯಲಿಲ್ಲ. ವಿಶೇಷಚೇತನರು, ಮಹಿಳೆಯರು, ಯುವತಿಯರು ಸೇರಿದಂತೆ ಎಲ್ಲಾ ವರ್ಗದ ಮತದಾರರು ಮತದಾನ ಮಾಡಲು ಆಗಮಿಸುತ್ತಿದ್ದ ದೃಶ್ಯ ಸಾಮಾನ್ಯವಾಗಿತ್ತು.



ಸರತಿ ಸಾಲಿನಲ್ಲಿ ನಿಂತಿರುವ ಮತದಾರರು.

ಬೆಳಗ್ಗೆ ಬಿರುಸುಗೊಂಡ ಮತದಾನ ಸೂರ್ಯ ನೆತ್ತಿಗೇರುತ್ತಿದ್ದಂತೆ ಮಂದಗತಿ ಪಡೆದುಕೊಂಡಿತು. ನಂತರ ಮತ್ತೆ ಸೂರ್ಯನ ತಾಪ ಕಡಿಮೆಯಾಗುತ್ತಿದ್ದಂತೆ ಮನೆಗಳಿಂದ ಗುಂಪು ಗುಂಪಾಗಿ ಹೊರಬಂದ ಮತದಾರರು ಕುಟುಂಬ ಸಮೇತ ತಮ್ಮ ಹಕ್ಕು ಚಲಾಯಿಸಿದರು. ಮಧ್ಯಾಹ್ನ 2 ಗಂಟೆ ವೇಳೆಗೆ ಶೇ.40ರಷ್ಟು ಮತದಾನವಾಗಿತ್ತು. ವಿಧಾನಸಭೆಗೆ ಮತ ಚಲಾಯಿಸಲು ತೋರುವ ಆಸಕ್ತಿಯನ್ನು ಲೋಕಸಭೆಗೆ ತೋರಿಸುವುದಿಲ್ಲ ಎಂಬ ನಂಬಿಕೆಯನ್ನು ಹುಸಿಗೊಳಿಸಿದ ಮತದಾರರು ನಿರೀಕ್ಷೆಗೂ ಮೀರಿ ಮತದಾನ ಮಾಡಲು ಮತಗಟ್ಟೆಗೆ ಆಗಮಿಸಿದರು.



ತುಂಬಲದಲ್ಲಿ ಮಾಜಿ ಶಾಸಕ ಅಶ್ವಿನ್‌ಕುಮಾರ್ ಮತ ಚಲಾಯಿಸಿದರು.

ತಿ.ನರಸೀಪುರ ಕ್ಷೇತ್ರ ವ್ಯಾಪ್ತಿಯ ಮೂಗೂರು, ಸೋಸಲೆ, ಕಸಬಾ, ಬನ್ನೂರು ಹಾಗೂ ತಲಕಾಡು ಹೋಬಳಿಯಲ್ಲಿ ಜನತೆ ಮತದಾನಕ್ಕೆ ಹೆಚ್ಚಿನ ಆಸಕ್ತಿ ತೋರಿಸಿದ್ದು ಕಂಡುಬಂತು. ಮತಗಟ್ಟೆ ಸಮೀಪ ಆಯಾಯ ಪಕ್ಷಗಳ ಕಾರ್ಯಕರ್ತರು ತಮ್ಮ ಅಭ್ಯರ್ಥಿಗಳ ಪರ ಮತ ಯಾಚಿಸುತ್ತಿದ್ದ ದೃಶ್ಯ ಸಾಮಾನ್ಯವಾಗಿತ್ತು.

ತಾಲೂಕಿನ ಕಗ್ಗಲೀಪುರ, ಕೇತುಪುರ, ನಿಲಸೋಗೆ, ಮೂಗೂರು, ಆಲಗೂಡು, ಹೆಳವರಹುಂಡಿ, ಹುಣಸೂರು, ಚನ್ನಬಸವಯ್ಯನಹುಂಡಿ, ಚೌಹಳ್ಳಿ, ಮಾದಾಪುರ, ಹೆಮ್ಮಿಗೆ ಸೇರಿದಂತೆ ವಿವಿಧ ಗ್ರಾಮಗಳಲ್ಲಿ ಮತಗಟ್ಟೆಯ ಬಳಿ ಮತ ಚಲಾಯಿಸಲು ಉದ್ದದ ಸಾಲು ಕಂಡು ಬಂತು.

ಮಾಜಿ ಶಾಸಕ ಎಂ.ಅಶ್ವಿನ್ ಕುಮಾರ್ ತಮ್ಮ ಪತ್ನಿಯೊಂದಿಗೆ ತಾಲೂಕಿನ ತುಂಬಲ ಗ್ರಾಮದಲ್ಲಿ ಮತ ಚಲಾಯಿಸಿದರೆ, ತಾಪಂ ಮಾಜಿ ಅಧ್ಯಕ್ಷ ಹಾಗೂ ಮೈಮುಲ್ ನಿರ್ದೇಶಕ ಆರ್.ಚೆಲುವರಾಜ್ ಕುಂತನಹಳ್ಳಿ ಮತಗಟ್ಟೆ ಸಂಖ್ಯೆ 71 ರಲ್ಲಿ ತಮ್ಮ ಹಕ್ಕು ಚಲಾಯಿಸಿದರು.

ಪುರಸಭೆ ಮಾಜಿ ಅಧ್ಯಕ್ಷರಾದ ಎನ್ ಸೋಮು, ಟಿ.ಎಂ.ನಂಜುಂಡಸ್ವಾಮಿ ಹಾಗೂ ಸದಸ್ಯ ಪ್ರಕಾಶ್ ವಿದ್ಯೋದಯ ಕಾಲೇಜಿನಲ್ಲಿ ಮತ ಚಲಾಯಿಸಿದರು.

ಕೆ.ಆರ್.ನಗರ ಕ್ಷೇತ್ರದಲ್ಲಿ ಶೇ.80ರಷ್ಟು ಮತದಾನ

ಕೆ.ಆರ್.ನಗರ, ಏ.26– ಮಂಡ್ಯ ಲೋಕಸಭಾ ಕ್ಷೇತ್ರ ವ್ಯಾಪ್ತಿಯ ಕೆ.ಆರ್.ನಗರ ವಿಧಾನಸಭಾ ಕ್ಷೇತ್ರದಲ್ಲಿ ಶೇ.80ರಷ್ಟು ಮತದಾನ ನಡೆದಿದೆ.

ಬೆಳಗ್ಗೆ 7 ಗಂಟೆಗೆ ಆರಂಭವಾದ ಮತದಾನ ಮಂದಗತಿಯಲ್ಲಿ ಸಾಗಿತ್ತಾದರೂ ಮಧ್ಯಾಹ್ನದ ನಂತರ ಚುರುಕುಗೊಂಡಿತು. ಶಾಸಕ ಡಿ.ರವಿಶಂಕರ್ ಕೆಸ್ತೂರುಕೊಪ್ಪಲು ಮತಗಟ್ಟೆಯಲ್ಲಿ, ಮಾಜಿ ಸಚಿವ ಸಾ.ರಾ. ಮಹೇಶ್ ದಂಪತಿ ಸಾಲಿಗ್ರಾಮ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಮತಗಟ್ಟೆಯಲ್ಲಿ, ಜಿಲ್ಲಾ ಗ್ರಾಮಾಂತರ ಬಿಜೆಪಿ ಉಪಾಧ್ಯಕ್ಷ ಹೊಸಹಳ್ಳಿ ವೆಂಕಟೇಶ್ ಸ್ವಗ್ರಾಮದ ಕಿರಿಯ ಪ್ರಾಥಮಿಕ ಶಾಲೆ ಮತಗಟ್ಟೆಯಲ್ಲಿ, ಜಿಪಂ ಮಾಜಿ ಅಧ್ಯಕ್ಷ ಸಿ.ಜೆ.ದ್ವಾರಕೀಶ್ ಚಿಕ್ಕಕೊಪ್ಪಲು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಮತಗಟ್ಟೆಯಲ್ಲಿ ತಮ್ಮ ಹಕ್ಕು ಚಲಾಯಿಸಿದರು.

ಭೇರ್ಯ, ಬೀಚನಹಳ್ಳಿಕೊಪ್ಪಲು, ತಿಪ್ಪೂರು, ಹೆಬ್ಬಾಳು, ಮಾರಗೌಡನಹಳ್ಳಿ ಮತಗಟ್ಟೆಯಲ್ಲಿ ತಾಂತ್ರಿಕ ತೊಂದರೆ ಉಂಟಾದ ಹಿನ್ನೆಲೆಯಲ್ಲಿ ಮತಯಂತ್ರಗಳನ್ನು ಬದಲಾಯಿಸಿ ಮತದಾನಕ್ಕೆ ಕ್ರಮ ಕೈಗೊಳ್ಳಲಾಯಿತು.



ಕೆಸ್ತೂರುಕೊಪ್ಪಲು ಗ್ರಾಮದಲ್ಲಿ ಪತ್ನಿಯೊಂದಿಗೆ ಶಾಸಕ ಡಿ. ರವಿಶಂಕರ್ ಮತದಾನ ಮಾಡಿದರು.

ಶಾಸಕ ಡಿ.ರವಿಶಂಕರ್ ಮತ್ತು ಮಾಜಿ ಸಚಿವ ಸಾ.ರಾ.ಮಹೇಶ್ ಬೆಳಗ್ಗೆಯಿಂದ ಸಂಜೆವರೆಗೆ ಕ್ಷೇತ್ರದ ವಿವಿಧ ಗ್ರಾಮಗಳ ಮತಗಟ್ಟೆಗಳಿಗೆ ತೆರಳಿ ತಮ್ಮ ಪಕ್ಷದ ಮುಖಂಡರು ಮತ್ತು ಕಾರ್ಯಕರ್ತರನ್ನು ಭೇಟಿ ಮಾಡಿ, ಅವರನ್ನು ಹುರಿದುಂಬಿಸಿದರಲ್ಲದೆ ಅಂತಿಮ ಕ್ಷಣದಲ್ಲಿ ಮತದಾರರ ಮೇಲೆ ಪ್ರಭಾವ ಬೀರಿದರು.

ಬೆಳಗ್ಗೆ 10 ಗಂಟೆ ನಂತರ ಬಿಸಿಲು ಹೆಚ್ಚಾಗಿದ್ದರಿಂದ ಸಂಜೆ 4ರ ನಂತರ ಬಹುತೇಕ ಮತದಾರರು ಮತಗಟ್ಟೆಯತ್ತ ಬಂದು ತಮ್ಮ ಹಕ್ಕು ಚಲಾಯಿಸಿದರು. ಸಂಜೆ 7ಗಂಟೆಯವರೆಗೂ ಕೆಲವು ಮತಗಟ್ಟೆಗಳಲ್ಲಿ ಮತದಾನ ಮುಂದುವರೆದಿತ್ತು. 6 ಗಂಟೆಯೊಳಗೆ ಮತಕೇಂದ್ರದ ಒಳಗೆ ಆಗಮಿಸಿದ ಮತದಾರರಿಗೆ ಸರಾಗವಾಗಿ ತಮ್ಮ ಹಕ್ಕು ಚಲಾಯಿಸಲು ಮತಗಟ್ಟೆ ಸಿಬ್ಬಂದಿ ಅನುಕೂಲ ಮಾಡಿಕೊಟ್ಟರು.

ಮತದಾನದ ಬಳಿಕ ತೊರೆಗೆ ಬಿದ್ದು ವ್ಯಕ್ತಿ ಸಾವು

ಕೆ.ಆರ್.ನಗರ: ಮತದಾನದ ಬಳಿಕ ವ್ಯಕ್ತಿಯೊಬ್ಬರು ತೊರೆಗೆ ಬಿದ್ದು ಸಾವನ್ನಪ್ಪಿರುವ ಘಟನೆ ಸಾಲಿಗ್ರಾಮ ತಾಲೂಕಿನ ಕುಪ್ಪೆ ಗ್ರಾಮದಲ್ಲಿ ನಡೆದಿದೆ.

ಗ್ರಾಮದ ನಿವಾಸಿ ನಾಗರಾಜು(55) ಎಂಬಾತ ಬೆಳಗ್ಗೆ 9 ಗಂಟೆಗೆ ಗ್ರಾಮದ ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆ ಮತಗಟ್ಟೆಯಲ್ಲಿ ತಮ್ಮ ಹಕ್ಕು ಚಲಾಯಿಸಿ ಅನಂತರ ಹೊಸೂರು ಗ್ರಾಮಕ್ಕೆ ತೆರಳುತ್ತಿದ್ದ ಸಂದರ್ಭ ತೊರೆ ಬಳಿಯ ಕಿರು ಸೇತುವೆ ಮೇಲೆ ಕುಳಿತಿದ್ದ ವೇಳೆ ಆಯತಪ್ಪಿ ಬಿದ್ದು ಮೃತಪಟ್ಟಿದ್ದಾರೆ.

ಹುಣಸೂರಲ್ಲೂ ಶೇ.77.89ರಷ್ಟು ಶಾಂತಿಯುತ ಮತದಾನ







ಪ್ರಥಮ ಬಾರಿಗೆ ಮತದಾನ ಮಾಡಿದ ಯುವ ಮತದಾರರು.



ಹನಗೋಡು ಹೋಬಳಿ ಬಲ್ಲೇನಹಳ್ಳಿ ಗ್ರಾಮದಲ್ಲಿ 86 ವರ್ಷದ ಸಾವಿತ್ರಮ್ಮ, ಮೊಮ್ಮಗನ ಸಹಾಯದಿಂದ ಮತದಾನ ಮಾಡಿದರು.

ಹುಣಸೂರು, ಏ.26– ಇಂದು ನಡೆದ ಚುನಾವಣೆಯಲ್ಲಿ ತಾಲೂಕಿನಲ್ಲಿ ಶೇ.77.89 ರಷ್ಟು ಶಾಂತಿಯುತ ಮತದಾನವಾಗಿದೆ. ಮುಂಜಾನೆ 7 ಗಂಟೆಗೆ ಆರಂಭವಾದ ಮತದಾನ ಪ್ರಕ್ರಿಯೆ 10.30ರ ವೇಳೆಗೆ ಶೇ.25 ರಷ್ಟು, ಮಧ್ಯಾಹ್ನ 12ರ ವೇಳೆಗೆ ಶೇ.45ರಷ್ಟು ಮತದಾನವಾಗಿತ್ತು. ಅಂತಿಮವಾಗಿ ಸಂಜೆ 6 ಗಂಟೆ ವೇಳೆಗೆ ತಾಲೂಕಿನಲ್ಲಿ 77.89ರಷ್ಟು ಮತದಾನವಾಗಿದೆ. ಇನ್ನು ತಾಲೂಕಿನಾದ್ಯಂತ ಮತಗಟ್ಟೆಗೆ ಬರುವ ಮತದಾರರಿಗೆ ಪಕ್ಷಗಳ ಕಾರ್ಯಕರ್ತರು ತಮ್ಮ ಅಭ್ಯರ್ಥಿಗಳ ಪರ ಮತ ಚಲಾಯಿಸುವಂತೆ ಅಂತಿಮ ಕ್ಷಣದ ಪ್ರಯತ್ನ ಕಂಡುಬಂತು.

ಸಖಿ ಮತಗಟ್ಟೆಗಳಲ್ಲಿ ಮಹಿಳಾ ಸ್ತ್ರೀ ಶಕ್ತಿ ಸಂಘದ ಸದಸ್ಯರು ಮತದಾರರಲ್ಲಿ ಮತದಾನದ ಬಗ್ಗೆ ಜಾಗೃತಿ ಮೂಡಿಸಿದರು. ಕೆಲವು ಮತಗಟ್ಟೆಗಳಲ್ಲಿ ಮತದಾನ ನಿಧಾನಗತಿಯಲ್ಲಿ ಸಾಗಿದರೇ, ಇನ್ನು ಕೆಲವು ಮತಗಟ್ಟೆಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಮತದಾರರು ಜಮಾಯಿಸಿದ್ದರಿಂದ ಸಿಬ್ಬಂದಿಗಳು ಸಹನೆ ಕಳೆದುಕೊಂಡಿದ್ದು ಕಂಡುಬಂತು. ನಗರದ ಸದಾಶಿವನಕೊಪ್ಪಲಿನ ಮತಗಟ್ಟೆಯಲ್ಲಿ ವೃದ್ಧೆಯೊಬ್ಬರು ನನಗೆ ಸರಿಯಾಗಿ ಕಣ್ಣು ಕಾಣುವುದಿಲ್ಲ. ಎಲ್ಲಿ ಸಹಿ ಮಾಡಬೇಕು ಎಂದಾಗ ಅಧಿಕಾರಿಗಳು ಸಹಿ ಮಾಡಿದರೆ ಮಾಡಿ ಇಲ್ಲ ಅಂದರೆ ಹೊರ ಹೋಗಿ ಎಂದು ಅಸಹನೆಯಿಂದ ನಡೆದುಕೊಂಡ ಬಗ್ಗೆ ವರದಿಯಾಗಿದೆ.

ತಾಲೂಕಿನ ಹೆಗ್ಗಂದೂರಿನ ಮತಗಟ್ಟೆ 206ರಲ್ಲಿ ಮತದಾನ ನಿಧಾನವಾಗಿ ನೂರಾರು ಸಂಖ್ಯೆಯಲ್ಲಿ ಮತದಾರರು ಜಮಾಯಿಸಿದ್ದರು. ಈ ವಿಷಯ ತಿಳಿದ ಚುನಾವಣಾಧಿಕಾರಿ ಹೆಚ್ಚುವರಿ ಸಿಬ್ಬಂದಿ ಕರೆಸಿ ಮತದಾನ ಪ್ರಕ್ರಿಯೆಗೆ ಚುರುಕು ಮುಟ್ಟಿಸಿದರು.

ಎನ್‌ಆರ್‌ಎಲ್‌ಎಂ ಸಂಜೀವಿನಿ ಒಕ್ಕೂಟದ ಮಹಿಳೆಯರು ಸಖಿ ಮತಗಟ್ಟೆಗಳಲ್ಲಿ ಮತ ಚಲಾಯಿಸಿದರು. ಜೊತೆಗೆ ಎಲ್ಲರೂ ಮತ ಚಲಾಯಿಸುವಂತೆ ಸಂದೇಶ ಸಾರಿದರು. ಇದೇ ವೇಳೆ ಹಿರಿಯ ನಾಗರಿಕರು, ವಿಶೇಷಚೇತನರು, ಹಳೇಬೀಡು ಗ್ರಾಪಂನಲ್ಲಿ ಮೊದಲ ಬಾರಿಗೆ ಯುವ ಜನರು ಮತ ಚಲಾಯಿಸಿ ಸಂತಸಪಟ್ಟರು.

ನಂ.ಗೂಡಲ್ಲಿ ಶೇ.68ರಷ್ಟು ಶಾಂತಿಯುತ ಮತದಾನ



ನಂಜನಗೂಡು, ಏ.26– ಚಾಮರಾಜನಗರ ಲೋಕಸಭಾ ಕ್ಷೇತ್ರ ವ್ಯಾಪ್ತಿಯ ನಂಜನಗೂಡು ವಿಧಾನಸಭಾ ಕ್ಷೇತ್ರದಲ್ಲಿ ಶುಕ್ರವಾರ ನಡೆದ ಲೋಕಸಭಾ ಚುನಾವಣೆ ಶಾಂತಿಯುತವಾಗಿ ನಡೆಯಿತು.

ಕ್ಷೇತ್ರದ ಒಟ್ಟು 246 ಮತಗಟ್ಟೆಗಳಲ್ಲಿ ನಿಗದಿತ ಸಮಯಕ್ಕೆ ಮತದಾನ ಆರಂಭಗೊಂಡರೂ, ಬೆಳಗ್ಗೆ 11 ಗಂಟೆ ವೇಳೆಗೆ ಶೇ.18.5 ರಷ್ಟು ಮತದಾನವಾಗಿತ್ತು. ಮಧ್ಯಾಹ್ನ 3 ಗಂಟೆಗೆ ಶೇ.31 ಹಾಗೂ 4 ಗಂಟೆ ವೇಳೆಗೆ ಶೇ.51ರಷ್ಟು ಮತದಾನವಾಗಿತ್ತು. ಅಂತಿಮವಾಗಿ ತಾಲೂಕಿನಲ್ಲಿ 68 ರಷ್ಟು ಮತದಾನವಾಗಿದೆ. ತಾಲೂಕಿನ ಮಾದಾಪುರ ಹಾಗೂ ನಗರದ ನಾಗಮ್ಮ ಶಾಲೆ ಮತಗಟ್ಟೆಯಲ್ಲಿ ಇವಿಎಂ ಯಂತ್ರ ಕೈಕೊಟ್ಟಿದ್ದರಿಂದ 15 ನಿಮಿಷ ತಡವಾಗಿ ಮತದಾನ ಆರಂಭವಾಗಿದ್ದು ಬಿಟ್ಟರೆ ಉಳಿದೆಲ್ಲ ಮತಗಟ್ಟೆಗಳಲ್ಲಿ ಮತದಾನ ಸುಸೂತ್ರವಾಗಿ ನೆರವೇರಿತು.

ಕ್ಷೇತ್ರದಲ್ಲಿ ಮೈತ್ರಿ ಅಭ್ಯರ್ಥಿ ಹಾಗೂ ಕಾಂಗ್ರೆಸ್ ಅಭ್ಯರ್ಥಿ ನಡುವೆ ನೇರ ಹಣಾಹಣಿ ಏರ್ಪಟ್ಟಿದ್ದರಿಂದ ಪ್ರತಿ ಬೂತ್‌ನಲ್ಲೂ ಕಾರ್ಯಕರ್ತರು ತಮ್ಮ ಪಕ್ಷದ ಪರ ಮತ ನೀಡುವಂತೆ ಮತದಾರರ ಮನವೊಲಿಸುವ ದೃಶ್ಯ ಸಾಮಾನ್ಯವಾಗಿತ್ತು. ಮತದಾರರು ಹುಮ್ಮಸ್ಸಿನಿಂದ ಮತದಾನದಲ್ಲಿ ಭಾಗವಹಿಸುವ ಮೂಲಕ ತಮ್ಮ ಹಕ್ಕು ಚಲಾಯಿಸಿ ಹರ್ಷ ವ್ಯಕ್ತಪಡಿಸಿದರು.

ಸುತ್ತೂರು ಶ್ರೀಗಳು, ಮಹದೇವಪ್ಪ ಮತದಾನ: ತಾಲೂಕಿನ ಸುತ್ತೂರು ಗ್ರಾಮದ ಮತಗಟ್ಟೆಯಲ್ಲಿ ಜಗದ್ಗುರು ಶ್ರೀಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಮತದಾನ ಮಾಡಿದರು. ಈ ಹಿಂದೆ ಮೈಸೂರಿನಲ್ಲಿ ಮತದಾನ ಮಾಡುತ್ತಿದ್ದ ಶ್ರೀಗಳು ಕಳೆದ ವಿಧಾನಸಭಾ ಚುನಾವಣೆಯಿಂದ ಸುತ್ತೂರು ಕ್ಷೇತ್ರದ ಮತಗಟ್ಟೆಯಲ್ಲೇ ಮತದಾನ ಮಾಡುತ್ತಿದ್ದು, ಇದೀಗ ಲೋಕಸಭಾ ಚುನಾವಣೆಯಲ್ಲೂ ಸುತ್ತೂರಿನಲ್ಲೇ ಮತದಾನ ಮಾಡಿ ಗಮನ ಸೆಳೆದರು. ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಹಾಗೂ ಚಾಮರಾಜನಗರ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಸುನೀಲ್ ಬೋಸ್ ಅವರು ತಮ್ಮ ಹುಟ್ಟೂರು ತಾಲೂಕಿನ ಹದಿನಾರು ಗ್ರಾಮದಲ್ಲಿ ಕುಟುಂಬ ಸಮೇತರಾಗಿ ಆಗಮಿಸಿ, ಹಕ್ಕು ಚಲಾಯಿಸಿದರು.

ಶಾಸಕ ದರ್ಶನ್ ಸ್ವಗ್ರಾಮ ದೊಡ್ಡಕವಲಂದೆ ಸಮೀಪವಿರುವ ಚಾಮರಾಜನಗರ ತಾಲೂಕಿನ ಹೆಗ್ಗವಾಡಿ ಗ್ರಾಮದಲ್ಲಿ ಸಹೋದರ ಧೀರೇನ್ ಜೊತೆ ಆಗಮಿಸಿ ಮತ ಚಲಾಯಿಸಿದರು. ಮಾಜಿ ಶಾಸಕ ಎನ್.ಕೇಶವಮೂರ್ತಿ ಕಳಲೆ ಗ್ರಾಮದಲ್ಲಿ ಹಾಗೂ ಕಾಂಪೋಸ್ಟ್ ಅಭಿವೃದ್ಧಿ ನಿಗಮದ ಮಾಜಿ ಅಧ್ಯಕ್ಷ ಎಸ್.ಮಹದೇವಯ್ಯ ನಗರದಲ್ಲಿ ಮತದಾನ ಮಾಡಿದರು.

ತಾಲೂಕಿನ ಕಸುವಿನಹಳ್ಳಿ, ಮಲ್ಲುಂಡಿ, ಶಿರಮಳ್ಳಿ, ಕುರಹಟ್ಟಿ, ನೇರಳೆ, ಕುಪ್ಪರವಳ್ಳಿ ಹಾಗೂ ಹೊಸಕೋಟೆ ಗ್ರಾಮಗಳಲ್ಲಿ ತೆರೆಯಲಾಗಿದ್ದ ಸಖಿ ಮತಗಟ್ಟೆಗಳಲ್ಲಿ ಹೊಸದಾಗಿ ಮತದಾನ ಮಾಡಿದ ಯುವಕ ಯುವತಿಯರು ಸೆಲ್ಫಿ ತೆಗೆದುಕೊಂಡು ಹರ್ಷ ವ್ಯಕ್ತಪಡಿಸಿದರು. ಹುಲ್ಲಹಳ್ಳಿ ಹಾಗೂ ತಾಂಡವಪುರ ಗ್ರಾಮಗಳಲ್ಲಿ ಸಾಂಪ್ರದಾಯಿಕ ಮತಗಟ್ಟೆಗಳನ್ನು ವಿಶೇಷವಾಗಿ ಸಿಂಗರಿಸಲಾಗಿತ್ತು.

ವಿ.ಶ್ರೀನಿವಾಸಪ್ರಸಾದ್ ಆರೋಗ್ಯವಾಗಿದ್ದಾರೆ

ನಂಜನಗೂಡು, ಏ.26– ಸಂಸದ ವಿ.ಶ್ರೀನಿವಾಸಪ್ರಸಾದ್ ಆರೋಗ್ಯ ಸ್ಥಿರವಾಗಿದೆ. ಅವರ ಆರೋಗ್ಯದ ಬಗ್ಗೆ ವದಂತಿ, ಊಹಾಪೋಹಗಳಿಗೆ ಅಭಿಮಾನಿಗಳು ಹಾಗೂ ಕಾರ್ಯಕರ್ತರು ಕಿವಿಕೊಡಬೇಡಿ ಎಂದು ಮಾಜಿ ಶಾಸಕ ಬಿ.ಹರ್ಷವರ್ಧನ್ ಮನವಿ ಮಾಡಿದರು.



ಶುಕ್ರವಾರ ನಗರದ ಬಿಜೆಪಿ ಕಚೇರಿಗೆ ಆಗಮಿಸಿ ಕ್ಷೇತ್ರದಲ್ಲಿ ಪಕ್ಷದ ಅಭ್ಯರ್ಥಿ ಎಸ್.ಬಾಲರಾಜು ಪರ ಆಗಿರುವ ಮತದಾನದ ಕುರಿತು ಕಾರ್ಯಕರ್ತರ ಬಳಿ ಮಾಹಿತಿ ಪಡೆದುಕೊಂಡ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದರು. ಸಂಸದ ವಿ.ಶ್ರೀನಿವಾಸಪ್ರಸಾದ್ ಬೆಂಗಳೂರಿನ ಮಣಿಪಾಲ್ ಆಸ್ಪತ್ರೆಯಲ್ಲಿ ಚಿಕಿತ್ಸೆಗೆ ದಾಖಲಾಗಿದ್ದಾರೆ. ಆದರೆ ಯಾರೋ ಕಿಡಿಗೇಡಿಗಳು ಅವರ ಆರೋಗ್ಯದ ಬಗ್ಗೆ ಊಹಾಪೋಹ ಸೃಷ್ಟಿಸಿ ವದಂತಿ ಹರಡಿದ್ದು ಇದರಿಂದ ಕಾರ್ಯಕರ್ತರು ಹಾಗೂ ಅಭಿಮಾನಿಗಳು ಆತಂಕಕ್ಕೀಡಾಗಿದ್ದರು. ವದಂತಿ ಎಲ್ಲೆಡೆ ಹರಡುತ್ತಿದ್ದಂತೆ ಸಾಮಾಜಿಕ ಜಾಲತಾಣದಲ್ಲಿ ಖುದ್ದು ನಾನೇ ಅವರ ಆರೋಗ್ಯ ಸ್ಥಿರವಾಗಿರುವುದಾಗಿ ಸ್ಪಷ್ಟನೆ ನೀಡಿದ್ದೇನೆ. ವಿ.ಶ್ರೀನಿವಾಸ ಪ್ರಸಾದ್ ಅವರಿಗೆ ಶ್ರೀಕಂಠೇಶ್ವರಸ್ವಾಮಿ ಅನುಗ್ರಹವಿದ್ದು, ಶೀಘ್ರ ಗುಣಮುಖರಾಗಿ ಮನೆಗೆ ಮರಳಲಿದ್ದಾರೆ ಎಂಬ ವಿಶ್ವಾಸವಿದೆ ಎಂದರು.

ಹೆಚ್.ಡಿ.ಕೋಟೆಯಲ್ಲಿ ಶೇ.76.93ರಷ್ಟು ಮತದಾನ

ಹೆಚ್.ಡಿ.ಕೋಟೆ, ಏ.26– ಹೆಚ್.ಡಿ.ಕೋಟೆ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಸರಗೂರು ಮತ್ತು ಹೆಚ್.ಡಿ.ಕೋಟೆಯ 282 ಮತಗಟ್ಟೆಯಲ್ಲಿ ಶುಕ್ರವಾರ ನಡೆದ ಲೋಕಸಭಾ ಚುನಾವಣೆಯಲ್ಲಿ ಯಾವುದೇ ಅಹಿತಕರ ಘಟನೆ ನಡೆಯದೆ ಶಾಂತಿಯುತವಾಗಿ ಶೇ.76.93ರಷ್ಟು ಮತದಾನ ನಡೆಯಿತು.

ಎರಡೂ ತಾಲೂಕಿನಲ್ಲಿ ಬೆಳಗ್ಗೆಯಿಂದ ಮಧ್ಯಾಹ್ನ 2 ಗಂಟೆವರೆಗೆ ಬಿಸಿಲಿನ ತಾಪ ಜಾಸ್ತಿ ಇದ್ದ ಕಾರಣ ಕೇವಲ 34.69% ರಷ್ಟು ಮಾತ್ರ ಮತದಾನ ನಡೆದು ಜನರು ಮನೆಯಿಂದ ಹೊರಬರದೆ ನಿರುತ್ಸಾಹ ತೋರಿದ್ದು ಕಂಡುಬಂತು. 3 ಗಂಟೆಗೆ 59.99% ರಷ್ಟು ಏರಿಕೆಯಾಯಿತು. 5 ಗಂಟೆಗೆ 63.40% ರಷ್ಟು ಏರಿಕೆ ಆಗಿ ಅಂತಿಮವಾಗಿ ಶೇ.76.93 ರಷ್ಟು ಮತದಾನವಾಯಿತು. ತಾಲೂಕಿನ ಉಯ್ಯಂಬಳ್ಳಿಯಲ್ಲಿ ಅತೀ ಹೆಚ್ಚು 90.84 ರಷ್ಟು ಮತದಾನವಾದರೇ, ಕೋಟೆ ಪಟ್ಟಣದಲ್ಲಿ ಅತೀ ಕಡಿಮೆ 54.32ರಷ್ಟು ಮತದಾನವಾಯಿತು.



ಶಾಸಕ ಅನಿಲ್‌ಕುಮಾರ್ ಹುಣಸೂರು ತಾಲೂಕಿನ ಹೊಸರಾಮನಹಳ್ಳಿಯಲ್ಲಿ ಮತದಾನ ಮಾಡಿದರು.



ಮಾಜಿ ಶಾಸಕ ಬೀಚನಹಳ್ಳಿ ಚಿಕ್ಕಣ್ಣ ಬೀಚನಹಳ್ಳಿ ಗ್ರಾಮದಲ್ಲಿ ಮತದಾನ ಮಾಡಿದರು.

ತಾಲೂಕಿನ 56 ಸೂಕ್ಷ್ಮ ಮತಗಟ್ಟೆಗಳಿಗೆ ಮುಂಜಾಗ್ರತಾ ಕ್ರಮವಾಗಿ ವೆಬ್ ಕಾಸ್ಟಿಂಗ್ ಕ್ಯಾಮರಾಗಳನ್ನು ಅಳವಡಿಸಲಾಗಿತ್ತು. ಮತದಾನ ಕೇಂದ್ರದ ಒಳಗೆ ಮೊಬೈಲ್ ಕೊಂಡೊಯ್ಯಲು ಅವಕಾಶ ಇರಲಿಲ್ಲ. ಮೊಬೈಲ್ ತಂದಿದ್ದ ಮತದಾರರನ್ನು ಪೊಲೀಸರು ಒಳಗೆ ಕೊಂಡೊಯ್ಯಲು ಅವಕಾಶ ಇಲ್ಲ ಎಂದು ಹೇಳಿ ಹೊರಗಡೆ ಕಳುಹಿಸುತ್ತಿದ್ದ ದೃಶ್ಯ ಕಂಡುಬಂತು.



ಹೆಚ್.ಡಿ.ಕೋಟೆಯ ಬಾಲಕಿಯರ ಹಿರಿಯ ಪ್ರಾಥಮಿಕ ಶಾಲಾವರಣದಲ್ಲಿ ಮಹಿಳೆಯರು ಮತದಾನ ಮಾಡಲು ಸರತಿ ಸಾಲಿನಲ್ಲಿ ನಿಂತಿರುವುದು.

ಶಾಸಕ ಅನಿಲ್ ಮತ್ತು ಕಾಂಗ್ರೆಸ್ ಅಭ್ಯರ್ಥಿ ಸುನೀಲ್ ಬೋಸ್ ಕ್ಷೇತ್ರದ ವಿವಿಧ ಮತಗಟ್ಟೆಗೆ ತೆರಳಿ ಕಾರ್ಯಕರ್ತರನ್ನು ಭೇಟಿ ಮಾಡಿ ವೀಕ್ಷಣೆ ಮಾಡಿದರು. ಇನ್ನು ಶಾಸಕ ಅನಿಲ್ ಹುಣಸೂರು ತಾಲೂಕಿನ ಹೊಸರಾಮನಹಳ್ಳಿಯಲ್ಲಿ ಮತದಾನ ಮಾಡಿದರು. ಮಾಜಿ ಸಚಿವ ಕೋಟೆ ಎಂ.ಶಿವಣ್ಣ ಪಟ್ಟಣದ ಕೃಷ್ಣಪುರ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಮತದಾನ ಮಾಡಿದರು. ಮಾಜಿ ಶಾಸಕ ಬೀಚನಹಳ್ಳಿ ಚಿಕ್ಕಣ್ಣ ಬೀಚನಹಳ್ಳಿ ಗ್ರಾಮದಲ್ಲಿ ಮತದಾನ ಮಾಡಿದರು.

282 ಮತಗಟ್ಟೆಗಳಿಗೆ 28 ಸೆಕ್ಟರ್ ಅಧಿಕಾರಿಗಳನ್ನು ನಿಯೋಜಿಸಿ ಪ್ರತಿ ಸೆಕ್ಟರ್ ಅಧಿಕಾರಿಗೆ 10 ಮತಗಟ್ಟೆಗಳ ಜವಾಬ್ದಾರಿ ನೀಡಲಾಗಿತ್ತು. ಅವರು ಪ್ರತಿ ಮತಗಟ್ಟೆಗೆ ಭೇಟಿ ನೀಡಿ ಪರಿಶೀಲನೆ ನಡೆಸುತ್ತಿದ್ದರು. ಮುಂಜಾಗ್ರತಾ ಕ್ರಮವಾಗಿ ಓರ್ವ ಡಿವೈಎಸ್ಪಿ, 5 ಇನ್ಸ್‌ಪೆಕ್ಟರ್, 14 ಸಬ್ ಇನ್ಸ್‌ಪೆಕ್ಟರ್, 16 ಎಎಸ್‌ಐ, 242 ಪೊಲೀಸ್ ಮುಖ್ಯಪೇದೆಗಳು, 16 ಪ್ಯಾರ ಮಿಲಿಟರಿ ಹಾಗೂ ಗೃಹರಕ್ಷಕ ದಳದ 201 ಒಟ್ಟು 1400 ಸಿಬ್ಬಂದಿಗಳನ್ನು ನೇಮಿಸಿ ಸೂಕ್ತ ಬಂದೋಬಸ್ತ್ ಕೈಗೊಳ್ಳಲಾಗಿತ್ತು. ತಾಲೂಕಿನ ಜಿನ್ನಹಳ್ಳಿ ಗ್ರಾಮದಲ್ಲಿ 110 ವಯಸ್ಸಿನ ಅಜ್ಜಿ ಗಾಲಿಚಕ್ರದ ಮೂಲಕ ಮತ ಕೇಂದ್ರಕ್ಕೆ ಬಂದು ಮತ ಚಲಾಯಿಸಿದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ರತ್ನಂ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ರತ್ನಂ (ತ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ರುಸ್ಲಾನ್ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ರತ್ನಂ (ತ)	4 ಪ್ರದರ್ಶನಗಳು
ಗಾಯಿತ್ರಿ	
ಯುವ (ಕ)	4 ಪ್ರದರ್ಶನಗಳು
ರಾಜಕಮಲ್	
ರೂಬನ್ (ತ)	4 ಪ್ರದರ್ಶನಗಳು
ಸಂಗಂ	
ಅವತಾರ ಪುರುಷ 2 (ಕ)	4 ಪ್ರದರ್ಶನಗಳು
ಲಿಡೋ	
ಮ್ಯಾಟ್ನಿ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ರತ್ನಂ (ತ)	4 ಪ್ರದರ್ಶನಗಳು
ಪ್ರಭಾ	
ಇತ್ಯಾದಿ (ಕ)	2 ಪ್ರದರ್ಶನಗಳು
ಆತ್ಮ (ಕ)	2 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1 ಕುಂಗ್ ಫೂ ಪಾಂಡ 4 (3ಡಿ) (ಇಂ): ಬೆ.11.30ಕ್ಕೆ, ಗಾಡ್ಜಿಲ್ಲಾ ಎಕ್ಸ್ ಕಾಂಗ್ ದಿ ನ್ಯೂ ಎಂಪೈರ್ (3ಡಿ) (ಇಂ): ಮ.1.30ಕ್ಕೆ, ಗಿಲ್ಲಿ (ತ): ಮ.3.50ಕ್ಕೆ, ಆವೇಶಂ (ಮ): ರಾ.7ಕ್ಕೆ, ರಾ.10.05ಕ್ಕೆ.

ಸ್ಕ್ರೀನ್ 2 ಇತ್ಯಾದಿ (ಕ): ಬೆ.11.30ಕ್ಕೆ, O2 (ಕ): ಮ.1.55ಕ್ಕೆ, ದಾಸವರೇಣ್ಯ ಶ್ರೀ ವಿಜಯದಾಸರು (ಕ): ಸಂ.4.15ಕ್ಕೆ, ವರ್ಷನ್‌ಗಲ್ಕು ಶೇಷಂ (ಮ): ರಾ.7ಕ್ಕೆ, ಪವಿ ಕೇರ್‌ಟೇಕರ್ (ಮ): ರಾ.10.10ಕ್ಕೆ.

ಸ್ಕ್ರೀನ್ 3 ರತ್ನಂ (ತ): ಮ.1.10ಕ್ಕೆ, ಸಂ.4.10ಕ್ಕೆ, ಯುವ (ಕ): ರಾ.7.10ಕ್ಕೆ, ರುಸ್ಲಾನ್ (ಹಿಂ): ರಾ.10.10ಕ್ಕೆ.

ಸ್ಕ್ರೀನ್ 4 ಮಂಜುಮ್ಮೆಲ್ ಬಾಯ್ಸ್ (ಮ): ಮ.1.45ಕ್ಕೆ, ಘೋಸ್ಟ್‌ಬಸ್ಟರ್ಸ್ ಫ್ರೋಜನ್ ಎಂಪೈರ್ (ಇಂ): ಸಂ.4.50ಕ್ಕೆ, ರಾ.7.20ಕ್ಕೆ, ರಾ.9.50ಕ್ಕೆ.

ಐನಾಕ್ಸ್ ಮೂವೀಸ್

ದೂ : 2533444 / 2433456

ಸ್ಕ್ರೀನ್ 1 ಗಾಡ್ಜಿಲ್ಲಾ ಎಕ್ಸ್ ಕಾಂಗ್ ದಿ ನ್ಯೂ ಎಂಪೈರ್ (3ಡಿ) (ಇಂ): ಬೆ.10.25ಕ್ಕೆ, ರಾ.10ಕ್ಕೆ, ಯುವ (ಕ): ಮ.1ಕ್ಕೆ, ಸಂ.4.15ಕ್ಕೆ, O2 (ಕ): ರಾ.7.30ಕ್ಕೆ.

ಸ್ಕ್ರೀನ್ 2 ಬಡೇ ಮಿಯಾನ್ ಚೋಟೆ ಮಿಯಾನ್ (ಹಿಂ): ಬೆ.10.45ಕ್ಕೆ, ಸಂ.5.55ಕ್ಕೆ, ಮೈದಾನ್ (ಹಿಂ): ಮ.2.10ಕ್ಕೆ, ಮಂಜುಮ್ಮೆಲ್ ಬಾಯ್ಸ್ (ಮ): ರಾ.9.20ಕ್ಕೆ.

ಸ್ಕ್ರೀನ್ 3 ಯುವ (ಕ): ಬೆ.10.10ಕ್ಕೆ, O2 (ಕ): ಮ.1.25ಕ್ಕೆ, ಪಾರಿಜಾತ ಪರ್ವಂ (ತೆ): ಮ.3.55ಕ್ಕೆ, ಆವೇಶಂ (ಮ): ಸಂ.6.50ಕ್ಕೆ, ಬಡೇ ಮಿಯಾನ್ ಚೋಟೆ ಮಿಯಾನ್ (ಹಿಂ): ರಾ.10.10ಕ್ಕೆ.

ಸ್ಕ್ರೀನ್ 4 ಮೈದಾನ್ (ಹಿಂ): ಬೆ.11.25ಕ್ಕೆ, ರಾ.9.50ಕ್ಕೆ, ವರ್ಷನ್‌ಗಲ್ಕು ಶೇಷಂ (ಮ): ಮ.3.10ಕ್ಕೆ, ಯುವ (ಕ): ಸಂ.6.35ಕ್ಕೆ.

ಮೈಸೂರು ವಿಷನ್ ಸಿನಿಮಾ

ದೂ : 0821–2973519

ಸ್ಕ್ರೀನ್ 1 ಪಾರ್ಕಿಂಗ್ (ಕ): ಬೆ.10.35ಕ್ಕೆ, ಸಪ್ತಸಾಗರದಾಚೆ ಎಲ್ಲೋ 2 (ಕ): ಮ.1.10ಕ್ಕೆ, ಬ್ಯಾಡ್ ಮ್ಯಾನರ್ಸ್ (ಕ): ಸಂ.4ಕ್ಕೆ, ಅರ್ಧಂಬರ್ಧ ಪ್ರೇಮಕಥೆ (ತ): ಸಂ.6.35ಕ್ಕೆ, ಅನ್ನಪೂರ್ಣಿ (ತ): ರಾ.9.15ಕ್ಕೆ.

ಸ್ಕ್ರೀನ್ 2 ಅನಿಮಲ್ (ಹಿಂ): ಬೆ.10ಕ್ಕೆ, ಸಂ.6ಕ್ಕೆ, ರಾ.9.45ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ಮ.1.45ಕ್ಕೆ.

ಸ್ಕ್ರೀನ್ 3 ಸ್ಯಾಮ್ ಬಹದ್ದೂರ್ (ಹಿಂ): ಬೆ.10.10ಕ್ಕೆ, ಸಂ.4.50ಕ್ಕೆ, ಅನಿಲಲ್ (ಹಿಂ): ಮ.1.05ಕ್ಕೆ, ರಾ.7.45ಕ್ಕೆ.

ಸ್ಕ್ರೀನ್ 4 ಸಪ್ತ ಸಾಗರದಾಚೆ ಎಲ್ಲೋ 2 (ತೆ): ಬೆ.10.45ಕ್ಕೆ, ಅನಿಮಲ್ (ಹಿಂ): ಮ.2.40ಕ್ಕೆ, ನೆಪೋಲಿಯನ್ (ಇಂ): ಸಂ.6.25ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ರಾ.9.35ಕ್ಕೆ.

ಪಿವಿಆರ್ ಸಿನಿಮಾಸ್

ನೆಕ್ಸಸ್ ಸೆಂಟರ್‌ಸಿಟಿ ಮಾಲ್,
2ನೇ ಮಹಡಿ, ಮೊ.ನಂ: 8951357139

ದಿ ಫ್ಯಾಮಿಲಿ ಸ್ಟಾರ್ (ತೆ): ಬೆ.9.10ಕ್ಕೆ, ಮ.12.30ಕ್ಕೆ, ಮ.3.50ಕ್ಕೆ, ರಾ.7.10ಕ್ಕೆ, ರಾ.10.30ಕ್ಕೆ, ಯುವ (ಕ): ಬೆ.10.20ಕ್ಕೆ, ಬೆ.11.35ಕ್ಕೆ, ಮ.12.45ಕ್ಕೆ, ಮ.3.20ಕ್ಕೆ, ಸಂ.5.45ಕ್ಕೆ, ಸಂ.6.45ಕ್ಕೆ, ರಾ.10ಕ್ಕೆ, ಗಾಡ್ಜಿಲ್ಲಾ ಎಕ್ಸ್ ಕಾಂಗ್ ದಿ ನ್ಯೂ ಎಂಪೈರ್ (3ಡಿ) (ಇಂ): ಬೆ.10.45ಕ್ಕೆ, ಮ.1.25ಕ್ಕೆ, ಸಂ.6.50ಕ್ಕೆ, ರಾ.9.30ಕ್ಕೆ, ಅವತಾರ ಪುರುಷ 2 (ಕ): ಮ.12.40ಕ್ಕೆ, ಸಂ.6.35ಕ್ಕೆ, ಮ್ಯಾಟ್ನಿ (ಕ): ಮ.1.35ಕ್ಕೆ, ಭರ್ಜರಿ ಗಂಡು (ಕ): ಮ.2.50ಕ್ಕೆ, ದಿ ಫಸ್ಟ್ ಓಮೆನ್ (ಇಂ): ಸಂ.4ಕ್ಕೆ, ರಾ.9ಕ್ಕೆ, ಕ್ರೂವ್ (ಹಿಂ): ಸಂ.4.05ಕ್ಕೆ, ರಾ.9.15ಕ್ಕೆ, ಮಂಜುಮ್ಮೆಲ್ ಬಾಯ್ಸ್ (ಮ): ಸಂ.4.30ಕ್ಕೆ, ಮಾರಿಗೋಲ್ಡ್ (ಕ): ರಾ.7.25ಕ್ಕೆ, ಆಡುಜೀವಿತಂ (ಮ): ರಾ.10.15ಕ್ಕೆ.

ಗರುಡ ಮಾಲ್,

1ನೇ ಮಹಡಿ, ಮೊ.ನಂ: 9901373210

ಯುವ (ಕ): ಬೆ.9.30ಕ್ಕೆ, ಮ.12.25ಕ್ಕೆ, ಮ.3.40ಕ್ಕೆ, ಸಂ.6.30ಕ್ಕೆ, ರಾ.10.30ಕ್ಕೆ, ದಿ ಫ್ಯಾಮಿಲಿ ಸ್ಟಾರ್ (ತೆ): ಬೆ.9.50ಕ್ಕೆ, ಮ.12ಕ್ಕೆ, ಮ.3.20ಕ್ಕೆ, ಸಂ.6.40ಕ್ಕೆ, ರಾ.10ಕ್ಕೆ, ಗಾಡ್ಜಿಲ್ಲಾ ಎಕ್ಸ್ ಕಾಂಗ್ ದಿ ನ್ಯೂ ಎಂಪೈರ್ (3ಡಿ) (ಇಂ): ಮ.1.10ಕ್ಕೆ, ಮ.3.50ಕ್ಕೆ, ರಾ.9.45ಕ್ಕೆ, ಅವತಾರ ಪುರುಷ 2 (ಕ): ಮ.2ಕ್ಕೆ, ರಾ.7.35ಕ್ಕೆ, ಮ್ಯಾಟ್ನಿ (ಕ): ಸಂ.4.40ಕ್ಕೆ, ಆಡುಜೀವಿತಂ (ಮ): ಸಂ.6.55ಕ್ಕೆ, ರಾ.10.15ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಬೈಕ್ ಡಿಕ್ಕಿ: ಪಾದಚಾರಿ, ಸವಾರ ಸ್ಥಳದಲ್ಲೇ ಸಾವು

ನಂಜನಗೂಡು, ಏ.26– ಮತ ಚಲಾಯಿಸಿ ರಸ್ತೆ ದಾಟುತ್ತಿದ್ದ ವ್ಯಕ್ತಿಗೆ ಬೈಕ್ ಡಿಕ್ಕಿ ಹೊಡೆದ ಪರಿಣಾಮ ಬೈಕ್ ಸವಾರ ಹಾಗೂ ಪಾದಚಾರಿ ಸ್ಥಳದಲ್ಲೇ ಸಾವನ್ನಪ್ಪಿ, ಹಿಂಬದಿ ಸವಾರ ಗಂಭೀರವಾಗಿ ಗಾಯಗೊಂಡಿರುವ ಘಟನೆ ತಾಲೂಕಿನ ತಾಂಡವಪುರ ಬಳಿ ಶುಕ್ರವಾರ ನಡೆದಿದೆ.

ತಾಂಡವಪುರದ ನಿವಾಸಿ ಬಿ.ಶಿವಣ್ಣ (40) ಹಾಗೂ ಚಾಮರಾಜನಗರದ ಗಾಳಿಪುರ ಗ್ರಾಮದ ಮಿಥುನ್(19) ಸಾವನ್ನಪ್ಪಿದವರು. ಹಿಂಬದಿ ಸವಾರ ಚಾಮರಾಜನಗರದ ಭೋಗಪುರ ಗ್ರಾಮದ ಅನಿಲ್ ಪಾಟೀಲ್ (19) ಗಂಭೀರವಾಗಿ ಗಾಯಗೊಂಡು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಟಿವಿಎಸ್ ಕಾರ್ಖಾನೆ ನೌಕರ ಮಿಥುನ್ ಕೆಲಸ ಮುಗಿಸಿಕೊಂಡು ತನ್ನ ಸ್ನೇಹಿತ ಅನಿಲ್ ಪಾಟೀಲ್ ಜೊತೆಗೂಡಿ ಬೈಕ್‌ನಲ್ಲಿ ಚಾಮರಾಜನಗರಕ್ಕೆ ತೆರಳುತ್ತಿದ್ದ ವೇಳೆ ತಾಲೂಕಿನ ತಾಂಡವಪುರ ಬಳಿ ಮೈಸೂರು–ನಂಜನಗೂಡು ಚತುಷ್ಪಥ ರಸ್ತೆಯಲ್ಲಿ ಮತ ಚಲಾಯಿಸಿ ರಸ್ತೆ ದಾಟುತ್ತಿದ್ದ ಬಿ.ಶಿವಣ್ಣ ಅವರಿಗೆ ಅತಿ ವೇಗವಾಗಿ ಬಂದು ಡಿಕ್ಕಿ ಹೊಡೆದ ಪರಿಣಾಮ ಶಿವಣ್ಣ, ಮಿಥುನ್ ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ. ಹಿಂಬದಿ ಸವಾರ ಅನಿಲ್ ಪಾಟೀಲ್ ಗಾಯಗೊಂಡು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾನೆ ಎಂದು ಸಂಚಾರಿ ಪೊಲೀಸರು ತಿಳಿಸಿದ್ದಾರೆ.

ಸ್ಥಳಕ್ಕೆ ಸಂಚಾರಿ ಪೊಲೀಸ್ ಠಾಣೆ ಎಸ್‌ಐ ಸಿದ್ದರಾಜು, ಸಿಬ್ಬಂದಿಗಳಾದ ಅನಂತು, ಕೇಶವ್ ಭೇಟಿ ನೀಡಿ ಶವಗಳನ್ನು ಆಸ್ಪತ್ರೆಗೆ ಸಾಗಿಸಿ ಗಾಯಾಳುವನ್ನು ಆಸ್ಪತ್ರೆಗೆ ಸೇರಿಸಲು ನೆರವಾದರು. ಈ ಸಂಬಂಧ ನಂಜನಗೂಡು ಸಂಚಾರಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಶಶಿ ನಿಧನ



ಪಿರಿಯಾಪಟ್ಟಣ, ಏ.26– ತಾಲೂಕಿನ ವೀರಶೈವ ಲಿಂಗಾಯತ ಮುಖಂಡ ಹಾಗೂ ನಿವೃತ್ತ ಶಿಕ್ಷಕ ಶಿವಸ್ವಾಮಿ ಅವರ ಪತ್ನಿ ಎಸ್.ಎಸ್.ಶಶಿ (75) ಶುಕ್ರವಾರ ನಿಧನರಾದರು. ಮೃತರ ಅಂತ್ಯಕ್ರಿಯೆ ಶನಿವಾರ ಬೆಳಗ್ಗೆ 11 ಗಂಟೆಗೆ ಸ್ವಗ್ರಾಮ ಚಿಕ್ಕ ಬ್ಯಾಲಾಳು ಗ್ರಾಮದಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.



ವೃದ್ಧರು, ಶತಾಯುಷಿಗಳ ಮತದಾನ ಉತ್ಸಾಹ; ವೋಟ್ ಫಾರ್ ಸಿದ್ದು; ಗ್ಯಾರಂಟಿ ಕೊಟ್ಟವ್ರೆ ವೋಟ್ ಹಾಕಿ; ಕೆಲವೆಡೆ ಮದ್ಯದ ಘಮಲು

ಮೈಸೂರು, ಏ.26(ಬಿಎಲ್‌ಯು)– ಉತ್ಸಾಹದಿಂದ ಮತ ಚಲಾಯಿಸಿದ ವೃದ್ಧರು, ಶತಾಯುಷಿಗಳು, ಮೊದಲ ಬಾರಿಗೆ ಮತ ಚಲಾಯಿಸಿ ಸಂತಸ ಪಟ್ಟ ಯುವ ಮತದಾರರು, ಮದ್ಯ ನಿಷೇಧವಿದ್ದರೂ ಕೆಲವೆಡೆ ಮದ್ಯದ ಘಮಲು, ಕೆಲ ತೋಟಗಳಲ್ಲಿ ಎಣ್ಣೆ ಪಾರ್ಟಿ, ವೋಟ್ ಫಾರ್ ಸಿದ್ದು ಬಾಸ್, ಗ್ಯಾರಂಟಿ ಕೊಟ್ಟವ್ರೆ ವೋಟ್ ಹಾಕಿ, ಬಸ್ ನಿಲ್ದಾಣಗಳಲ್ಲಿ ಪ್ರಯಾಣಿಕರ ಸಂಖ್ಯೆ ಕ್ಷೀಣ, ವ್ಯಾಪಾರ ವಹಿವಾಟು ಇಲ್ಲದೆ ಅಂಗಡಿಗಳು ಬಂದ್, ಚುನಾವಣಾ ಚೆಕ್‌ಪೋಸ್ಟ್‌ನಲ್ಲಿ ತಪಾಸಣೆಗೆ ನಿರಾಸಕ್ತಿ. ಇವು ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಮತದಾನ ದಿನ ಕಂಡು ಬಂದ ಪ್ರಸಂಗಗಳು.

ಮತದಾನ ಮಾಡಲು ಸರ್ಕಾರಿ ಕಚೇರಿಗಳಿಗೆ, ಖಾಸಗಿ ಕಂಪನಿಗಳಿಗೆ ರಜೆ ನೀಡಲಾಗಿತ್ತು. ಎರಡು ತಿಂಗಳಿನಿಂದ ಪರಿಣಾಮಕಾರಿ ಜಾಗೃತಿ, ಬೀದಿ ನಾಟಕ, ಪೋಸ್ಟರ್‌ಗಳ ಮೂಲಕ ಮಾಹಿತಿ ನೀಡಿ, ಕಡ್ಡಾಯ ಮತದಾನಕ್ಕೆ ಉತ್ತೇಜಿಸಲಾಗಿದೆ. ಪರಿಣಾಮ ಈ ಬಾರಿ ಶೇಕಡ 85 ರಷ್ಟು ಮತದಾನದ ನಿರೀಕ್ಷೆಯಲ್ಲಿದ್ದೇವೆ ಎಂದು ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ವಿಶ್ವಾಸ ವ್ಯಕ್ತಪಡಿಸಿದ್ದರು.

ಹಿರಿಯರ ಉತ್ಸಾಹ: ಬಹಳಷ್ಟು ಕಡೆ ಮತದಾನಕ್ಕೆ ನಿರುತ್ಸಾಹ ಕಂಡು ಬಂದಿತು. ಆದರೆ ಯುವ ಮತದಾರರನ್ನು ನಾಚಿಸುವಂತೆ ವೃದ್ಧರು ಹಾಗೂ ಶತಾಯುಷಿಗಳು ಉತ್ಸಾಹದಿಂದ ಹಕ್ಕು ಚಲಾಯಿಸಿದರು. ಶ್ರೀಕಾಂತ ಶಾಲೆ ಯಲ್ಲಿ ಮತದಾನ ಮಾಡಿದ 83 ವರ್ಷದ ಅಶೋಕ್ ಮಂಜಲಿ ಅವರು ಮಾತನಾಡಿ, ನಾನು 1962ನೇ ಇಸವಿಯಿಂದ ಪ್ರತಿ ಚುನಾವಣೆಯಲ್ಲೂ ಕಡ್ಡಾಯವಾಗಿ ಮತದಾನ ಮಾಡಿದ್ದೇನೆ. ನಾನು ಮುಂಬೈನಲ್ಲಿದ್ದಾಗಲೂ ಮತದಾನ ಮಾಡಿದ್ದೇನೆ. ಈಗ ಮೈಸೂರಿನಲ್ಲಿ ವಾಸವಿದ್ದು, ವಯೋಸಹಜ ಸಮಸ್ಯೆಗಳನ್ನು ಲೆಕ್ಕಿಸದೆ ವ್ಹೀಲ್‌ಚೇರ್‌ನಲ್ಲಿ ಬಂದು ಮತದಾನ ಮಾಡಿದ್ದೇನೆ ಎಂದರು.

ಅಗ್ರಹಾರದ 90 ವರ್ಷದ ಲಕ್ಷ್ಮಮ್ಮ, ಆಟೋ ಮಾಡಿಕೊಂಡು ಬಂದು ಶ್ರೀಕಾಂತ ಶಾಲೆಯಲ್ಲಿ ಮತದಾನ ಮಾಡಿದರು. ಈ ವೇಳೆ ನಡೆಯಲು ಸಾಧ್ಯವಿಲ್ಲದ ನಮ್ಮಂತಹ ವೃದ್ಧರು ಮತದಾನ ಮಾಡುತ್ತಿದ್ದೇವೆ. ಈಗಿನ ಯುವಕ, ಯುವತಿಯರು ಏಕೆ ಮತದಾನ ಮಾಡುತ್ತಿಲ್ಲ ಎಂದು ಪ್ರಶ್ನಿಸಿದರು.

ಮೊದಲ ಬಾರಿ ಮತ: ಕೆಲವು ಯುವ ಮತದಾರರು ಬೆಳಗ್ಗೆ 7 ಗಂಟೆಗೆ ಬಂದು ಸರದಿಯಲ್ಲಿ ನಿಂತು ಮತ ಚಲಾಯಿಸಿದರು. ಮೊದಲ ಬಾರಿ ಮತ ಚಲಾಯಿಸಿದ ಸಹೋದರಿಯರಾದ ಹಂಸಿನಿ ಹಾಗೂ ಹಿಮಾನಿ, ಮೊದಲ ಬಾರಿಗೆ ಮತ ಚಲಾಯಿಸುತ್ತಿರುವುದು ತುಂಬಾ ಖುಷಿ ತಂದಿದೆ. ಮತದಾನ ನಮ್ಮ ಹಕ್ಕು, ಎಲ್ಲರೂ ಕಡ್ಡಾಯವಾಗಿ ಮತದಾನ ಮಾಡಬೇಕು. ಆಗ ಮಾತ್ರ ಜನಪ್ರತಿನಿಧಿ ತನ್ನ ಜವಾಬ್ದಾರಿ ನಿರ್ವಹಿಸಲಿಲ್ಲವೆಂದರೆ ಪ್ರಶ್ನೆ ಮಾಡಬಹುದು. ಮತ ಚಲಾಯಿಸದೇ ಜನಪ್ರತಿನಿಧಿ ಹಾಗೂ ಸರ್ಕಾರವನ್ನು ಟೀಕೆ ಮಾಡುವುದು ಸರಿಯಲ್ಲ ಎಂದು ಅಭಿಪ್ರಾಯಪಟ್ಟರು.



ಮದ್ಯದ ಘಮಲು: ಲೋಕಸಭಾ ಚುನಾವಣೆಯ ಹಿನ್ನೆಲೆ ಮೊನ್ನೆಯಿಂದಲೇ ಮದ್ಯ ಮಾರಾಟ ನಿಷೇಧಿಸಲಾಗಿದ್ದು, ಎಲ್ಲಾ ಮದ್ಯದಂಗಡಿಗಳನ್ನು ಬಂದ್ ಮಾಡಲಾಗಿದೆ. ಆದರೆ ಗ್ರಾಮೀಣ ಪ್ರದೇಶದ ಕೆಲವು ಮತಗಟ್ಟೆಗಳಲ್ಲಿ ಮದ್ಯದ ಘಮಲು ಮೂಗಿಗೆ ಬಡಿಯುತ್ತಿತ್ತು. ಕೆಲವರು ಚುನಾವಣೆ ನೆಪದಲ್ಲಿ ತೋಟಗಳಲ್ಲಿ ಎಣ್ಣೆ ಪಾರ್ಟಿ ಮಾಡಿದರು.

ಪಟಾಕಿ ಸಿಡಿಸಿ ಸಿಎಂಗೆ ಸ್ವಾಗತ: ಮುಖ್ಯಮಂತ್ರಿ ಸಿದ್ದರಾಮಯ್ಯ ಮತ ಚಲಾಯಿಸಲು ತಮ್ಮ ಹುಟ್ಟೂರು ಸಿದ್ದರಾಮನಹುಂಡಿ ಗ್ರಾಮಕ್ಕೆ ಆಗಮಿಸಿದಾಗ ಅವರ ಅಭಿಮಾನಿಗಳು ಪಟಾಕಿ ಸಿಡಿಸಿ ಸ್ವಾಗತಿಸಿದರು. ಈ ವೇಳೆ 'ವೋಟ್ ಫಾರ್ ಸಿದ್ದು ಬಾಸ್' ಘೋಷಣೆ ಮುಗಿಲು ಮುಟ್ಟಿತ್ತು.

ಗ್ಯಾರಂಟಿ ಸ್ಮರಣೆ: ಬಹಳಷ್ಟು ಮತಗಟ್ಟೆಗಳಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಪುರುಷರಿಗಿಂತ ಮಹಿಳಾ ಮತದಾರರ ಮನವೊಲಿಸುವ ಪ್ರಯತ್ನ ಮಾಡುತ್ತಿದ್ದರು. ಕಾಂಗ್ರೆಸ್ ಸರ್ಕಾರ ಬಸ್ ಫ್ರೀ ಮಾಡಿದೆ, ಅಕ್ಕಿ ಫ್ರೀ ಕೊಡ್ತಿದೆ, ತಿಂಗಳಿಗೆ ಎರಡು ಸಾವಿರ ಕೊಡ್ತಿದೆ, ನಿಮ್ಮ ನಿರುದ್ಯೋಗಿ ಮಕ್ಕಳಿಗೆ ಭತ್ಯೆ ನೀಡುತ್ತಿದೆ. ಇಷ್ಟೆಲ್ಲಾ ಗ್ಯಾರಂಟಿ ಕೊಟ್ಟಿರುವ ನಮ್ಮ ಕಾಂಗ್ರೆಸ್‌ಗೆ ವೋಟ್ ಹಾಕಿ ಎಂದು ಮನವಿ ಮಾಡುತ್ತಿದ್ದರು.



ಸಂಚಾರ ವಿರಳ: ಮತದಾನದ ಹಿನ್ನೆಲೆ ಸಬರ್ಬನ್ ಹಾಗೂ ನಗರ ಬಸ್ ನಿಲ್ದಾಣಗಳಲ್ಲಿ ಪ್ರಯಾಣಿಕರ ಸಂಖ್ಯೆ ವಿರಳವಾಗಿತ್ತು. ಖಾಸಗಿ ವಾಹನಗಳ ಓಡಾಟವೂ ಕಡಿಮೆ ಇದ್ದ ಕಾರಣ ರಸ್ತೆಗಳು ಬಿಕೋ ಎನ್ನುತ್ತಿದ್ದವು. ವ್ಯಾಪಾರ ವಹಿವಾಟು ಇಲ್ಲದೆ ಹಲವೆಡೆ ಅಂಗಡಿಗಳನ್ನೇ ಬಂದ್ ಮಾಡಿದ್ದರು. ಕಳೆದ ಒಂದೂವರೆ ತಿಂಗಳಿನಿಂದ ಚುನಾವಣಾ ಚೆಕ್‌ಪೋಸ್ಟ್‌ಗಳಲ್ಲಿ ಪ್ರತಿಯೊಂದು ವಾಹನಗಳನ್ನು ಶೋಧಿಸಲಾಗುತ್ತಿತ್ತು. ಆದರೆ ಮತದಾನ ಆರಂಭವಾದ ಬಳಿಕ ತಪಾಸಣೆಗೆ ಸಿಬ್ಬಂದಿ ನಿರಾಸಕ್ತಿ ತೋರಿದರು. ಇದೆಲ್ಲದರ ನಡುವೆ ಯಾವುದೇ ಗಲಾಟೆ–ಗದ್ದಲವಿಲ್ಲದೆ ಶಾಂತಿಯುತವಾಗಿ ಮತದಾನ ನೆರವೇರಿತು.

ಆಸ್ಪತ್ರೆಯಿಂದ ನೇರವಾಗಿ ಮತಗಟ್ಟೆಗೆ ಬಂದು ಹಕ್ಕು ಚಲಾಯಿಸಿದ ಇನ್ಫೋಸಿಸ್ ನಾರಾಯಣ ಮೂರ್ತಿ



ಬೆಂಗಳೂರು, ಏ.26– ಬೆಂಗಳೂರು ಸೇರಿದಂತೆ ರಾಜ್ಯದ ಜನರಿಗೆ ಇನ್ಫೋಸಿಸ್ ಸಂಸ್ಥಾಪಕ ನಾರಾಯಣ ಮೂರ್ತಿ ಹಾಗೂ ಪತ್ನಿ, ರಾಜ್ಯಸಭಾ ಸದಸ್ಯೆ ಸುಧಾಮೂರ್ತಿ ಮಾದರಿಯಾಗಿದ್ದಾರೆ. ಅನಾರೋಗ್ಯದಿಂದ ಆಸ್ಪತ್ರೆಗೆ ದಾಖಲಾಗಿದ್ದ ನಾರಾಯಣಮೂರ್ತಿ ಡಿಸ್‌ಚಾರ್ಜ್ ಆಗಿ ನೇರವಾಗಿ ಸುಧಾಮೂರ್ತಿ ಜೊತೆ ಮತಗಟ್ಟೆಗೆ ಆಗಮಿಸಿ ತಮ್ಮ ಹಕ್ಕು ಚಲಾಯಿಸಿದ್ದಾರೆ. ಈ ಮೂಲಕ ಎಲ್ಲರಿಗೂ ಮಾದರಿಯಾಗಿದ್ದಾರೆ.

ನಾರಾಯಣ ಮೂರ್ತಿ ಅನಾರೋಗ್ಯದಿಂದ ಆಸ್ಪತ್ರೆಗೆ ದಾಖಲಾಗಿದ್ದರು. ಅವರ ಆರೋಗ್ಯ ಚೇತರಿಸಿಕೊಳ್ಳುತ್ತಿದೆ. ಆದರೆ ಇಂದೇ ಡಿಸ್‌ಚಾರ್ಜ್ ಆಗಿ ನೇರವಾಗಿ ಆಸ್ಪತ್ರೆಯಿಂದ ಮತಗಟ್ಟೆಗೆ ಆಗಮಿಸಿದ್ದಾರೆ. ಇಲ್ಲಿಂದ ಮನೆಗೆ ಕರೆದುಕೊಂಡು ಹೋಗಬೇಕು. ಹೆಚ್ಚಿನ ವಿಶ್ರಾಂತಿಯ ಅಗತ್ಯವಿದೆ ಎಂದು ಸುಧಾಮೂರ್ತಿ ಹೇಳಿದ್ದಾರೆ.

ಮತದಾನ ಶ್ರೇಷ್ಠ ದಾನ. ಮನೆಯಲ್ಲಿ ಕುಳಿತು ಮಾತನಾಡುತ್ತಾ ಸಮಯ ಕಳೆಯುವ ಬದಲು ಹೊರಬನ್ನಿ ನಿಮ್ಮ ಹಕ್ಕು ಚಲಾಯಿಸಿ ಎಂದು ಸುಧಾಮೂರ್ತಿ ಹೇಳಿದ್ದಾರೆ. ಜಯನಗರದಲ್ಲಿ ಸುಧಾಮೂರ್ತಿ ಹಾಗೂ ನಾರಾಯಣಮೂರ್ತಿ ತಮ್ಮ ಹಕ್ಕು ಚಲಾಯಿಸಿದ್ದಾರೆ. ನಾವು ಹಿರಿಯ ನಾಗರಿಕರು. ಆದರೆ ಸರದಿ ಸಾಲಿನಲ್ಲಿ ನಿಂತು ಮತದಾನ ಮಾಡಿದ್ದೇವೆ. ಯುವ ಸಮೂಹ ಹೆಚ್ಚಿನ ಸಂಖ್ಯೆಯಲ್ಲಿ ಮತದಾನ ಮಾಡಬೇಕು ಎಂದು ಮನವಿ ಮಾಡಿದ್ದಾರೆ.

ಅನಾರೋಗ್ಯದ ನಡುವೆ ಮಾಧ್ಯಮದ ಜೊತೆ ಮಾತನಾಡಿದ ನಾರಾಯಣಮೂರ್ತಿ, ಪ್ರತಿ 5 ವರ್ಷಕ್ಕೊಮ್ಮೆ ನಮಗೆ ಮತದಾನದ ಹಕ್ಕು ಸಿಗಲಿದೆ. ಯೋಚಿಸಿ, ಸೂಕ್ತ ವ್ಯಕ್ತಿಗೆ ಮತದಾನ ಮಾಡಿ. ಹೆಚ್ಚಿನ ಸಂಖ್ಯೆಯಲ್ಲಿ ಮತಗಟ್ಟೆಗೆ ಆಗಮಿಸಿ ಮತದಾನ ಮಾಡಿ ಎಂದು ನಾರಾಯಣಮೂರ್ತಿ ಮನವಿ ಮಾಡಿದ್ದಾರೆ.



ಮೈಸೂರಿನ ಉದಯಗಿರಿ ಡಿ.ಬನುಮಯ್ಯ ಪಾಲಿಟೆಕ್ನಿಕ್ ಕಾಲೇಜು ಮತಗಟ್ಟೆಯಲ್ಲಿ ಸಹೋದರಿಯರಾದ ನಿಶ್ಚಿತಾ ಹಾಗೂ ನಮ್ರತಾ ಮೊದಲ ಬಾರಿ ಮತ ಚಲಾಯಿಸಿ, ಸಂಭ್ರಮಿಸಿದರು.


ಕನ್ನಡ ಚಿತ್ರ ತಾರೆಯರ ಮತದಾನ ಸಂಭ್ರಮ
























ಬೆಂಗಳೂರು, ಏ.26(ಎಂಕೆ)– ರಾಜ್ಯದಲ್ಲಿ ನಡೆದ ಮೊದಲ ಹಂತದ ಲೋಕಸಭಾ ಚುನಾವಣೆಯಲ್ಲಿ ತಮ್ಮ ಹಕ್ಕು ಚಲಾಯಿಸಿದ ಸ್ಯಾಂಡಲ್‌ವುಡ್ ಸಿನಿ ತಾರೆಯರು ಪ್ರಜಾಪ್ರಭುತ್ವದ ಹಬ್ಬದಲ್ಲಿ ಭಾಗಿಯಾದರು.

ಹ್ಯಾಟ್ರಿಕ್ ಹೀರೋ ಡಾ.ಶಿವರಾಜ್‌ಕುಮಾರ್, ಗೀತಾ ಶಿವರಾಜ್‌ಕುಮಾರ್ ಬೆಂಗಳೂರು ಉತ್ತರ ಲೋಕಸಭಾ ಕ್ಷೇತ್ರದ ಬ್ಯಾಟರಾಯನಪುರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಮತ ಚಲಾಯಿಸಿದರೆ, ನಟ ರಾಘವೇಂದ್ರ ರಾಜ್‌ಕುಮಾರ್, ಅಶ್ವಿನಿ ಪುನೀತ್ ರಾಜ್‌ಕುಮಾರ್ ಸದಾಶಿವನಗರದಲ್ಲಿ ಪೂರ್ಣ ಪ್ರಜ್ಞಾ ಶಾಲೆ ಮಗತಟ್ಟೆಯಲ್ಲಿ ಮತದಾನ ಮಾಡಿದರು.

ಕನ್ನಡ ಚಿತ್ರ ರಂಗದ ಹಿರಿಯ ನಟ ಅನಂತ್‌ನಾಗ್, ಹಿರಿಯ ನಟಿ ಭಾರತೀ ವಿಷ್ಣುವರ್ಧನ್, ನಟರಾದ ಪ್ರಕಾಶ್ ರಾಜ್, ರಮೇಶ್ ಅರವಿಂದ್ ದಂಪತಿ, ಉಪೇಂದ್ರ, ದುನಿಯಾ ವಿಜಯ್, ದರ್ಶನ್, ಕಿಚ್ಚ ಸುದೀಪ್, ಅನಿರುದ್ಧ್, ರಾಕಿಂಗ್ ಸ್ಟಾರ್ ಯಶ್ ಮತ್ತು ರಾಧಿಕಾ ಪಂಡಿತ್, ಗೋಲ್ಡನ್ ಸ್ಟಾರ್ ಗಣೇಶ್ ಮತ್ತು ಶಿಲ್ಪಾ ಗಣೇಶ್, ರಕ್ಷಿತ್ ಶೆಟ್ಟಿ, ಬಿಗ್‌ಬಾಸ್ ಖ್ಯಾತಿಯ ನಮ್ರತಾ ಗೌಡ, ನಟಿಯರಾದ ಶ್ವೇತಾ ಚೆಂಗಪ್ಪ, ಸಪ್ತಮಿಗೌಡ ಮತ ಚಲಾಯಿಸಿದ್ದಾರೆ.

ಅರಸೀಕೆರೆ ತಾಲೂಕಿನ ಕಾಳೇನಹಳ್ಳಿಹಟ್ಟಿಯಲ್ಲಿ ನಟ ಡಾಲಿ ಧನಂಜಯ ಕುಟುಂಬದೊಂದಿಗೆ ಮತ ಚಲಾಯಿಸಿದರೆ, ನಟಿಯರಾದ ಶ್ವೇತಾ ಶ್ರೀವಾತ್ಸವ್, ರೀಷ್ಮಾ ನಾಣಯ್ಯ, ಶ್ವೇತಾ ಚಂಗಪ್ಪ ಇನ್ನಿತರ ಸಿನಿತಾರೆಯರು ತಮ್ಮ ಹಕ್ಕು ಚಲಾಯಿಸುವ ಮೂಲಕ ಮತದಾನ ಪ್ರಕ್ರಿಯೆಯಲ್ಲಿ ಪಾಲ್ಗೊಂಡು ಜವಾಬ್ದಾರಿ ತೋರಿದ್ದಾರೆ.



ಮೈಸೂರಿನ ಖ್ಯಾತ ವಸ್ತ್ರವಿನ್ಯಾಸಕಿ, ಮೈಸೂರ್ ಫ್ಯಾಷನ್ ವೀಕ್ ಸಂಸ್ಥಾಪಕಿ ಜಯಂತಿ ಬಲ್ಲಾಳ್ ಮತ ಚಲಾಯಿಸಿದರು.

ಮತಯಂತ್ರದಲ್ಲಿ ಸೀಲ್ ಆದ ಅಭ್ಯರ್ಥಿಗಳ ಭವಿಷ್ಯ!

ಮೈಸೂರು, ಏ.26(ಎಸ್‌ಬಿಡಿ)– ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಅಭ್ಯರ್ಥಿಗಳ ಭವಿಷ್ಯ ಮತಯಂತ್ರಗಳಲ್ಲಿ ಭದ್ರವಾಗಿದೆ.

ಬಿಜೆಪಿ–ಜೆಡಿಎಸ್ ಮೈತ್ರಿ ಅಭ್ಯರ್ಥಿಯಾಗಿ ಬಿಜೆಪಿ ಚಿಹ್ನೆಯಡಿ ಸ್ಪರ್ಧಿಸಿದ್ದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಕಾಂಗ್ರೆಸ್ ಅಭ್ಯರ್ಥಿ ಎಂ.ಲಕ್ಷ್ಮಣ ಸೇರಿದಂತೆ ಮೈಸೂರು–ಕೊಡಗು ಕ್ಷೇತ್ರದಿಂದ ಒಟ್ಟು 18 ಅಭ್ಯರ್ಥಿಗಳು ಕಣದಲ್ಲಿದ್ದರು. ನಿರಂತರ ಪ್ರಚಾರ ಕಾರ್ಯದಿಂದ ಬಸವಳಿದಿದ್ದ ಎಲ್ಲಾ ಅಭ್ಯರ್ಥಿಗಳೂ ಮತದಾನ ಮುಕ್ತಾಯವಾದ ಬಳಿಕ ವಿಶ್ರಾಂತಿ ಪಡೆಯುತ್ತಿದ್ದಾರೆ. ಆದರೆ ಇವಿಎಂನಲ್ಲಿ ಭದ್ರವಾಗಿರುವ ಫಲಿತಾಂಶ ಜೂ.6ರಂದು ಪ್ರಕಟವಾಗಲಿದ್ದು, ಆ ದಿನವನ್ನು ಅಭ್ಯರ್ಥಿಗಳು ಸೇರಿದಂತೆ ಆಯಾಯ ಕ್ಷೇತ್ರದ ರಾಜಕೀಯ ಕುತೂಹಲಶಾಲಿಗಳು ಕಾಯಬೇಕಿದೆ.

ಡಿ–ಮಸ್ಟರಿಂಗ್: ಶುಕ್ರವಾರ ಸಂಜೆ 6 ಗಂಟೆಗೆ ಮತದಾನ ಮುಕ್ತಾಯವಾದ ನಂತರ ಮತಗಟ್ಟೆ ಸಿಬ್ಬಂದಿ ಇವಿಎಂಗಳನ್ನು ಸೀಲ್ ಮಾಡಿ, ಆಯಾಯ ಮಸ್ಟರಿಂಗ್ ಕೇಂದ್ರಗಳಿಗೆ ಸುರಕ್ಷಿತವಾಗಿ ಸಾಗಿಸಿದರು. ಅಲ್ಲಿ ಪರಿಶೀಲಿಸಿದ ನಂತರ ಮತ ಎಣಿಕೆ ಕೇಂದ್ರವಾದ ಮೈಸೂರಿನ ವಿನಾಯಕನಗರ (ಪಡುವಾರಹಳ್ಳಿ)ದ ಮಹಾರಾಣಿ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜಿನ ಸ್ಟ್ರಾಂಗ್ ರೂಂನಲ್ಲಿ ಸುರಕ್ಷಿತವಾಗಿ ಇಡಲಾಯಿತು. ಕೆಲ ಮಸ್ಟರಿಂಗ್ ಕೇಂದ್ರಗಳಿಂದ ಇವಿಎಂ ತರುವುದು ವಿಳಂಬವಾಗಿದ್ದರಿಂದ ರಾತ್ರಿ ಬಹುಹೊತ್ತಿನವರೆಗೂ ಪ್ರಕ್ರಿಯೆ ನಡೆಯಿತು. ಸ್ಟ್ರಾಂಗ್ ರೂಂಗೆ ಇವಿಎಂಗಳನ್ನು ತಂದ ಸಿಬ್ಬಂದಿಗಳಿಗೆ ಗುಲಾಬಿ ನೀಡಿ, ಸ್ವಾಗತಿಸಿದರು. ಸ್ಟ್ರಾಂಗ್ ರೂಂಗೆ ದಿನದ 24 ಗಂಟೆಯೂ ಹಲವು ಸುತ್ತಿನ ಪೊಲೀಸ್ ಭದ್ರತೆ ಒದಗಿಸಲಾಗಿದೆ.



ಚಾಮುಂಡೇಶ್ವರಿ, ಕೃಷ್ಣರಾಜ, ಚಾಮರಾಜ, ನರಸಿಂಹರಾಜ, ಪಿರಿಯಾಪಟ್ಟಣ, ಹುಣಸೂರು, ಮಡಿಕೇರಿ ಹಾಗೂ ವಿರಾಜಪೇಟೆ ವಿಧಾನಸಭಾ ಕ್ಷೇತ್ರಗಳನ್ನೊಳಗೊಂಡ ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದಲ್ಲಿ 2192 ಸಾಮಾನ್ಯ ಮತಗಟ್ಟೆ, 10 ಆಕ್ಸಿಲರಿ ಮತಗಟ್ಟೆ ಸೇರಿದಂತೆ 2202 ಮತಗಟ್ಟೆಗಳನ್ನು ನಿರ್ಮಿಸಿ, ತಲಾ 2 ಬ್ಯಾಲೆಟ್ ಯೂನಿಟ್‌ನಂತೆ ಒಟ್ಟು 5742 ಬ್ಯಾಲೆಟ್ ಯೂನಿಟ್, 3036 ಕಂಟ್ರೋಲ್ ಯೂನಿಟ್, 3136 ವಿವಿ ಪ್ಯಾಟ್‌ಗಳನ್ನು ಒದಗಿಸಲಾಗಿತ್ತು.

ಮತಗಟ್ಟೆಯಲ್ಲಿ ವಿಶೇಷ ಉಡುಗೆ–ತೊಡುಗೆಯಿಂದ ಕಂಗೊಳಿಸಿದ ಸಿಬ್ಬಂದಿ



ಪಿಂಕ್ ಮತ್ತು ನೀಲಿ ಬಣ್ಣದ ಸಮವಸ್ತ್ರದಲ್ಲಿ ಮತ ಚಲಾಯಿಸಿದ ಸ್ವಸಹಾಯ ಸಂಘಗಳ ಸದಸ್ಯರು.

ಮೈಸೂರು, ಏ.26(ಎಸ್‌ಬಿಡಿ)– ಚಾಮರಾಜನಗರ ಲೋಕಸಭಾ ಕ್ಷೇತ್ರ ವ್ಯಾಪ್ತಿಯ ನಂಜನಗೂಡು ತಾಲೂಕಿನ ವಿಶೇಷ ಮತಗಟ್ಟೆಗಳಲ್ಲಿ ಸಿಬ್ಬಂದಿಗಳ ವಿಭಿನ್ನ ಉಡುಗೆ ಗಮನ ಸೆಳೆಯಿತು.

ತಾಂಡವಪುರ ಹಾಗೂ ಹುಲ್ಲಹಳ್ಳಿಯ ಎತ್ನಿಕ್ ಮತಗಟ್ಟೆಗಳ ಸಿಬ್ಬಂದಿ ಶ್ವೇತ ವರ್ಣದ ಶರ್ಟ್–ಪಂಚೆ, ಶಲ್ಯ ಹಾಗೂ ಮೈಸೂರು ಪೇಟ ತೊಟ್ಟು ಕಾರ್ಯ ನಿರ್ವಹಿಸಿದರು. ಮಹಿಳಾ ಮತದಾರರಿಗೆಂದು ವಿಶೇಷವಾಗಿ ವಿನ್ಯಾಸಗೊಳಿಸಿದ್ದ ಸಖಿ ಮತಗಟ್ಟೆಗಳ ಸಿಬ್ಬಂದಿ ಗುಲಾಬಿ ಬಣ್ಣದ ಉಡುಗೆ ತೊಟ್ಟು ಗಮನ ಸೆಳೆದರು. ಬಂಕಹಳ್ಳಿಯ ಹಾಡಿ ಮತಗಟ್ಟೆಗಳ ಸಿಬ್ಬಂದಿ ಪುಕ್ಕದ ಕಿರೀಟ ಧರಿಸಿ, ನಡುವಿಗೆ ಹಸಿರು ಸೊಪ್ಪನ್ನು ಸುತ್ತಿಕೊಂಡು ಕಾರ್ಯ ನಿರ್ವಹಿಸಿದರು. ದೇವೀರಮ್ಮನಹಳ್ಳಿ ಪಾಳ್ಯದ ಯುವ ಮತಗಟ್ಟೆಯ ಸಿಬ್ಬಂದಿ ಗರಿ ಗರಿ ಕೋಟು ಧರಿಸಿದ್ದು ಆಕರ್ಷಕವಾಗಿತ್ತು. ಸಿಂಧುವಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕುರಹಟ್ಟಿ ಗ್ರಾಮದ ಸಖಿ ಮತಗಟ್ಟೆಗೆ ಸ್ವಸಹಾಯ ಸಂಘಗಳ ಮಹಿಳೆಯರು ಒಂದೇ ಬಣ್ಣದ ಸೀರೆ ಧರಿಸಿ, ಹಕ್ಕು ಚಲಾಯಿಸಿದರು.

ಹೀಗೆ ವಿಶೇಷ ಮತಗಟ್ಟೆಗಳ ಚುನಾವಣಾ ಸಿಬ್ಬಂದಿಗಳು ವಿಷಯಾಧಾರಿತ ಉಡುಗೆ ತೊಟ್ಟು ಕರ್ತವ್ಯಕ್ಕೆ ನಿರ್ವಹಿಸಿದ್ದು, ಪ್ರಜಾಪ್ರಭುತ್ವ ಹಬ್ಬದ ಸಂಭ್ರಮವನ್ನು ಹೆಚ್ಚಿಸಿತ್ತು.



ಎತ್ನಿಕ್ ಮತಗಟ್ಟೆ ಸಿಬ್ಬಂದಿ ಶ್ವೇತ ವರ್ಣದ ಧಿರಿಸಿನಲ್ಲಿ ಕಂಗೊಳಿಸಿದರು.

PUBLIC NOTICE

Notice is given to the general public at large that my client is negotiating and intending to purchase the notice schedule property from its owner **Mr. KESHAV. J. MADANBHAVI** Son of Jayaram Adiveppa Madanbhavi, aged about 56 years, # 56A, 11th Cross, Rajajinagara 1st Block, Bengaluru 560010. Any individuals, banks, financial institutions, agreement holders etc having any objections for my client entering into any transaction with respect to the schedule property is hereby required to communicate their objections in writing to my office with documentary evidence within **07** days from the date of this. publication. In the absence of any authenticated objections/claims, my client will proceed to complete the transaction of sale and no claim in this regard will be entertained thereafter.

SCHEDULE OF THE PROPERTY

All that piece and parcel of residential Vacant Site Property bearing Site No. 264, situated at First Block, Jayalakshmipuram Main Road, Devaraja Mohalla, Mysuru 570012 measuring **East to West 18.00 Meters** and **North to South 12.00 meters** in all measuring 216 square meters bounded by: East By: Site No. 243, and 242, West By: Road, 9 meters North By: Site No. 263, South By: Site No. 265.

Sd/- **DINESH SOLANKI**, B.Com, LL.M
Advocate #1197, 12/2, KRB Road, Chamarajapuram, Mysuru
Ph: 9343430011.
advdineshsolanki@gmail.com

Date: 27-04-2024.